ಕರ್ನಾಟಕ ಸರ್ಕಾರ

# ಸಿರಿ ಕನ್ನಡ

## ದ್ವಿತೀಯ ಭಾಷಾ ಕನ್ನಡ ಪಠ್ಯಪುಸ್ತಕ

(ಪರಿಷ್ಕೃತ)

೬

## ಆರನೆಯ ತರಗತಿ

©KTBS Not to be republished

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**

೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ಮೂರನೆಯ ಹಂತ,
ಬೆಂಗಳೂರು - ೫೬೦೦೮೫

## ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು :**

**ಶ್ರೀ ರಾಮಣ್ಣ ಹವಳೆ**

ನಿವೃತ್ತ ಉಪನ್ಯಾಸಕರು, ನೀಲಕಂಠೇಶ್ವರ ನಗರ, ರಾಯಚೂರು.

**ಸದಸ್ಯರು :**

**ಡಾ. ಎಸ್. ವಿಜಯಮಾಲಾ,** ಸಹ ಶಿಕ್ಷಕರು, ಎಂ.ಎಸ್. ರಾಮಯ್ಯ ಪ್ರೌಢಶಾಲೆ ಮತ್ತಿಕೆರೆ. ಬೆಂಗಳೂರು-೫೪.

**ಶ್ರೀ ಎಸ್.ಎ ವೆಂಕಟಪ್ಪ,** ಸ.ಶಿ. ಬಾಲಕಿಯರ ಸರ್ಕಾರಿ ಪದವಿ ಪೂರ್ವಕಾಲೇಜು, ಮಾಲೂರು, ಕೋಲಾರ ಜಿಲ್ಲೆ .

**ಶ್ರೀ ಲಕ್ಷ್ಮಣ ಲೋಕರೆ,** ಸಹ ಶಿಕ್ಷಕರು, ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಸ್ಟೇಶನ್ ರಸ್ತೆ, ರಾಯಚೂರು.

**ಶ್ರೀ ಹೊನ್ನೇಗೌಡ,** ಸಿ.ಆರ್.ಪಿ. ಮಗ್ಗೆ ಆಲೂರು ತಾ, ಹಾಸನ ಜಿಲ್ಲೆ.

**ಶ್ರೀ ಎಚ್. ಎಲ್. ಹಾಲೇಶ,** ಕನ್ನಡ ಉಪನ್ಯಾಸಕರು, ಎಸ್.ಬಿ.ಸಿ. ಮಹಿಳಾ ಕಾಲೇಜು, ದಾವಣಗೆರೆ.

**ಕಲಾವಿದರು :**

**ಶ್ರೀ ಪಿ.ಎ.ಬಿ. ಈಶ್ವರ,** ಚಿತ್ರಕಲಾ ಶಿಕ್ಷಕರು, ಹಮದರ್ದ ಪ್ರೌಢಶಾಲೆ, ರಾಯಚೂರು.

**ಪರಿಶೀಲಕರು :**

**ಡಾ. ಕೃಷ್ಣಯ್ಯ,** ಪ್ರಾಧ್ಯಾಪಕರು, ಆರ್.ವಿ. ಟೀಚರ್ಸ್ ಕಾಲೇಜು, ೨ನೇ ಬ್ಲಾಕ್, ಜಯನಗರ, ಬೆಂಗಳೂರು-೧೧

**ಸಂಪಾದಕ ಮಂಡಳಿ ಸದಸ್ಯರು :**

೧. **ಪ್ರೊ. ಚಂದ್ರಶೇಖರ ಪಾಟೀಲ್,** ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ.ನಗರ, ಬೆಂಗಳೂರು

೨. **ಡಾ. ಕೆ. ಮರುಳಸಿದ್ದಪ್ಪ,** ಸಾಹಿತಿಗಳು, ನಂ. ೧೩೭, ೧೨ ನೇ ಕ್ರಾಸ್, ಜೆ.ಪಿ, ನಗರ, ೨ನೇ ಹಂತ, ಬೆಂಗಳೂರು

೩. **ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, ರಾಗಿಣಿ, ಹಂಪಿನಗರ, ಬೆಂಗಳೂರು.

೪. **ಪ್ರೊ. ಅ.ರಾ. ಮಿತ್ರ,** ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

೫. **ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

**ಮುಖ್ಯ ಸಂಯೋಜಕರು :**

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ,**

ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

೧. **ಶ್ರೀ ನಾಗೇಂದ್ರ ಕುಮಾರ್** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

೨. **ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

©KTBS Not to be republished

# ಮುನ್ನುಡಿ

೨೦೦೫ ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು ೬ ರಿಂದ ೧೦ ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

೨೦೦೫ ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಆವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರ ದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಆವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥ ಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾ ಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರ ಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲ್ಯಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ ಹಾಗೂ ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಲಾಗಿದೆ. ಈ ಸಾಮರ್ಥ್ಯಗಳು ಮಕ್ಕಳಲ್ಲಿ ಬೆಳೆದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲ್ಯಗಳ

©KTBS
Not to be republished

ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲ್ಯಗಳ ಸಂವರ್ಧನೆಯೇ ಕಲಿಕೆ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿ ವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ  ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

ಪ್ರೊ. ಜಿ. ಎಸ್. ಮುಡಂಬಡಿತ್ತಾಯ
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-85

ನಾಗೇಂದ್ರಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೮೫

©KTBS Not to be republished

# ಸಮಕ್ಷಮ

ಭಾರತ ಸರ್ಕಾರದ ೨೦೦೫ ರ ರಾಷ್ಟ್ರೀಯ ಶಾಲಾ ಪಠ್ಯಕ್ರಮದ ಚೌಕಟ್ಟಿನಲ್ಲಿ ಕರ್ನಾಟಕ ಸರ್ಕಾರವು ಪಠ್ಯ ಸಮಷ್ಟಿಯನ್ನು ಪರಿಷ್ಕರಿಸಿದೆ. ಅದರನ್ವಯ ಕರ್ನಾಟಕ ಸರ್ಕಾರ ರಾಜ್ಯ ಭಾಷೆಯನ್ನು ಪರಿಚಯಿಸುವ ಹಿನ್ನೆಲೆಯಲ್ಲಿ ಒಂದನೆಯ ತರಗತಿಯಿಂದ ೪ ನೆಯ ತರಗತಿಯವರೆಗೆ ಅನೌಪಚಾರಿಕವಾಗಿ ಕನ್ನಡವನ್ನು ಬೋಧಿಸಲಾಗುತ್ತಿದೆ. ಆದರೆ ಔಪಚಾರಿಕವಾಗಿ ೫ ನೆಯ ತರಗತಿಯಿಂದ ಕನ್ನಡವನ್ನು ದ್ವಿತೀಯಭಾಷೆಯಾಗಿ ಕಲಿಸುತ್ತಿದ್ದಾರೆ. ಈಗ ೬ ನೆಯ ತರಗತಿಯ ವಿದ್ಯಾರ್ಥಿಗಳ ಭಾಷಾ ಕಲಿಕೆಗೆ ವ್ಯವಸ್ಥಿತವಾದ ಪಠ್ಯ ರಚಿಸುವ ಪ್ರಯತ್ನವಿದು. ಈ ಪಠ್ಯ ಪುಸ್ತಕ ರಚನೆಯ ಸಂದರ್ಭದಲ್ಲಿ ಮಕ್ಕಳ ವಯೋಮಟ್ಟ, ಮಾನಸಿಕ ಮಟ್ಟ, ಅವರು ಈಗಾಗಲೇ ಕರಗತಗೊಳಿಸಿಕೊಂಡಿರುವ ಕನ್ನಡ ಭಾಷಾಶಕ್ತಿ ಮತ್ತು ಶಬ್ದ ಸಂಪತ್ತನ್ನು ಪ್ರಮುಖವಾಗಿ ಗಮನಿಸಲಾಗಿದೆ. ಮೂಲತ: ಇದು ಶಿಶು ಕೇಂದ್ರಿತ ಪಠ್ಯ.

ಮಗು ಕೇಂದ್ರಿತ ಈ ಪಠ್ಯದಲ್ಲಿ ಮಗುವಿನ ಭಾವಕೋಶ ವಿಕಾಸಕ್ಕೆ ಆದ್ಯತೆ ನೀಡಲಾಗಿದೆ. ಆ ಮಗು ಬಯಸುವ ಕಥೆಗಳು ಸಾಹಸ, ಗುನುಗುನಿಸುವ ಹಾಡು ಮತ್ತು ಹೊರಹೊಮ್ಮುವ ಮಾತುಗಳಿಗೆ, ಇಷ್ಟದ ಭಾಷಾ ಚಟುವಟಿಕೆಗಳಿಗೆ ಈ ಪಠ್ಯ ಸಾಧನವಾಗಿದೆ. ವೈಚಾರಿಕತೆಗೆ ಮಾರ್ಗದರ್ಶಿಯಾಗಿದ್ದರೆ ಆಲೋಚನೆಗಳಿಗೆ ತಲಸ್ಪರ್ಶಿ ಆಧಾರ ಒದಗಿಸಿದೆ. ಅನೇಕ ಪ್ರಯೋಗಗಳಿಂದ ಕೂಡಿದ ಉದ್ದೇಶ ಪೂರ್ವಕ ರಚನೆಯಾಗಿದೆ. ಕನ್ನಡದ ಪರಂಪರೆ, ಪ್ರಸ್ತುತತೆ ಮತ್ತು ಪುನರ್ ಮೌಲ್ಯೀಕರಣದೊಂದಿಗೆ ಪಠ್ಯವನ್ನು ಆಯೋಜಿಸಲಾಗಿದೆ.

ಪಾಠಗಳ ಬರವಣಿಗೆಯು ಸರಳವೂ ಚೇತೋಹಾರಿಯೂ ರೋಚಕವೂ ಆಗಿದ್ದು ಮಗುವಿನ ಮನೋಲ್ಲಾಸದ ಮುಖ್ಯ ಗುರಿ ಹೊಂದಿದೆ. ಜೀವನ ಮೌಲ್ಯಗಳನ್ನು ರಕ್ತಗತ ಮಾಡುವ ದಿಸೆಯಲ್ಲಿ ಹೆಣೆಯಲಾಗಿದೆ. ಇವೆಲ್ಲವುಗಳ ಪ್ರಮುಖ ಉದ್ದೇಶವು ಮಕ್ಕಳು ಕನ್ನಡ ಕಲಿಕೆಯನ್ನು ಆನಂದದಿಂದ ಸ್ವೀಕರಿಸಬೇಕು. ದ್ವಿತೀಯ ಭಾಷೆಯ ಪ್ರಮುಖ ಗುರಿಯಾದ ಸಂವಹನ ಶಕ್ತಿ ಹೆಚ್ಚಿಸುವುದು.ಓದುವುದು, ಆಲಿಸಿ ಅರ್ಥೈಸುವುದು ಹಾಗೂ ಸ್ವತ: ಕನ್ನಡದಲ್ಲಿ ಆಲೋಚಿಸಿ ಹೊಸ ಮಾತು, ಹೊಸ ಕಥೆ, ಹೊಸ ರಚನೆಗಳನ್ನು ಮಕ್ಕಳು ಮಾಡುವಂತೆ ಮಾಡುವುದು ಆಗಿದೆ. ಅದಕ್ಕಾಗಿ ವಿಶೇಷವಾಗಿ ರಚಿತವಾದ ಅಭ್ಯಾಸ ಚಟುವಟಿಕೆಗಳನ್ನು , ಭಾಷಾಭ್ಯಾಸ ಹಾಗೂ ಭಾಷಾ ಚಟುವಟಿಕೆಗಳತ್ತ ಮಕ್ಕಳು ಹಾಗೂ ಅಧ್ಯಾಪಕರು ಹೆಚ್ಚಿನ ಗಮನ ನೀಡಬೇಕು. **ದಯವಿಟ್ಟು ಪಠ್ಯರಚನಾ ವಿವರ ತ:ಖ್ತೆಯನ್ನು ಗಮನಿಸಿದರೆ ಪಠ್ಯರಚನೆಯ ತತ್ವ ಹಾಗೂ ಬೋಧನಾ ರೀತಿ ಮನದಟ್ಟಾಗುವುದು**. ಸ್ವ ಕಲಿಕೆ ನಮ್ಮ ಗುರಿ. ನಮ್ಮೆಲ್ಲ ಕಸರತ್ತುಗಳು ಪ್ರಯತ್ನಗಳು ಅದರ ಸುತ್ತಮುತ್ತ ಇವೆ. ಇದನ್ನು ಅಧ್ಯಾಪಕರು, ಪಾಲಕರು ಅರಿಯಬೇಕು. ಪಠ್ಯದ ಜೊತೆಗೆ ಮಗು ಒಂದಾಗಬೇಕು. ಅದು ನಮ್ಮ ಆಸೆ. ಈ ದಿಸೆಯಲ್ಲಿ 'ನಿನ್ನಲೂ ಅದ್ಭುತ ಶಕ್ತಿಯಿದೆ', 'ಮಲ್ಲಕಂಬ', 'ಭಿತ್ತಿಪತ್ರ', 'ನಮ್ಮೂರ ಕೆರೆ', 'ಕೂಗುತಿದೆ ಪಕ್ಷಿ', 'ಎದೆಗುಂದದ ವೀರರು' ಹೆಸರಿಸಬಹುದಾದ ಪಾಠಗಳು. ಮಕ್ಕಳ ಮನೋವ್ಯಾಪಾರವನ್ನು ಹಿಡಿದಿಡುವಲ್ಲಿ ಎಲ್ಲ ಕವಿತೆಗಳು ಸಶಕ್ತವಾಗಿವೆ. ಅವನ್ನು ಲಯಬದ್ಧವಾಗಿ ಹಾಡಬಹುದು. ಮಕ್ಕಳು ಈ ಪಠ್ಯವನ್ನು ಸದಾ ಗುನುಗುನಿಸುತ್ತ ಭಾವನಾತ್ಮಕ ಬದುಕನ್ನು ಕಟ್ಟಿಕೊಳ್ಳುವಂತೆ ರಚಿಸಲಾಗಿದೆ.

**ಪಾಠ ಪ್ರಾರಂಭಿಸುವ ಮುನ್ನ ಪಾಠ ಪ್ರವೇಶವನ್ನು ಅಧ್ಯಾಪಕರು ಓದಿಕೊಂಡು ಸೂಕ್ತ ಚಟುವಟಿಕೆಗಳನ್ನು ಸಿದ್ಧಪಡಿಸಿಕೊಳ್ಳಬೇಕು.**

ಪಠ್ಯ ಏನೇ ರಚನೆಯಾಗಿದ್ದರೂ ಆ ಅಕ್ಷರಗಳಿಗೆ ಜೀವ ತುಂಬುವವರು ಅಧ್ಯಾಪಕರು. ಅವರು ತಮ್ಮ ಶಕ್ತಿ ಸಾಮರ್ಥ್ಯವನ್ನು ಒರೆಗೆ ಹಚ್ಚಿ ದುಡಿದಾಗ ಪರಭಾಷಿಕರಿಗೆ, ಕನ್ನಡ ಪರಿಸರದಲ್ಲಿ ಮಾತಾಡಲು ಸಾಧ್ಯ. ಈ ಜವಾಬ್ದಾರಿಗಳನ್ನು ಅಧ್ಯಾಪಕರ ಮೇಲಿನ ವಿಶ್ವಾಸದಿಂದ ಅವರಿಗೆ ಒಪ್ಪಿಸುವೆನು.

ಪಠ್ಯಪುಸ್ತಕ ರಚನೆಯಲ್ಲಿ ನೆರವಾದ ಸಮಿತಿಯ ಸನ್ಮಿತ್ರ ಸದಸ್ಯರ ಬೆಂಬಲ, ವಿಶ್ವಾಸ, ಸಹಕಾರ ಮತ್ತು ಹೃದಯವಂತಿಕೆಯನ್ನು ನೆನೆಯುತ್ತೇನೆ. ಚಿತ್ರ ಕಲಾವಿದರ ಶ್ರಮ ಸಾರ್ಥಕವಾಗಿದೆ.

ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕರು , ನಿರ್ದೇಶಕರು, ಸಂಯೋಜಕರು, ಉಪನಿರ್ದೇಶಕರು ಹಾಗೂ ಹಿರಿಯ ಸಹಾಯಕ ನಿರ್ದೇಶಕರು, ಅವರ ಸಿಬ್ಬಂದಿ ಮತ್ತು ನಮ್ಮೀ ಕಾರ್ಯಕ್ಕೆ ಸಕಲ ಸಹಕಾರ ಮಾಡಿಕೊಟ್ಟ ಎಲ್ಲರಿಗೂ ವಿಶ್ವಾಸ ಪೂರ್ವಕ ವಂದನೆಗಳು.

ರಾಮಣ್ಣ ಹವಳೆ
ಅಧ್ಯಕ್ಷರು
ಪಠ್ಯಪುಸ್ತಕ ರಚನಾ ಸಮಿತಿ



©KTBS Not to be republished

# ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು**

**ಪ್ರೊ. ಬರಗೂರು ರಾಮಚಂದ್ರಪ್ಪ**
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫

**ಅಧ್ಯಕ್ಷರು**

**ಡಾ. ಕೆಂಪೇಗೌಡ**
ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬

**ಸದಸ್ಯರು**

**ಡಾ. ಗಣೇಶ್ ಜಿ. ಎಂ.**
ಸಹಾಯಕ ಪ್ರಾಧ್ಯಾಪಕರು, ಎಂ.ಎಲ್.ಎಂ.ಎನ್.
ಶಿಕ್ಷಣ ಮಹಾವಿದ್ಯಾಲಯ, ಜ್ಯೋತಿನಗರ, ಚಿಕ್ಕಮಗಳೂರು.

**ಡಾ. ಕೆ. ಷರೀಫಾ**
ಲೇಖಕಿ, ನಂ.೫/ಎ ೧ನೇ ಮಹಡಿ, ೧ನೇ ಬ್ಲಾಕ್,
೨ನೇ ಕ್ರಾಸ್, ಆರ್.ಟಿ. ನಗರ, ಬೆಂಗಳೂರು.

**ಶ್ರೀ ನಾಗರಾಜಾಚಾರಿ**
ಕನ್ನಡ ಶಿಕ್ಷಕರು, ಸರ್ಕಾರಿ ಉರ್ದು ಪ್ರೌಢಶಾಲೆ,
ಡಾ.ಟಿ.ಸಿ.ಎಂ. ರಾಯನ್ ರಸ್ತೆ, ಬೆಂಗಳೂರು.

**ಡಾ. ಬಂಗಾರಿಮಠ ಎಸ್. ವಿ.**
ಮುಖ್ಯಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ಮುಡಕಲಕಟ್ಟಿ, ಧಾರವಾಡ ಜಿಲ್ಲೆ.

**ಶ್ರೀ ಪ್ರಕಾಶ್ ಎಸ್.**
ಸಿ.ಆರ್.ಪಿ. ಕ್ಷೇತ್ರ ಸಂಪನ್ಮೂಲ ಕೇಂದ್ರ, ಮದ್ದೂರು.
ಮಂಡ್ಯ ಜಿಲ್ಲೆ.

**ಶ್ರೀ ವೆಂಕಟೇಶ್ ಡಿ. ಎನ್.**
ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ವಲಯ.

## ಉನ್ನತ ಪರಿಶೀಲನಾ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್**
ನಿವೃತ್ತ ಪ್ರಾಧ್ಯಾಪಕರು, #೭, ೧೫ನೇ ಕ್ರಾಸ್, ೫ನೇ ಫೇಸ್,
ಜೆ.ಪಿ.ನಗರ, ಬೆಂಗಳೂರು-೭೮

**ಡಾ. ಜಿ.ಆರ್. ತಿಪ್ಪೇಸ್ವಾಮಿ**
ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು-೬

**ಡಾ. ಸೈಯದ್ ಜಮೀರ್ ಉಲ್ಲಾಷರೀಫ್**
ನಿವೃತ್ತ ಪ್ರಾಂಶುಪಾಲರು, ಭಟ್ಕಳ,
ಉತ್ತರ ಕನ್ನಡ ಜಿಲ್ಲೆ.

**ಡಾ. ಯಲ್ಲಪ್ಪ ಹಿಮ್ಮಡಿ**
ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು,
ರಾಯಬಾಗ, ಬೆಳಗಾವಿ ಜಿಲ್ಲೆ.

**ಡಾ. ಕಲಾವತಿ**
ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಬಳ್ಳಾರಿ.

**ಡಾ. ಪ್ರಶಾಂತ್ ನಾಯಕ್**
ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾ ವಸಂತ**
ಸಹಪ್ರಾಧ್ಯಾಪಕರು ಕನ್ನಡವಿಭಾಗ, ತುಮಕೂರು
ವಿಶ್ವವಿದ್ಯಾಲಯ, ತುಮಕೂರು.

**ಡಾ. ಸತ್ಯನಾರಾಯಣ ಎಚ್.ಎಸ್.**
ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು,
ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ**

**ಶ್ರೀ ಗೋಪಾಲಕೃಷ್ಣ ಹೆಚ್.ಎನ್** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫
**ಶ್ರೀ ಎಸ್.ಜಿ.ನಾಗೇಶ್** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫

**ಕಾರ್ಯಕ್ರಮ ಸಂಯೋಜಕರು**

**ಎ. ಚಂದ್ರಶೇಖರ್‌ಬಾಬು,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫

©KTBS Not to be republished

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ಧರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕ ಮೌಲ್ಯಗಳು, ವ್ಯಕ್ತಿತ್ವ ವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪. ೧೧. ೨೦೧೪ ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿ ದೋಷ, ಆಶಯ ದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನುಆಧರಿಸಿ ರಾಜ್ಯ ಪಠ್ಯಪುಸ್ತಕಗಳ

© KTBS Not to be republished

ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**(ಶ್ರೀ ಗೋಪಾಲಕೃಷ್ಣ.ಹೆಚ್.ಎನ್)**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫

**(ಪ್ರೊ. ಬರಗೂರು ರಾಮಚಂದ್ರಪ್ಪ)**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು–೮೫

©KTBS Not to be republished

# ಪರಿವಿಡಿ


| ಸಂಖ್ಯೆ | ಪಾಠಗಳು | ಕೃತಿಕಾರರು | ಪುಟ ಸಂಖ್ಯೆ |
|---|---|---|---|
| | ಭಾಗ – ೧. ಪೂರ್ವ ಸಿದ್ಧತಾ ಪಾಠಗಳು | | |
| ೦೧ | ಚಿತ್ರ ನೋಡಿ, ಭಾವ–ಸಂಬಂಧ ತಿಳಿ | | ೦೧ |
| ೦೨ | ಚಿತ್ರ ನೋಡಿ, ವಿವರ ಹೇಳು | | ೦೨ |
| ೦೩ | ಚಿತ್ರ ನೋಡಿ, ಕಥೆ ಹೇಳು | | ೦೩ |
| ೦೪ | ಭಿತ್ತಿಪತ್ರ ನೋಡಿ, ಘೋಷಣೆಗಳನ್ನು ಪೂರ್ಣಮಾಡು | | ೦೪ |
| | ಭಾಗ – ೨. ಗದ್ಯ – ಪದ್ಯ ಪಾಠಗಳು | | |
| ೦೧ | ತೋಳ ಬಂತು ತೋಳ (ಗದ್ಯ) | – ಸಂಪಾದಿತ | ೦೫ – ೦೭ |
| ೦೨ | ಬಾ ಬೇಗ ಸೂರ್ಯ (ಪದ್ಯ) | – ಮನು ಬಳಿಗಾರ | ೦೮ – ೧೧ |
| ೦೩ | ಕೂಗುತಿದೆ ಪಕ್ಷಿ (ಗದ್ಯ) | – ಸಂಪಾದಿತ | ೧೨ – ೨೧ |
| ೦೪ | ನನ್ನ ದೇಶ ನನ್ನ ಜನ (ಪದ್ಯ) | – ಚೆನ್ನವೀರ ಕಣವಿ | ೨೨ – ೨೬ |
| ೦೫ | ಕೊಡಿ ನನ್ನ ಬಾಲ್ಯವ (ನಾಟಕ) | – ಮಾಲತಿ ಪಟ್ಟಣಶೆಟ್ಟಿ | ೨೭ – ೩೭ |
| ೦೬ | ನಮ್ಮೂರ ಕೆರೆ (ಪದ್ಯ) | – ಚಿದಾನಂದ ಸಾಲಿ | ೩೮ – ೪೪ |
| ೦೭ | ಪಂಚತಂತ್ರ (ಗದ್ಯ) | – ಎಂ. ಗೋಪಾಲಕೃಷ್ಣ ಅಡಿಗ | ೪೫ – ೫೧ |
| ೦೮ | ಕನ್ನಡಮ್ಮ (ಪದ್ಯ) | – ಭಾಗೀರಥಿ ಹೆಗಡೆ | ೫೨ – ೫೬ |
| ೦೯ | ಎದೆಗುಂದದ ಧೀರರು (ಗದ್ಯ) | – ಸಂಪಾದಿತ | ೫೭ – ೬೪ |
| ೧೦ | ಐಕ್ಯಗಾನ (ಪದ್ಯ) | – ಜಿ. ಎಸ್. ಶಿವರುದ್ರಪ್ಪ | ೬೫ – ೭೦ |


©KTBS Not to be republished

| | | |
|---|---|---|
| ೧೧ | ಸಾಹಸಿ ಮೊನಲಿಸಾ (ಗದ್ಯ) – ಸಂಪಾದಿತ | ೭೧ – ೭೯ |
| ೧೨ | ಸುಂಟರಗಾಳಿ (ಪದ್ಯ) – ಕಯ್ಯಾರ ಕಿಞ್ಞಣ್ಣರೈ | ೮೦ – ೮೪ |
| ೧೩ | ಮಲ್ಲಕಂಬ (ಗದ್ಯ) – ಸಂಪಾದಿತ | ೮೫ – ೯೦ |
| ೧೪ | ವೀರರಾಣಿ ಕೆಳದಿ ಚೆನ್ನಮ್ಮ (ನಾಟಕ) – ಸಮಿತಿ ರಚನೆ | ೯೧ – ೯೮ |
| ೧೫ | ಚುಟುಕುಗಳು (ಪದ್ಯ) – ದಿನಕರ ದೇಸಾಯಿ | ೯೯ – ೧೦೨ |
| ೧೬ | ದೇಶಪ್ರೇಮಿ ಕವಿ ಇಕ್ಬಾಲ್ (ಗದ್ಯ) – ಕೋ. ಚೆನ್ನಬಸಪ್ಪ | ೧೦೩ – ೧೦೯ |
| ೧೭ | ನಿನ್ನಲ್ಲೂ ಅದ್ಭುತ ಶಕ್ತಿಯಿದೆ (ಗದ್ಯ) – ಸಂಪಾದಿತ | ೧೧೦ – ೧೧೯ |
| | **ಭಾಗ – ೩. ಪೂರಕ ಓದು** | |
| ೦೧ | ಪತ್ರ ಲೇಖನ | ೧೨೦ – ೧೨೨ |
| ೦೨ | ಪುಣ್ಯಕೋಟಿ | ೧೨೩ – ೧೨೫ |
| ೦೩ | ಜೀವನೋತ್ಸಾಹ | ೧೨೫ |
| ೦೪ | ತಾಯಿಯ ನೆನಪು – ಆಕಾಶ ಬುಟ್ಟಿ (ಪದ್ಯಗಳು) | ೧೨೬ |


©KTBS Not to be republished

ಭಾಗ – ೧

# ಪೂರ್ವಸಿದ್ಧತಾ ಪಾಠಗಳು

೧. ಚಿತ್ರ ನೋಡಿ, ಭಾವ–ಸಂಬಂಧ ತಿಳಿ.





.................................................... ....................................................

.................................................... ....................................................





.................................................... ....................................................

.................................................... ....................................................

©KTBS Not to be republished

೨. ಚಿತ್ರ ನೋಡಿ, ವಿವರ ಹೇಳು.





..........................................................................

..........................................................................






..........................................................................

..........................................................................

©KTBS Not to be republished

೩. ಚಿತ್ರ ನೋಡಿ, ಕಥೆ ಹೇಳು.


## ಉಪಾಯ ಬಲ್ಲವನಿಗೆ ಅಪಾಯವಿಲ್ಲ




ಆಟ ಆಡುವ ವಿಚಾರ




ಆಟ ಆಡಲು ಆರಂಭ




ಒಂದು ಜಿಂಕೆ ಬಲೆಯಲ್ಲಿ ಸಿಕ್ಕಿಬಿತ್ತು



ನೀನು ಸತ್ತಂತೆ ಮಲಗು



ಬೇಯಿಸಿ ತಿನ್ನಲು ಬೆಂಕಿ ಹೊತ್ತಿಸಿದ




ಅಯ್ಯೋ!! ಪಾರಾಯಿತೇ?...

©KTBS Not to be republished

## ೪. ಭಿತ್ತಿಪತ್ರ ನೋಡಿ, ಘೋಷಣೆಗಳನ್ನು ಪೂರ್ಣ ಮಾಡು.




ಹೆಂಡದ ಸಹವಾಸ ಮಡದಿ ಮಕ್ಕಳ ______




ಅರಣ್ಯ ಬೆಳಸಿ ಜೀವ ______




ಶಾಲೆಯೇ ದೇಗುಲ ಮಕ್ಕಳೇ ______



ಹೆಣ್ಣೊಂದು ಕಲಿತರೆ
ಶಾಲೆಯೊಂದು ______



ಸೈಕಲ್ ಬಳಸಿ, ಇಂಧನ ______



ದುಡ್ಡು ದೊಡ್ಡಪ್ಪ, ವಿದ್ಯೆ ______

© KTBS Not to be republished

ಭಾಗ – ೨

ಪಾಠ – ೧

# ತೋಳ ಬಂತು ತೋಳ

**ಪಾಠ ಪ್ರವೇಶ :** ಮಕ್ಕಳಲ್ಲಿ ಆಟ, ತುಂಟಾಟಗಳು ಇರುವುದು ಸಹಜ. ಆದರೆ ಅವು ತನಗಾಗಲಿ, ಇತರರಿಗಾಗಲಿ ನೋವು ಇಲ್ಲವೇ ದುಃಖವನ್ನು ತರಬಾರದು. ಏನೋ ಮಾಡಲು ಹೋಗಿ ಇನ್ನೇನೋ ಅಪಾಯವನ್ನು ತಂದುಕೊಳ್ಳಬಾರದು. ತುಂಟಾಟಕ್ಕೆ, ತಮಾಷೆಗೆ ಒಂದು ಮಿತಿ ಇರುತ್ತದೆ, ಆ ಮಿತಿ ಮೀರಿದರೆ ಅಪಾಯ ತಪ್ಪಿದ್ದಲ್ಲ ಎಂಬ ಅರಿವು ಇರಬೇಕು. ಪದೇ ಪದೇ ಸುಳ್ಳು ಹೇಳಿ, ಮತ್ತೊಬ್ಬರನ್ನು ಮೂರ್ಖರನ್ನಾಗಿಸಲು ಹೋಗಿ ತಾವೇ ಮೂರ್ಖರಾಗುವುದು, ಇಲ್ಲವೇ ವಿಪತ್ತುಗಳನ್ನು ತಂದುಕೊಂಡಿರುವ ಸಂಗತಿಗಳನ್ನು ನೀವು ಕೇಳಿರಬಹುದು. ಅಂತಹದ್ದೇ ಒಂದು ಪ್ರಸಂಗವನ್ನು 'ತೋಳ ಬಂತು ತೋಳ' ಕಥೆಯಲ್ಲಿ ಕಾಣಬಹುದಾಗಿದೆ.





© KTBS Not to be republished

ಒಂದು ಊರಿನಲ್ಲಿ ಒಬ್ಬ ಹುಡುಗನಿದ್ದನು. ಅವನು ಪ್ರತಿದಿನ ಕುರಿಗಳನ್ನು ಮೇಯಿಸಲು ಕಾಡಿಗೆ ಹೋಗುತ್ತಿದ್ದನು. ಅವನು ಕುರಿಗಳನ್ನು ಮೇಯಲು ಬಿಟ್ಟು ಬಯಲಲ್ಲಿ ಆಟವಾಡುತ್ತಿದ್ದನು. ಸ್ವಲ್ಪ ದೂರದಲ್ಲಿ ಜನರು ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದರು. ಈ ಹುಡುಗನಿಗೆ ತಮಾಷೆ ಮಾಡಬೇಕು ಅನಿಸಿತು. ಆಗ ಅವನು ಜನರಿಗೆ ಕೇಳುವಂತೆ ಜೋರಾಗಿ 'ತೋಳ ಬಂತು.... ತೋಳ ಬಂತು... ಕಾಪಾಡಿ, ಬೇಗಬನ್ನಿ.... ಯಾರಾದರೂ ಬನ್ನಿ....' ಎಂದು ಕೂಗಿಕೊಂಡನು. ಇದನ್ನು ಕೇಳಿದ ಜನರು ಹುಡುಗನ ಸಹಾಯಕ್ಕೆ ಧಾವಿಸಿ ಬಂದರು. ಆದರೆ ಅಲ್ಲಿ ತೋಳ ಇರಲಿಲ್ಲ. ಹುಡುಗ ಜನರನ್ನು ನೋಡಿ ಒಳಗೇ ನಸುನಕ್ಕನು. ಜನರು ಹುಡುಗನಿಗೆ ಧೈರ್ಯ ಹೇಳಿ ಹಿಂತಿರುಗಿದರು.

ಮಾರನೆಯ ದಿನವೂ ಕುರಿ ಕಾಯುವ ಹುಡುಗ ಜನರಿಗೆ ಕೇಳುವಂತೆ 'ಅಯ್ಯೋ ಬನ್ನಿ ಕಾಪಾಡಿ, ತೋಳ ಬಂದಿದೆ... ತೋಳ' ಎಂದು ಕೂಗಿದನು. ಜನರು ಹುಡುಗನ ಅಳು ಕೇಳಿ ಓಡೋಡಿ ಬಂದರು. ತೋಳ ಇದ್ದರಲ್ಲವೇ ಕಾಣುವುದು ? ಹುಡುಗನಿಗೆ ಒಳಗೊಳಗೇ ನಗು ಬಂತು. ಜನರು ಹುಡುಗನ ಬಗ್ಗೆ ಗೊಣಗುತ್ತ ತಮ್ಮ ಕೆಲಸಗಳಿಗೆ ಹಿಂತಿರುಗಿದರು. ಹುಡುಗನಿಗೆ ಇದೊಂದು ರೀತಿ ಮೋಜು ಅನಿಸಿತು.





ಸ್ವಲ್ಪ ಸಮಯದ ನಂತರ ನಿಜವಾದ ತೋಳ ಬಂತು. ಅದು ಕುರಿಗಳನ್ನು ಹಿಡಿದು ತಿನ್ನಲಾರಂಭಿಸಿತು. ಹುಡುಗನು ಜನರಿಗೆ 'ಅಯ್ಯೋ... ಬೇಗ ಬನ್ನಿ... ನಿಜವಾಗಲೂ ತೋಳ ಬಂದಿದೆ... ನನ್ನ ಕುರಿಗಳನ್ನು ತಿನ್ನುತ್ತಿದೆ... ಬೇಗ ಬನ್ನಿ... ಕಾಪಾಡಿ' ಎಂದು ಜೋರಾಗಿ ಹೆದರುತ್ತ, ಅಳುತ್ತ ಹಲವು ಬಾರಿ ಕೂಗಿದನು. ಇದನ್ನು ಕೇಳಿಸಿಕೊಂಡ ಜನರು ಹುಡುಗ ಸುಳ್ಳು ಹೇಳುತ್ತಿದ್ದಾನೆ. ನಮ್ಮನ್ನು ಗುಗ್ಗು ಮಾಡಲು ಅರಚುತ್ತಿದ್ದಾನೆ ಅಂದುಕೊಂಡರು. ಹೀಗಾಗಿ ಹುಡುಗನ ಸಹಾಯಕ್ಕೆ ಯಾರೂ ಬರಲಿಲ್ಲ. ತೋಳ ಕುರಿಗಳನ್ನು ತಿಂದು ಹೊಟ್ಟೆ ತುಂಬಿಸಿಕೊಂಡಿತು. ಕುರಿಯನ್ನು ಕಳೆದುಕೊಂಡ ಹುಡುಗ ಅಳುತ್ತ ಮನೆಗೆ ಹಿಂತಿರುಗಿದನು.

**ನೀತಿ : ಮಿತಿ ಮೀರಿದ ಹುಡುಗಾಟ, ತರುವುದು ಸಂಕಟ**

## ಅಭ್ಯಾಸ

### I. ಪದಗಳ ಅರ್ಥ :

**ಅಧೋಗತಿ** – ಅವನತಿ; ದುರ್ಗತಿ.

**ಗುಗ್ಗು** – ದಡ್ಡ

**ತಮಾಷೆ** – ಹಾಸ್ಯ; ವಿನೋದ.

**ನಸುನಗು** – ಸ್ವಲ್ಪನಗು; ಹುಸಿನಗೆ.

**ಅರಚು** – ಜೋರಾಗಿ ಕೂಗು

**ಗೊಣಗು** – ಆಕ್ಷೇಪ; ವಟಗುಡು; ಅಸ್ಪಷ್ಟವಾಗಿ ಮಾತನಾಡು.

**ಧಾವಿಸು** – ಓಡಿ ಬರುವುದು; ಅವಸರದಿಂದ ಬರುವುದು.

**ಮೋಜು** – ಆಟ; ತಮಾಷೆ; ವಿನೋದ.

© KTBS Not to be republished

## II. ಪ್ರಶ್ನೆಗಳು :

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿ, ಬರೆಯಿರಿ.**

೧. ಹುಡುಗನು ಕುರಿಗಳನ್ನು ಮೇಯಿಸಲು ಎಲ್ಲಿಗೆ ಹೋಗುತ್ತಿದ್ದನು?

೨. ಹುಡುಗನು ಕುರಿಗಳನ್ನು ಮೇಯಲು ಬಿಟ್ಟು ಏನು ಮಾಡುತ್ತಿದ್ದನು?

೩. ಕುರಿ ಕಾಯುವ ಹುಡುಗ ತಮಾಷೆಗಾಗಿ ಜನರಿಗೆ ಕೇಳುವಂತೆ ಏನೆಂದು ಕೂಗಿದನು?

೪. ಜನರು ಕುರಿ ಕಾಯುವ ಹುಡುಗನಿಗೆ ಏಕೆ ಧೈರ್ಯ ಹೇಳಿದರು?

೫. ಜನರು ಕುರಿ ಕಾಯುವ ಹುಡುಗನ ಬಳಿ ಏಕೆ ಓಡಿ ಬಂದರು?

೬. ನಿಜವಾದ ತೋಳ ಬಂದರೂ ಜನರು ಹುಡುಗನ ಸಹಾಯಕ್ಕೆ ಏಕೆ ಬರಲಿಲ್ಲ?

೭. ತೋಳ ಬಂತು ತೋಳ – ಕಥೆಯ ನೀತಿ ಏನು?

## III. ಭಾಷಾಭ್ಯಾಸ :

**ಈ ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

೧. ತಮಾಷೆ : ____________________

೨. ಧಾವಿಸು : ____________________

೩. ಗೊಣಗು : ____________________

೪. ಅಧೋಗತಿ : ____________________

## IV. ಚಟುವಟಿಕೆ :

'ತೋಳ ಬಂತು ತೋಳ' ಕಥೆಯನ್ನು ನಿಮ್ಮದೇ ಧಾಟಿಯಲ್ಲಿ ಹಾವ ಭಾವಗಳೊಂದಿಗೆ ಎಲ್ಲರಿಗೂ ಕೇಳುವಂತೆ ತರಗತಿಯಲ್ಲಿ ಹೇಳಿರಿ.

* * * * *

©KTBS Not to be republished

ಪಾಠ – ೨

# ಬಾ ಬೇಗ ಸೂರ್ಯ

– ಮನು ಬಳಿಗಾರ

**ಪಾಠ ಪ್ರವೇಶ :** 'ರವಿ ಕಾಣದ್ದನ್ನು ಕವಿ ಕಂಡ' ಎನ್ನುವ ನಾಣ್ಣುಡಿಯನ್ನು ನೀವು ಕೇಳಿದ್ದೀರಿ. ಅನೇಕ ಕವಿಗಳು ಸೂರ್ಯೋದಯದ ಸೊಬಗನ್ನು ನಾನಾ ರೀತಿಯಲ್ಲಿ ಬಣ್ಣಿಸಿದ್ದಾರೆ. ಸೂರ್ಯನ ಉದಯದಿಂದ ಜೀವಜಗತ್ತು ಬೆಳಗುತ್ತದೆ. ಹೂವುಗಳು ಅರಳುತ್ತವೆ. ಪಕ್ಷಿಗಳು ಗೂಡಿನಿಂದ ಹೊರಬಂದು ಚಿಲಿಪಿಲಿ ನಾದಗೈಯುತ್ತವೆ. ಪ್ರಾಣಿಗಳು ಚೆಲ್ಲಾಟವಾಡುತ್ತವೆ. ರೈತನು ಎತ್ತುಗಳ ಜೊತೆ ಹೊಲಕ್ಕೆ ದುಡಿಯಲು ಹೋಗುತ್ತಾನೆ. ಮಕ್ಕಳು ಎದ್ದು ಆಟವಾಡುತ್ತಾರೆ. ಸೂರ್ಯನು ಕತ್ತಲನ್ನು ಹೊರದೂಡಿ, ಬಿಸಿಲನ್ನು ಚೆಲ್ಲಿ, ಚಳಿಯನ್ನು ಹೋಗಲಾಡಿಸುತ್ತಾನೆ. ಹೀಗೆ, ಸೂರ್ಯನು ಇಡೀ ಜೀವರಾಶಿಗೆ ಚೈತನ್ಯ ತರುತ್ತಾನೆ. ಅಂತಹ ಸೂರ್ಯನನ್ನು ಕವಿ ಬೇಗ ಬಾ ಎಂದು ಸ್ವಾಗತಿಸುವ ಪರಿ ಇಲ್ಲಿ ಸೊಗಸಾಗಿ ಮೂಡಿಬಂದಿದೆ.

ಅಕ್ಕಾ ಅಣ್ಣ ಮಲಗಿಹರಿನ್ನೂ
ಸೂರ್ಯನು ಕೂಡ ಬಂದಿಲ್ಲ.
ನಿನ್ನೆಯ ದಿನದಿ ಆಟದಿ ದಣಿದು
ಅವನು ಇನ್ನೂ ಎದ್ದಿಲ್ಲ.



© KTBS Not to be republished

ಬಾರೋ ಸೂರ್ಯ ಬೇಗನೆ ಬಾರೋ
ಚಳಿಯನು ಕಳೆದು ಬಿಸಿಲನು ತಾರೋ
ಗುಬ್ಬಿ ಹಕ್ಕಿ ಚಿಲಿಪಿಲಿಗುಟ್ಟಿ
ನಿನಗೆ ಸ್ವಾಗತ ಹಾಡುತಿದೆ

ನಿನ್ನಯ ಸ್ಪರ್ಧಿ ಅಪ್ಪನು ಆಗಲೆ
ಹೊಲಕೆ ಗಳೆಯನು ಹೊಡೆದಿಹನು
ಉತ್ತಿಬಿತ್ತಿ ಪೈರನು ಬೆಳೆದು
ಜಗಕೆ ಅನ್ನವ ನೀಡುವನು


ಸೂರ್ಯನೆ ನೀನು ಬಂದರೆ ಬೇಗ
ಕಟ್ಟಿದ ಕರುವಿಗೂ ಮೊಲೆ ಹಾಲುಂಟು
ಅಮ್ಮನು ಕರೆದು ಎಡೆಯನು ಹಿಡಿದು
ನನಗೂ ಹಾಲನು ಕುಡಿಸುವುದುಂಟು

ಬಾರೋ ಸೂರ್ಯ ಬೇಗನೆ ಬಾರೋ
ಜಗದ ಕಣ್ಣಾಗಿ ಬೆಳಕನು ತಾರೋ
ಬರದಿರೆ ನೀನು ಉಳಿಯುವುದೇನು?
ಜೀವರಾಶಿಯ ದೈವವೇ ನೀನು

* * * *

©KTBS Not to be republished

**ಕೃತಿಕಾರರ ಪರಿಚಯ :**



**ಮನು ಬಳಿಗಾರ** ಗದಗ ಜಿಲ್ಲೆಯ ಶಿಗ್ಲಿ ಗ್ರಾಮದಲ್ಲಿ ೧೯೫೩ ರಲ್ಲಿ ಜನಿಸಿದರು. ಇವರು ಅನೇಕ ಕಥೆಗಳನ್ನು, ಕವಿತೆಗಳನ್ನು, ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. **'ನನ್ನ ನಿನ್ನೊಳಗೆ', 'ಬಿದ್ದವರು ಎದ್ದವರು', 'ಸಾಕ್ಷರ ಗೀತೆಗಳು', 'ಕವಿ ರವೀಂದ್ರರ ಮಿಂಚಿನ ಹನಿಗಳು'** – ಇವು ಅವರ ಪ್ರಸಿದ್ಧ ಕವನ ಸಂಕಲನಗಳು. ಜೊತೆಗೆ ಮಕ್ಕಳಿಗಾಗಿ ಅನೇಕ ಕವನಗಳನ್ನು ಬರೆದಿದ್ದಾರೆ. ಇವರಿಗೆ ಗೌರವ ಡಾಕ್ಟರೇಟ್ ದೊರೆತಿದೆ. ರನ್ನ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ, ಇತರ ಅನೇಕ ಪ್ರಶಸ್ತಿಗಳು ಸಂದಿವೆ. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡದ ಸೇವೆ ಮಾಡುತ್ತಿದ್ದಾರೆ.

# ಅಭ್ಯಾಸ

## I. ಪದಗಳ ಅರ್ಥ :

**ಎಡೆ** – ನೈವೇದ್ಯ; ದೇವರಿಗೆ ಅರ್ಪಿಸುವ ಆಹಾರ.
**ಗಳೆ** – ಬಿದುರಿನ ಕುಂಟೆ
**ಜಗ** – ಜಗತ್ತು; ಲೋಕ; ಪ್ರಪಂಚ.
**ದಣಿದು** – ಆಯಾಸಗೊಂಡು
**ಪೈರು** – ಹೊಲಗದ್ದೆಗಳಲ್ಲಿ ಬೆಳೆಯುವ ತೆನೆ ಕೊಡುವ ಬೆಳೆ.

## II. ಪ್ರಶ್ನೆಗಳು :

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧. ಸೂರ್ಯ ಇನ್ನೂ ಏಕೆ ಎದ್ದಿಲ್ಲವೆಂದು ಮಗು ಭಾವಿಸುತ್ತದೆ?
೨. ಮಗು ಸೂರ್ಯನನ್ನು ಹೇಗೆ ಕರೆಯುತ್ತದೆ?
೩. ಗುಬ್ಬಿ ಸೂರ್ಯನಿಗೆ ಯಾವ ರೀತಿ ಸ್ವಾಗತ ಹಾಡುತ್ತಿದೆ?
೪. ಅಪ್ಪನು ಹೊಲಕ್ಕೆ ಏಕೆ ಹೋಗಿಹನು?
೫. ಅಪ್ಪನು ಸೂರ್ಯನ ಸ್ಪರ್ಧಿ ಏಕೆ?
೬. ಜಗದ ಕಣ್ಣು ಯಾರು?
೭. ಮಗು ಸೂರ್ಯನನ್ನು ಬೇಗ ಬಾ ಎಂದು ಏಕೆ ಕರೆಯುತ್ತದೆ?
೮. ಸೂರ್ಯನನ್ನು ಜೀವರಾಶಿಯ ದೈವ ಎಂದು ಏಕೆ ಕರೆಯಲಾಗಿದೆ?

## III. ಭಾಷಾಭ್ಯಾಸ :

**ಅ) ಪದ್ಯದಲ್ಲಿರುವ ಈ ಪ್ರಾಸ ಪದಗಳನ್ನು ಗಮನಿಸಿ ಓದಿರಿ.**

೧. ಬಂದಿಲ್ಲ – ಎದ್ದಿಲ್ಲ
೨. ಬಾರೋ – ತಾರೋ

© KTBS Not to be republished

ಆ) ಕೆಳಗಿನ ಪದಗಳಿಗೆ ಮಾದರಿಯಲ್ಲಿ ಕೊಟ್ಟಿರುವಂತೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಮಾದರಿ : ಹಕ್ಕಿ = ಪಕ್ಷಿ, ಖಗ

೧. ಅಮ್ಮ = ..........................

೨. ಅಪ್ಪ = ..........................

೩. ಸೂರ್ಯ = ..........................

೪. ಜಗ = ..........................

೫. ಕಣ್ಣು = ..........................

ಇ) ಕೆಳಗಿನ ಪದಗಳಿಗೆ ಮಾದರಿಯಂತೆ ಬಹುವಚನ ರೂಪಗಳನ್ನು ಬರೆಯಿರಿ.

ಮಾದರಿ : ಅಕ್ಕ = ಅಕ್ಕಂದಿರು

೧. ಅಣ್ಣ = ..........................

೨. ಹಕ್ಕಿ = ..........................

೩. ಆಟ = ..........................

೪. ಕರು = ..........................

ಈ) ಕೆಳಗಿನ ಪದಗಳಿಗೆ ಮಾದರಿಯಲ್ಲಿ ಕೊಟ್ಟಿರುವಂತೆ ವಿರುದ್ಧ ಪದಗಳನ್ನು ಬರೆಯಿರಿ.

ಮಾದರಿ : ಮಲಗು × ಏಳು

೧. ಬೇಗ × ..........................

೨. ಕಟ್ಟು × ..........................

೩. ಉಂಟು × ..........................

೪. ಬಾ × ..........................

ಉ) ಕೆಳಗಿನ ವಿಷಯಗಳನ್ನು ಕುರಿತು ಮೂರು-ನಾಲ್ಕು ವಾಕ್ಯ ಬರೆಯಿರಿ.

೧. ಸೂರ್ಯ ೨. ಶಾಲೆ ೩. ರೈತ ೪. ಪರಿಸರ

©KTBS Not to be republished

## ಪಾಠ – ೩

# ಕೂಗುತಿದೆ ಪಕ್ಷಿ

**ಪಾಠ ಪ್ರವೇಶ :**

ಒಂದು ಸುಂದರ ಕಾಡು. ಅಲ್ಲೊಂದು ಮೊಲ ಬೇಟೆಗಾರನ ಬಲೆಯಲ್ಲಿ ಸಿಲುಕಿ ವಿಲವಿಲ ಒದ್ದಾಡುತ್ತಿದೆ. ಈಗ ನೀವೇನು ಮಾಡುತ್ತೀರಿ? ಚರ್ಚಿಸಿರಿ.

ಶಾಲಾ ಮೈದಾನದಲ್ಲಿ ಹುಡುಗನೊಬ್ಬ ಬಿದ್ದಿದ್ದಾನೆ. ಕಾಲಿನ ಚರ್ಮ ಕಿತ್ತು ರಕ್ತ ಸೋರಿ ಬಂದಿದೆ. ಆಗ ನೀವೇನು ಮಾಡಬಹುದು? ತಿಳಿಸಿ.

ಇಂತಹ ಸಹಾಯ ಮನೋಭಾವ, ಪರಿಸರ ಪ್ರೇಮ, ಸಹಜೀವನ, ದೇಶಪ್ರೇಮದ ಭಾವನಾತ್ಮಕ ಬದುಕು ಈ ಪಾಠದಲ್ಲಿ ಗರಿಗೆದರಿ ನಿಂತಿದೆ. ಇಲ್ಲಿ ಪಕ್ಷಿಗಳು ಮರವನ್ನು ಪ್ರೀತಿಸುವ ಪರಿಯನ್ನು ಓದಿ ನೋಡಿ!



©KTBS Not to be republished

ಕೃಷ್ಣೆ ಮೈದುಂಬಿ ಹರಿಯುತ್ತಿದ್ದಾಳೆ. ಅವಳ ಭೋರ್ಗರೆತ, ತೂರಾಟ, ಚೆಲ್ಲಾಟ, ಹರಿಯುವ ಓಟ ನಯನ ಮನೋಹರ. ಬೆಳ್ಳನೆಯ ನೊರೆ ಬಲು ಚೆಂದ. ಸುಳಿಗಳಲ್ಲಿ ಸುತ್ತುವ ನೀರಿನ ಸೊಬಗೇ ಸೊಬಗು. ಬೆಳಗಿನ ಎಳೆ ಬಿಸಿಲಿನ ಹೊಳಪಿಗೆ ಮಿನಮಿನ ಮಿರುಗುವ ನದಿ ಬಲು ಅಂದ. ಸೂರ್ಯನ ಹೊಂಬಣ್ಣದ ಕಿರಣಗಳು ನದಿಯ ಮೇಲೆ ಬಿದ್ದಿವೆ. ಅಲ್ಲಿ ಹನಿ ಹನಿಗೂ ಮುತ್ತಿನ ಮಣಿಯ ರೂಪು. ಅಬ್ಬಬ್ಬಾ ! ಅದೆಷ್ಟು ಸುಂದರ.

ಈ ಕೃಷ್ಣಾ ನದಿಯಲ್ಲಿ ಹಲವಾರು ನಡುಗಡ್ಡೆಗಳಿವೆ. ಅವುಗಳಲ್ಲಿ ಸುಂದರವಾದ ಗಡ್ಡೆ 'ನಾರದ ಗಡ್ಡೆ'. ಅದು ರಾಯಚೂರು ಸಮೀಪವಿದೆ. ಬಹಳ ಹಿಂದೆ ಇಲ್ಲಿ ನಾರದ ಮುನಿ ತಪಸ್ಸು ಮಾಡಿದ್ದರೆಂಬ ಪ್ರತೀತಿ. ಇಲ್ಲೊಂದು ಶಿವದೇವಾಲಯವೂ ಇದೆ. ಸದಾ ಹಚ್ಚಹಸುರಿನಿಂದ ಕೂಡಿ, ಗಿಡ ಮರಗಳಿಂದ ಕಂಗೊಳಿಸುತ್ತಿದೆ.

ಈ ನಡುಗಡ್ಡೆ ಪ್ರವಾಸಿ ತಾಣವೂ ಹೌದು. ಈ ಸುಂದರ ತಾಣವನ್ನು ನೋಡಲು ಮಕ್ಕಳು ಪ್ರವಾಸ ಹೊರಟಿದ್ದರು.

ಕುಹೂ ಕುಹೂ ಹಕ್ಕಿಗಳ ಕಲರವ ಕಿವಿಗೆ ಇಂಪಾಗಿತ್ತು. ಮನಕೆ ತಂಪೆರೆಯುತ್ತಿತ್ತು. ಚಿಲಿಪಿಲಿ ಹಕ್ಕಿಗಳ ಇಂಚರ ಸಂಗೀತಮಯ.

ಮಕ್ಕಳು ಈ ಸುಂದರ ತಾಣದ ಸವಿ ಉಣ್ಣುತ್ತಿದ್ದರು. ಇದ್ದಕ್ಕಿದ್ದಂತೆ ಹಕ್ಕಿಯೊಂದರ ನೋವಿನ ಕೂಗು ಕೇಳಿಸಿತು. ಅತ್ತ ತಿರುಗಿ ನೋಡಿದಾಗ ಅನೇಕ ಟೊಂಗೆಗಳನ್ನು ಹರಡಿಕೊಂಡಿರುವ ಬೋಳುಮರ. ಎಲೆಗಳಿಲ್ಲದ, ಹೂಗಳಿಲ್ಲದ, ಹಣ್ಣುಕಾಯಿಗಳಿಲ್ಲದ ಒಣಗುತ್ತಿರುವ ಮರ. ಅದರೊಳಗೆ ಕುಳಿತ ಪಕ್ಷಿಯೊಂದು ನೋವಿನಿಂದ ಕೂಗುತ್ತಿತ್ತು. ಮಕ್ಕಳು ಕುತೂಹಲದಿಂದ ಆ ಮರದ ಬಳಿ ತೆರಳಿದರು.

"ಏ! ಸುಂದರ ಪಕ್ಷಿಯೇ, ಎಲ್ಲರೂ ಸಂತೋಷದಿಂದ ಇದ್ದಾರೆ. ನೀನೇಕೆ ನೋವಿನಿಂದ ಕೂಗುತ್ತಿದ್ದೀಯಾ? ಏನದು ನಿನ್ನ ಅಳಲು?" ಎಂದು ಗಣೇಶ ಪಕ್ಷಿಯನ್ನು ಪ್ರಶ್ನಿಸಿದನು.

"ಅಣ್ಣಾ! ನೋಡಿಲ್ಲಿ ನನ್ನ ಮರವನ್ನು. ಎಲೆಗಳೆಲ್ಲಾ ಉದುರಿಹೋಗಿವೆ. ಟೊಂಗೆಗಳು ಬೋಳಾಗಿವೆ. ಶಕ್ತಿಯಿಲ್ಲದೆ ಮರ ಸೊರಗಿದೆ. ಆಗಲೋ ಈಗಲೋ ಬೀಳುವಂತಿದೆ" ಎಂದಿತು ಪಕ್ಷಿ.

"ಹೌದೌದು ! ಅದರಿಂದ ನಿನಗೇನು ತೊಂದರೆ?" ಜೂಲಿ ಪಕ್ಷಿಯನ್ನು ಪ್ರಶ್ನಿಸಿದಳು.

"ಹಿಂದೆ ಈ ಮರವನ್ನು ನೀನು ನೋಡಿದ್ದೆಯಾ? ಆಗ ಏನಿದರ ಸೊಬಗು! ಮರದ ತುಂಬಾ ಹಸಿರೆಲೆಗಳು. ಟೊಂಗೆ ಟೊಂಗೆಗೂ ಹೂ, ಹಣ್ಣು ಸಾವಿರಾರು. ತಂಪಾದ ನೆರಳು ಮನೆ ಮಾಡಿತ್ತು. ನೂರಾರು ಪಕ್ಷಿಗಳಿಗೆ ಆಶ್ರಯತಾಣವಾಗಿತ್ತು. ಅದೇನು ಕಾರಣವೊ ತಿಳಿಯದು. ಎಲೆಗಳೆಲ್ಲ ಒಮ್ಮಿಂದೊಮ್ಮೆಲೆ ಉದುರಲು ಆರಂಭಿಸಿದವು. ಮತ್ತೆ ಚಿಗುರೊಡೆಯಲಿಲ್ಲ, ಮರ ಬಣ್ಣಗೆಟ್ಟಿತು, ಸೊರಗಿತು. ಈಗ ಒಣಗುತ್ತಿದೆ" ಎಂದಿತು ಪಕ್ಷಿ.

"ನಿನಗೆ ಈ ಮರದ ಮೇಲೆ ಅಷ್ಟೊಂದು ಪ್ರೀತಿಯೇ? ಏಕೆ?" ಎಂದು ಲತಾ ಪ್ರಶ್ನಿಸಿದಳು.

"ನನ್ನ ಅಜ್ಜ-ಅಜ್ಜಿ , ಅಪ್ಪ-ಅಮ್ಮ, ಅಣ್ಣ-ತಮ್ಮ, ಅಕ್ಕ-ತಂಗಿ ಎಲ್ಲರೂ ಇಲ್ಲಿಯೇ ಹುಟ್ಟಿ ಬೆಳೆದರು. ನಾನೂ ಇಲ್ಲಿಯೇ ಜನ್ಮ ತಳೆದೆ. ಆದರೆ .......... ಈ ಮರ ಈಗ ಸಾಯಲು ಸಿದ್ಧವಾದಂತಿದೆ.

©KTBS Not to be republished

ಹಾಗೇನಾದರೂ ಆದರೆ ನನಗೆ ತಾಣವೆಲ್ಲಿದೆ?" ಎಂದು ನೋವಿನಿಂದ ಉಸುರಿತು. ಪಕ್ಷಿಯ ಈ ಮಾತು ಕೇಳಿ ಮಕ್ಕಳಿಗೆ ಕನಿಕರ ಉಂಟಾಯಿತು. ಪಕ್ಷಿಯ ನೋವನ್ನು ಅರ್ಥಮಾಡಿಕೊಂಡರು. ಅದನ್ನು ಹೋಗಲಾಡಿಸುವ ಬಗ್ಗೆ ವಿಚಾರ ಮಾಡಿದರು.

ಪಕ್ಷಿಯು ಈ ಮರದ ಬಗ್ಗೆ ಹೊಂದಿರುವ ಭಾವುಕತೆ, ಅಭಿಮಾನದ ಬಗ್ಗೆ ಅಚ್ಚರಿ ಉಂಟಾಗುತ್ತಿದೆ ಎಂದನು ಬಷೀರ್. ನಾವೆಲ್ಲ ಊರಿಗೆ ಹೋಗಿ ಸಸ್ಯ ವೈದ್ಯರನ್ನು ಕಾಣೋಣ. ಮರದ ಬಗ್ಗೆ ವಿವರಿಸೋಣ. ಸೂಕ್ತ ಚಿಕಿತ್ಸೆ ಕೊಡಿಸಿ ಮರವನ್ನು ಉಳಿಸೋಣ. **ಹಸಿರೇ ನಮ್ಮ ಉಸಿರು** ಎಂಬ ನಾಣ್ಣುಡಿಯನ್ನು ಎಲ್ಲೆಡೆ ಸಾರೋಣ ಎಂದಳು ದಿವ್ಯಾ.

ಎಲ್ಲ ಮಕ್ಕಳು ಊರಿಗೆ ಹಿಂದಿರುಗಿದರು. ಸಸ್ಯ ವೈದ್ಯರನ್ನು ಮರದ ಬಳಿಗೆ ಕರೆತಂದರು. ವೈದ್ಯರು ಮರವನ್ನು ಸಂಪೂರ್ಣವಾಗಿ ನೋಡಿದರು. ಟೊಂಗೆಯನ್ನು ಗಮನಿಸಿದರು. ಏನೇನೋ ವಿಚಾರಮಾಡಿ ಬೇರುಗಳಿಗೆ ಚುಚ್ಚುಮದ್ದು ನೀಡಿದರು. ಒಣಗಿದ ಭಾಗಕ್ಕೆ ಔಷಧಿ ಸವರಿದರು. ಮಕ್ಕಳು ವೈದ್ಯರ ಸಲಹೆಯಂತೆ ಮರದ ಬುಡಕ್ಕೆ ಗೊಬ್ಬರ ಹಾಕಿ ನೀರುಣಿಸಿದರು.

ಕೆಲವು ದಿನಗಳು ಕಳೆದವು. ಮಳೆಗಾಲ ಬಂತು. ಮರ ಚಿಗುರೊಡೆಯಿತು. ಎಲೆಗಳು ಮೈದಳೆದವು. ಟೊಂಗೆ ಟೊಂಗೆಗಳಲ್ಲಿ ಹೂಗಳು ರಾರಾಜಿಸಿದವು. ಹೀಚು, ಕಾಯಿ, ಹಣ್ಣುಗಳು ಜೀವತಳೆದವು. ಆ ಮರಕ್ಕೆ ನೂರಾರು ಹಕ್ಕಿಗಳು ಬಂದವು. ಪಕ್ಷಿಗಳ ಕಲರವ ತುಂಬಿತು.

ಮತ್ತೆ ಮಕ್ಕಳು ಪ್ರವಾಸಕ್ಕೆ ಬಂದರು. ಮರದ ಸೊಬಗು ಮಕ್ಕಳ ಮನಸ್ಸಿಗೆ ಉಲ್ಲಾಸ ತಂದಿತು. ಮಕ್ಕಳು ಕುಣಿದು ಕುಪ್ಪಳಿಸಿದರು. ಮಕ್ಕಳು ಮಾಡಿದ ಸತ್ಕಾರ್ಯವನ್ನು ಮೆಚ್ಚಿ ಪಕ್ಷಿಗಳು ಹಾಡಿದವು. ಮರವು ಮೆಲುಗಾಳಿಗೆ ಎಲೆಗಳನ್ನು ಅಲುಗಾಡಿಸಿ ಸಂಗೀತ ನೀಡಿತು. ಋಣ ತೀರಿಸಿತು. ಮಕ್ಕಳು ಹೋ ಎಂದು ಕೂಗಿದರು. **ಹಸಿರೇ ಉಸಿರು** ಎಂದರು.

* * * * *

## ಅಭ್ಯಾಸ

### I. ಪದಗಳ ಅರ್ಥ :

**ಅಳಲು** – ನೋವು; ದು:ಖ.
**ಇಂಚರ** – ಇಂಪಾದ ದನಿ; ಮಧುರ ದನಿ.
**ಋಣ** – ಸಾಲ; ಹಂಗು; ರಿಣ.
**ಅಭಿಮಾನ** – ಹೆಮ್ಮೆ
**ಉಲ್ಲಾಸ** – ಆನಂದ; ಲವಲವಿಕೆ.
**ಕಂಗೊಳಿಸು** – ಕಣ್ಣಿಗೆ ಅಂದವಾಗಿ ಕಾಣು.

©KTBS Not to be republished

**ಚೆಲ್ಲಾಟ** – ವಿನೋದ; ವಿಲಾಸ.

**ತಂಪೆರೆ** – ತೃಪ್ತಿ ನೀಡು

**ನಡುಗಡ್ಡೆ** – ನೀರ ನಡುವಿರುವ ಚಿಕ್ಕ ಭೂಪ್ರದೇಶ.

**ನೀರುಣಿಸು** – ನೀರುಹಾಕು

**ಪ್ರತೀತಿ** – ಪ್ರಸಿದ್ಧಿ; ಜನಜನಿತ.

**ಬಣ್ಣಗೆಡು** – ಕಳಾಹೀನವಾಗು; ಕಳೆಕುಂದು.

**ಮನೋಹರ** – ಮನಸ್ಸಿಗೆ ಹಿತವಾದ

**ಮಿರುಗು** – ಹೊಳೆಯುವುದು

**ಮೈದಳೆ** – ಆಕಾರಹೊಂದು; ದೇಹ ಧರಿಸು.

**ಸೊರಗು** – ಬಾಡು; ಕ್ಷೀಣವಾಗು.

**ತಾಣ** – ನೆಲೆ; ಜಾಗ.

**ಸತ್ಕಾರ್ಯ** – ಒಳ್ಳೆಯ ಕೆಲಸ

**ಜೀವತಳೆ** – ಜೀವಪಡೆ; ಜೀವಹೊಂದು.

**ತೂರಾಟ** – ಮೇಲಕ್ಕೆ ಚಿಮ್ಮುವ ಆಟ.

**ನಯನ** – ಕಣ್ಣು; ನೇತ್ರ; ಅಕ್ಷಿ.

**ನೊರೆ** – ಬುರುಗು

**ಪ್ರವಾಸಿ ತಾಣ** – ಪ್ರವಾಸಿಗರು ಬರುವ ಜಾಗ; ಪ್ರವಾಸಕ್ಕೆ ಯೋಗ್ಯವಾದ ಸ್ಥಳ.

**ಬೋಳುಮರ** – ಎಲೆಗಳು ಸಂಪೂರ್ಣವಾಗಿ ಉದುರಿಹೋಗಿರುವ ಮರ.

**ಮಿನ ಮಿನ** – ಫಳ ಫಳ

**ಮೆಲುಗಾಳಿ** – ಮೆಲ್ಲಗೆ ಬೀಸುವ ಗಾಳಿ

**ರಾರಾಜಿಸು** – ಪ್ರಕಾಶಿಸು; ಶೋಭಿಸು; ಮಿರುಗು.

**ಹೊಂಬಣ್ಣ** – ಚಿನ್ನದ ಬಣ್ಣ

**ಸವರು**– ಹಚ್ಚು; ಲೇಪಿಸು.

**ಸುಳಿ** – ನದಿಯಲ್ಲಿ ನೀರು ವೃತ್ತಾಕಾರವಾಗಿ ಸುತ್ತುವ ರೀತಿ.

**ಹಸಿರೇ ಉಸಿರು** – ನಾಣ್ಣುಡಿ, ಮರಗಿಡಗಳನ್ನು ಬೆಳೆಸಬೇಕು. ಅವು ಜೀವನಾಧಾರ, ಅವುಗಳಿಂದ ಜೀವ ಜಗತ್ತಿಗೆ ಆಮ್ಲಜನಕ ದೊರೆಯುತ್ತದೆ.

## II. ಪ್ರಶ್ನೆಗಳು :

### ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ನಾರದ ಗಡ್ಡೆ ಎಲ್ಲಿದೆ?

೨. ಪಕ್ಷಿ ಕೂಗುತ್ತಿದ್ದ ಬೋಳುಮರ ಯಾವ ರೀತಿ ಇತ್ತು?

೩. ಮಕ್ಕಳು ಮಾಡಿದ ಸತ್ಕಾರ್ಯವನ್ನು ಪಕ್ಷಿಗಳು ಹೇಗೆ ಮೆಚ್ಚಿಕೊಂಡವು?

೪. ಮಕ್ಕಳ ಮನಸ್ಸಿಗೆ ಉಲ್ಲಾಸ ತಂದ ಸಂಗತಿ ಯಾವುದು?

೫. ಪಕ್ಷಿಯ ಮಾತುಗಳಿಗೆ ಬಷೀರ್ ಏನೆಂದು ಪ್ರತಿಕ್ರಿಯಿಸಿದನು?

೬. ಪಕ್ಷಿಯ ಮಾತುಗಳನ್ನು ಕೇಳಿದ ದಿವ್ಯ ಯಾವ ತೀರ್ಮಾನಕ್ಕೆ ಬಂದಳು?

©KTBS Not to be republished

೭. ಬೋಳುಮರ ಮೊದಲಿನಂತೆ ಹೇಗೆ ಜೀವ ತಳೆಯಿತು?

೮. ಪಕ್ಷಿಗಳು ಯಾವುದನ್ನು ಮೆಚ್ಚಿ ಹಾಡು ಹಾಡಿದವು?

೯. ಮಕ್ಕಳ ಸತ್ಕಾರ್ಯಕ್ಕೆ ಮರ ಹೇಗೆ ಋಣ ತೀರಿಸಿತು?

ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಕೃಷ್ಣಾ ನದಿಯ ಓಟ ಯಾವ ರೀತಿ ನಯನ ಮನೋಹರವಾಗಿದೆ?

೨. ನಾರದಗಡ್ಡೆಯ ವಿಶೇಷತೆಗಳೇನು?

೩. ಗಣೇಶನು ಪಕ್ಷಿಯನ್ನು ಏನೆಂದು ಪ್ರಶ್ನಿಸಿದನು?

೪. ಬೋಳಾಗುವುದಕ್ಕೆ ಮೊದಲು ಮರದ ಸೊಬಗು ಹೇಗಿತ್ತೆಂದು ಪಕ್ಷಿ ವಿವರಿಸಿತು?

೫. ಪಕ್ಷಿಗೆ ಮರದ ಮೇಲೆ ಪ್ರೀತಿ ಬೆಳೆಯಲು ಕಾರಣವೇನು?

೬. ಸಸ್ಯ ವೈದ್ಯರು ಮರವನ್ನು ಹೇಗೆ ಉಪಚರಿಸಿದರು?

ಇ) ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು? ತಿಳಿಸಿರಿ.

೧. 'ನೀನೇಕೆ ನೋವಿನಿಂದ ಕೂಗುತ್ತಿದ್ದೀಯಾ?'

೨. 'ಈ ಮರದ ಮೇಲೆ ಅಷ್ಟೊಂದು ಪ್ರೀತಿಯೇ?'

೩. 'ನಾನೂ ಇಲ್ಲಿಯೇ ಜನ್ಮ ತಳೆದೆ'.

ಈ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

೧. ನಾರದ ಗಡ್ಡೆಯು .................................. ನದಿಯಲ್ಲಿದೆ.

೨. ಹಕ್ಕಿಗಳ ............................. ಕಿವಿಗೆ ಇಂಪಾಗಿತ್ತು.

೩. ಮರವು ನೂರಾರು ಪಕ್ಷಿಗಳಿಗೆ ................................... ಆಗಿತ್ತು.

೪. ಹಸಿರೇ ............................ ಎಂದು ಎಲ್ಲೆಡೆ ಸಾರೋಣ.

©KTBS Not to be republished

## III. ಭಾಷಾಭ್ಯಾಸ :

**ಅ) ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

ಇಂಚರ : ______________________

ಕಂಗೊಳಿಸು : ______________________

ಬಣ್ಣಗೆಡು : ______________________

ಪ್ರವಾಸ : ______________________

ಉಲ್ಲಾಸ : ______________________

ಕನಿಕರ : ______________________

ಸತ್ಕಾರ್ಯ : ______________________

**ಆ) ಗೆರೆ ಹಾಕಿದ ಪದಗಳ ಬದಲಾಗಿ ಬೇರೆ ಪದಗಳನ್ನು ಬಳಸಿ ಬರೆಯಿರಿ.**

**ಮಾದರಿ :** ಆ ವನವು ಗಿಡ ಮರಗಳಿಂದ **ಕಂಗೊಳಿಸುತ್ತಿದೆ.**

ಆ ವನವು ಗಿಡಮರಗಳಿಂದ ಕಣ್ಣಿಗೆ ಹಬ್ಬವನ್ನು ಉಂಟುಮಾಡುತ್ತಿದೆ.

೧. ಎಲೆಗಳು ಉದುರಿ ಮರದ ಸೊಬಗು **ಬಣ್ಣಗೆಟ್ಟಿತ್ತು.**

______________________

೨. ಜುಳುಜುಳು ಹರಿಯುವ ನೀರಿನ **ಸೊಬಗೇ ಸೊಬಗು.**

______________________

೩. ಮರದ ಟೊಂಗೆಟೊಂಗೆಗಳಲ್ಲಿ ಹೂವು **ರಾರಾಜಿಸಿದವು.**

______________________

೪. ನೀರು ಹಾಕಿದ್ದರಿಂದ ಮರದಲ್ಲಿನ ಹೀಚುಕಾಯಿ ಹಣ್ಣುಗಳು **ಜೀವತಳೆದವು.**

______________________

©KTBS Not to be republished

ಇ) ಈ ಪದಗಳಲ್ಲಿ ಸ್ವರಾಕ್ಷರಗಳನ್ನು ಗುರುತಿಸಿ ಬರೆಯಿರಿ.

ಅಬ್ದುಲ್ ಇಲಿ ಊರು ಓತಿಕ್ಯಾತ ಐರಾವತ

_______ _______ _______ _______ _______

ಈ) ಕೆಳಗಿನ ಪದಗಳಲ್ಲಿ ಅನುಸ್ವಾರ ಇರುವ ಪದಗಳಿಗೆ ▭ ಈ ರೀತಿಯ ಚೌಕವನ್ನು ಹಾಗೂ ವಿಸರ್ಗ ಇರುವ ಪದಗಳಿಗೆ ⬭ ಈ ರೀತಿಯ ವೃತ್ತವನ್ನು ಹಾಕಿರಿ.

| | |
|---|---|
| ಹೊಂಬಣ್ಣ | ದುಃಖ |
| ಕಂಗೊಳಿಸು | ಕಂಬನಿ |
| ಒಂದು | ಭಾಗಶಃ |
| ಅಂತಃಪುರ | ಟೊಂಗೆ |

ಉ) ಪದಗಳನ್ನು ಹೇಳುತ್ತ ನೋಡಿ ಬರೆಯಿರಿ.

| | | | |
|---|---|---|---|
| ಕೃಷ್ಣೆ | ಭೋರ್ಗರೆತ | ತೂರಾಟ | ಚೆಲ್ಲಾಟ |
| .................... | .................... | .................... | .................... |
| .................... | .................... | .................... | .................... |
| .................... | .................... | .................... | .................... |
| ನಡುಗಡ್ಡೆ | ಪಕ್ಷಿಗಳು | ಭಾವುಕತೆ | ಅಭಿಮಾನ |
| .................... | .................... | .................... | .................... |
| .................... | .................... | .................... | .................... |
| .................... | .................... | .................... | .................... |
| ಸಂಪೂರ್ಣ | ಸಸ್ಯವೈದ್ಯ | ಸತ್ಕಾರ್ಯ | ಸನ್ನಿವೇಶ |
| .................... | .................... | .................... | .................... |
| .................... | .................... | .................... | .................... |
| .................... | .................... | .................... | .................... |

©KTBS Not to be republished

ಊ) ಈ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

| | | | |
|---|---|---|---|
| ಸುಂದರ | X ...................................... | ಅರ್ಥ | X ...................................... |
| ಮೆಲ್ಲಗೆ | X ...................................... | ಅಭಿಮಾನ | X ...................................... |
| ಬುಡ | X ...................................... | ಸಂತೋಷ | X ...................................... |

## IV. ಸೈದ್ಧಾಂತಿಕ ವ್ಯಾಕರಣ :

ಅ) ನಾವು ಮಾತನಾಡುವ ಕನ್ನಡ ಭಾಷೆಯ ಅಕ್ಷರಗಳನ್ನು ತಿಳಿಯೋಣ.

ಅ. ಆ. ಇ. ಈ. ಉ. ಊ. ಋ. ಎ. ಏ. ಐ. ಒ .ಓ. ಔ. – ಇವು ಹದಿಮೂರು ಸ್ವರಾಕ್ಷರಗಳು
ಅ .ಇ. ಉ. ಋ. ಎ. ಒ. – ಇವು ಹ್ರಸ್ವ ಸ್ವರಗಳು.
ಆ. ಈ. ಊ. ಏ. ಐ. ಓ. ಔ – ಇವು ದೀರ್ಘ ಸ್ವರಗಳು.

ಅನುಸ್ವಾರ (ಂ), ವಿಸರ್ಗ (ಃ) – ಇವು ಎರಡು ಯೋಗವಾಹಗಳು.

ಕ್ ಖ್ ಗ್ ಘ್ ಙ್

ಚ್ ಛ್ ಜ್ ಝ್ ಞ್

ಟ್ ಠ್ ಡ್ ಢ್ ಣ್

ತ್ ಥ್ ದ್ ಧ್ ನ್

ಪ್ ಫ್ ಬ್ ಭ್ ಮ್ – ಇವು (ಇಪ್ಪತ್ತೈದು) ವರ್ಗೀಯ ವ್ಯಂಜನಗಳು.

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ – ಇವು (ಒಂಬತ್ತು) ಅವರ್ಗೀಯ ವ್ಯಂಜನಗಳು

©KTBS Not to be republished

ಆ) ವ್ಯಂಜನ ಮತ್ತು ಸ್ವರಾಕ್ಷರಗಳು ಸೇರುವುದನ್ನು ಓದಿ ತಿಳಿಯಿರಿ.

| | | | | | | | | | | | | | |
|---|---|---|---|---|---|---|---|---|---|---|---|---|---|
| ಕ್ | + | ಅ | = | ಕ | | | | ಕ್ | + | ಏ | = | ಕೇ |
| ಕ್ | + | ಆ | = | ಕಾ | | | | ಕ್ | + | ಐ | = | ಕೈ |
| ಕ್ | + | ಇ | = | ಕಿ | | | | ಕ್ | + | ಒ | = | ಕೊ |
| ಕ್ | + | ಈ | = | ಕೀ | | | | ಕ್ | + | ಓ | = | ಕೋ |
| ಕ್ | + | ಉ | = | ಕು | | | | ಕ್ | + | ಔ | = | ಕೌ |
| ಕ್ | + | ಊ | = | ಕೂ | | | | ಕ್ | + | ಅಂ | = | ಕಂ |
| ಕ್ | + | ಎ | = | ಕೆ | | | | ಕ್ | + | ಅಃ | = | ಕಃ |

ಈ ಮೇಲಿನಂತೆ ಉಳಿದ ವ್ಯಂಜನಾಕ್ಷರಗಳಿಗೆ ಸ್ವರಾಕ್ಷರಗಳನ್ನು ಸೇರಿಸಿ ಬರೆಯಿರಿ.

## V. ಪೂರಕ ಓದು :

### ಗಿಡ ಬೆಳಸಿ ಜೀವ ಉಳಿಸಿ

ಬಾ ಗೆಳತಿ ಹೋಗುವ
ಗಿಡ ತಂದು ನೆಡುವ
ಕಣ್ಣಲ್ಲಿ ಕಣ್ಣಿಟ್ಟು ಜೋಪಾನ ಮಾಡಿ
ನೀರು ಗೊಬ್ಬರ ಹಾಕಿ ಗಿಡ ಬೆಳೆಸಿ ಜೀವ ಉಳಿಸುವ

ಕಾಂಕ್ರೀಟು ಇಟ್ಟಿಗೆಯ ಮಹಲು ಬೇಡ
ಓಡಾಡಲು ಮೋಟಾರು ಕಾರು ಬೇಡ
ಗಿಡ ಮರವೆಲ್ಲಾ ಕಡಿದು ರಸ್ತೆ ಮಾಡುವುದು ಬೇಡ
ಬಾ ಗೆಳತಿ ಗಿಡ ಬೆಳೆಸಿ ಜೀವ ಉಳಿಸುವ

ಮಳೆಯಿಲ್ಲಾ ಬೆಳೆಯಿಲ್ಲಾ
ಊರ ತುಂಬೆಲ್ಲ ಬರಗಾಲ
ಹಸಿದ ಕಂದನ ತುಟಿಗೆ ಹಾಲಿಲ್ಲಾ
ತಾಯಿ ಹಾಲಿಗೂ ನಂಜೇರಿದೆ
ಬಾ ಗೆಳತಿ ಗಿಡ ಬೆಳೆಸಿ ಜೀವ ಉಳಿಸುವ

©KTBS Not to be republished

ತುತ್ತನರಸಿ ಎತ್ತಲೋ
ಗುಳೇ ಹೊರಟಿದ್ದಾರೆ ನನ್ನವರು
ಗುಳಿ ಬಿದ್ದ ಕಣ್ಣುಗಳಲ್ಲಿ ನಿರಾಸೆ ಜಿನುಗಿದೆ
ಹೊಸ ಭರವಸೆಯ ಚಿಗುರಿಸು
ಬಾ ಗೆಳತಿ ಗಿಡ ಬೆಳೆಸಿ ಜೀವ ಉಳಿಸುವ.

– **ರೇಣುಕಾ ಎಚ್.**

**ಸೂಚನೆ :** ಈ ಪದ್ಯದಲ್ಲಿರುವ ಭಾವ ಹಾಗೂ ಪಾಠದಲ್ಲಿರುವ ಭಾವವನ್ನು ಗಮನಿಸಿ, ಎಲ್ಲರೂ ಕೂಡಿ ಹಾಡಿರಿ.

## VI. ಚಟುವಟಿಕೆಗಳು :

೧. ನೀವು ನೋಡಿದ ಮಳೆ, ಹಳ್ಳ, ಹೊಳೆ ಅಥವಾ ಸಮುದ್ರ ಯಾವುದಾದರೂ ಒಂದನ್ನು ಕುರಿತು ನಾಲ್ಕು ವಾಕ್ಯಗಳನ್ನು ವರ್ಣಿಸಿ ಬರೆಯಿರಿ.

೨. 'ಹಸಿರೇ ಉಸಿರು' – ವಿಷಯದ ಮೇಲೆ ತರಗತಿಯಲ್ಲಿ ಚರ್ಚೆ ನಡೆಸಿರಿ.

೩. ಮನೆ ಹಾಗೂ ಶಾಲೆಯ ಸುತ್ತಲು ಮರಗಿಡಗಳಿಗೆ ನೀರು ಹಾಕಿ ಬೆಳೆಸಿರಿ.

೪. 'ಕೂಗುತಿದೆ ಪಕ್ಷಿ' ಪಾಠದಲ್ಲಿ ಬರುವ ಪಾತ್ರಗಳನ್ನು ಹಂಚಿಕೊಂಡು ಸಂಭಾಷಣೆ ನಡೆಸಿರಿ.

* * * * *

©KTBS Not to be republished

## ಪಾಠ – ೪

# ನನ್ನ ದೇಶ ನನ್ನ ಜನ

– ಚೆನ್ನವೀರ ಕಣವಿ

**ಪದ್ಯ ಪ್ರವೇಶ :**

ನಾವೆಲ್ಲರೂ ಒಂದು ಕುಟುಂಬದಲ್ಲಿ ವಾಸಿಸುತ್ತೇವೆ. ಅವರನ್ನು ನನ್ನ ತಂದೆ , ನನ್ನ ತಾಯಿ, ನನ್ನ ಅಣ್ಣ, ನನ್ನ ಅಕ್ಕ ಎಂದು ಹೆಮ್ಮೆಯಿಂದ ಗುರುತಿಸುತ್ತೇವೆ. ಇದೇ ಬಗೆಯ ಅಭಿಮಾನ ನಾವು ಹುಟ್ಟಿದ ದೇಶದ ಬಗ್ಗೆ ಇರಬೇಕು. ನಾವೆಲ್ಲರೂ ಭಾರತೀಯರು. ಭಾರತ ಮಾತೆಯ ಮಕ್ಕಳು. ಭಾರತದಲ್ಲಿ ವಿವಿಧ ಧರ್ಮಗಳಿವೆ. ವಿವಿಧ ಭಾಷೆಗಳಿವೆ. ವಿವಿಧ ಸಂಸ್ಕೃತಿಗಳಿವೆ. ಇತಿಹಾಸವಿದೆ. ಆದ ಕಾರಣ, ಪ್ರತಿಯೊಬ್ಬರಿಗೂ ತನ್ನ ದೇಶದ ಬಗ್ಗೆ ಅಭಿಮಾನ ಇರಬೇಕು. "ತಾಯಿ ಮತ್ತು ತಾಯಿನಾಡು ಸ್ವರ್ಗಕ್ಕಿಂತಲೂ ಮಿಗಿಲು" ಎಂದು ಸಂಸ್ಕೃತ ಸುಭಾಷಿತ ಹೇಳುತ್ತದೆ. ಕುವೆಂಪುರವರು "ದೇಶ ನನ್ನದು, ನಾಡು ನನ್ನದು ಎನ್ನದ ಎದೆ ಸುಡುಗಾಡು" ಎನ್ನುತ್ತಾರೆ. ಇಲ್ಲಿ ಕವಿ ಈ ದೇಶವನ್ನು ವರ್ಣಿಸಿ ದೇಶಭಕ್ತಿಯನ್ನು ಮೆರೆದಿದ್ದಾರೆ.

©KTBS
Not to be republished

ನನ್ನ ದೇಶ ನನ್ನ ಜನ
ನನ್ನ ಮಾನ ಪ್ರಾಣ ಘನ
ತೀರಿಸುವೆನೆ ಅದರ ಋಣ
ಈ ಒಂದೇ ಜನ್ಮದಿ?

ಕೆಂಪು ನೆಲದ ಹಸಿರು ಬೆಳೆ
ಕಪ್ಪು ಬಣ್ಣ ಮೊಗದ ಕಳೆ
ಸೂರ್ಯ ಚಂದ್ರ ಚುಕ್ಕಿಗಳೆ
ನಮ್ಮ ಹಿರಿಯ ಒಕ್ಕಲು

ನೂರು ಭಾವ ಭಾಷೆ ನೆಲೆ
ನೂರು ಬಣ್ಣ ವೇಷ ಕಲೆ
ಸ್ವಚ್ಛಂದದ ಹಕ್ಕಿಗಳೆ
ನಮ್ಮ ಹಾಡು ಬದುಕಲು

ಪ್ರಾಚೀನವ ತಿಕ್ಕಿ ತೊಳೆ
ವರ್ತಮಾನ ಜೀವಕಳೆ
ಉಕ್ಕೇರಲಿ ಬಾಳ ಹೊಳೆ
ಆ ಭವಿಷ್ಯದೊಡಲಿಗೆ

ಮೈ ಕೊಡವಿದೆ ಮೂಕ ಜನ
ಕೈ ಹಿಡಿಯಿರಿ ನಾಕು ಚಣ
ಎದ್ದೇಳಲಿ ಎಲ್ಲ ಗುಣ
ಆ ಸಮೃದ್ಧ ಬಾಳಿಗೆ

* * * *

## ಕೃತಿಕಾರರ ಪರಿಚಯ :



ಚೆನ್ನವೀರ ಕಣವಿ ಅವರು ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ೧೯೨೮ ರಲ್ಲಿ ಜನಿಸಿದರು. ಕವಿ, ಪ್ರಾಧ್ಯಾಪಕ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಸಾರಾಂಗ ವಿಭಾಗದ ನಿರ್ದೇಶಕರಾಗಿ ಸೇವೆಸಲ್ಲಿಸಿದರು. ಕಣವಿಯವರು ನಾಡಿನ ಮುಖ್ಯ ಕವಿಗಳಲ್ಲಿ ಒಬ್ಬರು. 'ನಗರದಲ್ಲಿ ನೆರಳು', 'ಕಾವ್ಯಾಗ್ನಿ', 'ಭಾವಜೀವಿ', 'ಆಕಾಶಬುಟ್ಟಿ', 'ಮಧುಚಂದ್ರ', 'ಮಣ್ಣಿನ ಮೆರವಣಿಗೆ', 'ದೀಪಧಾರಿ', 'ಹೂವು ಹೊರಳುವುವು ಸೂರ್ಯನಕಡೆಗೆ', 'ಹಕ್ಕಿಪುಕ್ಕ', 'ಚಿಣ್ಣರ ಲೋಕವ ತೆರೆಯೋಣ' ಮುಂತಾದ ಕಾವ್ಯಸಂಕಲನಗಳನ್ನು ರಚಿಸಿದ್ದಾರೆ.

ಇವರ 'ಜೀವಧ್ವನಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕರ್ನಾಟಕ ಕವಿರತ್ನ ಪ್ರಶಸ್ತಿ ಇತ್ಯಾದಿ ಗೌರವ ಪುರಸ್ಕಾರಗಳು ಕಣವಿ ಅವರಿಗೆ ಸಂದಿವೆ.

©KTBS Not to be republished

## ಅಭ್ಯಾಸ

### I. ಪದಗಳ ಅರ್ಥ :

**ಉಕ್ಕೇರು** – ಹೆಚ್ಚಾಗು
**ಒಕ್ಕಲು** – ಬೇಸಾಯ
**ಚಣ** – ಕ್ಷಣ
**ನೆಲೆ** – ವಾಸಸ್ಥಳ; ಆಶ್ರಯ.
**ಪ್ರಾಣ** – ಉಸಿರು
**ವರ್ತಮಾನ** – ಇಂದಿನ; ಪ್ರಸ್ತುತ.
**ಋಣ** – ಸಾಲ; ಹಂಗು.
**ಕಳೆ** – ಕಾಂತಿ
**ಘನ** – ಶ್ರೇಷ್ಠ; ಮಹತ್ವದ್ದು.
**ಪ್ರಾಚೀನ** – ಹಿಂದಿನ
**ಭವಿಷ್ಯ** – ನಾಳಿನ; ಮುಂದಿನ.
**ಸ್ವಚ್ಛಂದ** – ಸ್ವತಂತ್ರವಾಗಿರು

## II. ಪ್ರಶ್ನೆಗಳು :

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕಣವಿಯವರು ತನ್ನ ದೇಶ ಮತ್ತು ಜನರನ್ನು ಏನೆಂದು ಭಾವಿಸಿದ್ದಾರೆ?

೨. ಕವಿ ಕಣವಿಯವರು 'ನನ್ನ ದೇಶ ನನ್ನ ಜನ' ಪದ್ಯದಲ್ಲಿ ಋಣದ ಬಗ್ಗೆ ಏನೆಂದು ಹೇಳಿದ್ದಾರೆ?

೩. ಕಣವಿಯವರು ಈ ನೆಲದ ಮಣ್ಣು ಮತ್ತು ಬೆಳೆ ಯಾವ ಬಣ್ಣದಲ್ಲಿವೆ ಎಂದು ಹೇಳಿದ್ದಾರೆ?

೪. ಕಣವಿಯವರು ಹೇಳಿದಂತೆ ನಮ್ಮ ಹಿರಿಯ ಒಕ್ಕಲು ಯಾವುದು?

೫. ಕವಿ ಕಣವಿಯವರು 'ಸ್ವಚ್ಛಂದದ ಹಕ್ಕಿಗಳು' ಎಂದು ಯಾರನ್ನು ಕರೆದಿದ್ದಾರೆ?

೬. ಕಣವಿಯವರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು –ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಭಾರತ ದೇಶದ ವೈವಿಧ್ಯತೆಯನ್ನು ಕವಿ ಕಣವಿ ಹೇಗೆ ಬಣ್ಣಿಸಿದ್ದಾರೆ?

೨. ಕಣವಿಯವರು ಭವಿಷ್ಯದ ಒಡಲಿಗೆ ನೀಡುವ ಸಂದೇಶವೇನು?

೩. ಕಣವಿಯವರು ಸಮೃದ್ಧ ಬಾಳು ಹೇಗೆ ಉಂಟಾಗಬೇಕು ಎಂದಿದ್ದಾರೆ?

**ಇ) ಈ ಕೆಳಗಿನ ಪ್ರಶ್ನೆಗೆ ಏಳು–ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ.**

೧. 'ನನ್ನ ದೇಶ ನನ್ನ ಜನ' ಪದ್ಯದ ಭಾವವನ್ನು ವಿವರಿಸಿ.

## III. ಭಾಷಾ ಅಭ್ಯಾಸ :

**೧. ಇಲ್ಲಿರುವ ಪದಗಳನ್ನು ನಕಲು ಮಾಡಿರಿ.**

| ಸ್ವಚ್ಛಂದ | ಪ್ರಾಚೀನ | ವರ್ತಮಾನ | ಉಕ್ಕೇರು |
|---|---|---|---|
| ...................... | ...................... | ...................... | ...................... |
| ...................... | ...................... | ...................... | ...................... |
| ...................... | ...................... | ...................... | ...................... |
| ...................... | ...................... | ...................... | ...................... |
| ...................... | ...................... | ...................... | ...................... |

©KTBS Not to be republished

| ಭವಿಷ್ಯ | ಸಮೃದ್ಧ | ಮೈಕೊಡವಿ | ಎದ್ದೇಳು |
|---|---|---|---|
| ...................... | ...................... | ...................... | ...................... |
| ...................... | ...................... | ...................... | ...................... |
| ...................... | ...................... | ...................... | ...................... |
| ...................... | ...................... | ...................... | ...................... |

**೨. ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಮಾನ X ......................................  ಹಿರಿಯ X ......................................

ಪ್ರಾಚೀನ X ......................................  ಏರು X ......................................

**೩. ಪದ್ಯದಲ್ಲಿ ಬಳಕೆ ಆಗಿರುವ ಈ ಪ್ರಾಸ ಪದಗಳನ್ನು ಓದಿ ತಿಳಿಯಿರಿ.**

ಜನ–ಘನ  ಬೆಳೆ–ಕಳೆ

ನೆಲೆ–ಕಲೆ  ತೊಳೆ–ಹೊಳೆ

ಚಣ–ಗುಣ  ಒಡಲಿಗೆ–ಬಾಳಿಗೆ

**೪. ಈ ಕೆಳಗಿನ ಪದಗಳು ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಆಗಿರುವ ಬದಲಾವಣೆಗಳನ್ನು ಗಮನಿಸಿ. ಇವುಗಳನ್ನು ತತ್ಸಮ ತದ್ಭವಗಳು ಎಂದು ಕರೆಯುತ್ತಾರೆ.**

ಋಣ > ರಿಣ  ಜನ್ಮ > ಜನುಮ

ಮುಖ > ಮೊಗ  ಚಂದ್ರ > ಚಂದಿರ

ವರ್ಣ > ಬಣ್ಣ  ಮೂಕ > ಮೂಗ

ನಾಲ್ಕು > ನಾಕು  ಕ್ಷಣ > ಚಣ

**೫. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಉಕ್ಕೇರಲಿ = ______________ + _________________

ಭವಿಷ್ಯದೊಡಲಿಗೆ = ______________ + _________________

ಎದ್ದೇಳಿ = ______________ + _________________

©KTBS Not to be republished

**೬. ಇಲ್ಲಿರುವ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

೧. ಖುಣ : ______________________

೨. ಸ್ವಚ್ಛಂದ : ______________________

೩. ಜೀವಕಳೆ : ______________________

೪. ಸಮೃದ್ಧಿ : ______________________

೫. ವರ್ತಮಾನ : ______________________

**೭. ಇಲ್ಲಿರುವ ಒಗಟುಗಳನ್ನು ಬಿಡಿಸಿರಿ.**

ಕಟ್ಟೆಯ ಮೇಲೆ ಕಟ್ಟೆ
ಅದರ ಮೇಲೊಂದು ಕಂಬ
ಕಂಬದ ಮೇಲೆ ಎರಡು ದೀಪ
ದೀಪದ ಮೇಲೊಂದು ಕಟ್ಟೆ
ಕಟ್ಟೆಯ ಮೇಲೆ ಹುಲ್ಲು
ಅದೇನೆಂದು ಹೇಳುವಿರಾ?

ಜುಳು ಜುಳು ಹರಿಯುತ
ಬಳುಕುತ ಬಾಗುತ
ಬೀಳುತ ಏಳುತ
ನೆಲವನು ತೊಯ್ಯುವ
ತಂಪನು ತರುವ
ಹೊನಲಾಗಿರುವ ನಾನು ಯಾರು?

ಕಾಡನು ಸುತ್ತುತ
ಹುಲ್ಲನು ಮೇಯುತ
ಹಾಲನು ನೀಡುತ
ರೈತನ ಹರಸುತ
ನಿಂತವರಾರು?

**ಸುಳಿವು** : ಮುಖ, ನದಿ, ಆಕಳು

## IV. ಚಟುವಟಿಕೆಗಳು :

೧. 'ನನ್ನ ದೇಶ ನನ್ನ ಜನ' ಪದ್ಯವನ್ನು ಕಂಠಪಾಠ ಮಾಡಿ, ಎಲ್ಲರೂ ಕೂಡಿ ಹಾಡಿರಿ.
೨. ಈ ಪದ್ಯವನ್ನು ನೃತ್ಯದ ಮೂಲಕ ಶಾಲಾ ಕಾರ್ಯಕ್ರಮಗಳಲ್ಲಿ ಪ್ರದರ್ಶಿಸಿ.
೩. ದೇಶಭಕ್ತಿ ಗೀತೆಗಳನ್ನು ಆಲಿಸಿರಿ.

* * * *

©KTBS Not to be republished

# ಪಾಠ – ೫

# ಕೊಡಿ ನನ್ನ ಬಾಲ್ಯವ

– ಮಾಲತಿ ಪಟ್ಟಣಶೆಟ್ಟಿ

**ಪಾಠ ಪ್ರವೇಶ :**

ಬಾಲ್ಯ ಪ್ರತಿಯೊಬ್ಬ ಮನುಷ್ಯನ ಜೀವಿತದ ಅಮೂಲ್ಯ ಕಾಲ. ಅದು ಸುಖದ್ದಿರಲಿ, ದುಃಖದ್ದಿರಲಿ ಆ ನೆನಪುಗಳು ಇಡೀ ಬದುಕನ್ನು ರೂಪಿಸುವ ಪ್ರೇರಕ ಶಕ್ತಿಗಳಾಗಿರುತ್ತವೆ. ಗಂಡು – ಹೆಣ್ಣು, ಮೇಲು – ಕೀಳು, ಬಡವ – ಶ್ರೀಮಂತ ಎನ್ನುವ ಯಾವ ಭಾವನೆಗಳಿಲ್ಲದೆ ಸ್ವಚ್ಛಂದ ಮನಸ್ಸಿನ ಮಕ್ಕಳ ಭಾವನೆಗಳು 'ಕೊಡಿ ನನ್ನ ಬಾಲ್ಯವ' ನಾಟಕದಲ್ಲಿ ವ್ಯಕ್ತಗೊಂಡಿವೆ.

ಮಕ್ಕಳ ಭಾವನೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಉತ್ತರ ಕರ್ನಾಟಕ ಭಾಷೆಯ ಸೊಗಡನ್ನು ಪರಿಚಯಿಸುವುದು ಈ ನಾಟಕದ ಉದ್ದೇಶವಾಗಿದೆ.

## ದೃಶ್ಯ – ೧

(ಶಾಲೂಳ ನಗೆ....ಹಿನ್ನೆಲೆಯಲ್ಲಿ ತಿಳಿ ಸಂಗೀತ....ಹಕ್ಕಿಗಳ ಕಲರವ)

**ಶಾಲೂ** : ಹಾಂ...ಹಾಂ....ಹಾಂ.... ಸಿಕ್ಕೀ....ಸಿಕ್ಕೀ....ಸಿಕ್ಕೀ....ಅವ್ವಾ ಏನ್ ಛಂದವ್ವ ಈ ಪಾತರಗಿತ್ತಿ! ರೆಕ್ಕ್ಯಾನ ಬಣ್ಣೇನು! ಬಣ್ಣದಾಗಿನ ಕಣ್ಣೇನು!! ಆ ಹ ಹ ಹ.... ಆ ಹ ಹ ಹ ಹ....

ಪಾತರಗಿತ್ತೀ ಪಕ್ಕಾ, ನೋಡಿದೇನ ಅಕ್ಕಾ
ಹಸರು ಹಚ್ಚೀ ಚುಚ್ಚಿ ಮೇಲಕರಷಿಣ ಹಚ್ಚೀ
ಏನು ಬಣ್ಣಾ ಬಣ್ಣಾ, ನಡುವೆ ನವಿಲಗಣ್ಣಾ
ರೇಶಿಮೆ ಪಕ್ಕ ನಯಾ, ಮುಟ್ಟಲಾರೆ ಭಯಾ
ಹೂವಿಗೆ ಹೋಗತಾವ, ಗಲ್ಲಾ ತಿವೀತಾವ!
ಪಾತರಗಿತ್ತೀ ಪಕ್ಕಾ, ಪಾತರಗಿತ್ತೀ ಪಕ್ಕಾ
ನೋಡಿದೇನ ಅಕ್ಕ ಅಕ್ಕ ಅಕ್ಕ ಅಕ್ಕ

**ಅವ್ವ** : (ದೂರದಿಂದ ಸನಿಹ ಬರುತ್ತ) ಶಾಲೂ...ಏ ಶಾಲೂ....ಹೋಮ್ ವರ್ಕ್ ಬಿಟ್ಟು ಎಲ್ಲಿ ಹೋದೆವ್ವಾ, ಒಂದ ಜಾಗದಾಗ ಈಕಿನ್ನ ಹಿಡಿದ ಇಡೋದು ಸಾಧ್ಯ ಇಲ್ಲಾ.... ಶಾಲೂ.... ಶಾಲೂ....

**ಶಾಲೂ** : (ನಗುತ್ತ) ಅವ್ವಾ...ಅವ್ವಾ ನೋಡ ಬಾ ಇಲ್ಲೆ..... ನನ್ನ ಕೈಯಾಗ ಏನ ಅದ ಅಂತ ನೋಡು.... ಪಾತರಗಿತ್ತೀ!! ಆಹಾ ಓಹೋ....

©KTBS Not to be republished

**ಅವ್ವ :** ಪಾತರಗಿತ್ತೀನ? ಅದರಾಗ ಅಷ್ಟ ಸಂಭ್ರಮಾ ಪಡೂವಂಥಾದ್ದೇನದ? ಜಗತ್ತಿನ್ಯಾಗ ಕಾಣದ್ದನ್ನ ಕಂಡಷ್ಟು ಖುಷಿ ಆಗೇದ ನಿನಗ.... ಸದಾ ಗಿಡದಾಗ ಇರತೀ.... ನೀನೂ ಒಂದ ಪಾತರಗಿತ್ತೀನ?

**ಶಾಲೂ :** ಅವ್ವಾ ಇದರ ರೆಕ್ಕೆ ರೇಶ್ಮೀ ಹಾಂಗ ಮೃದು ಅದ. ನೋಡದಿ? ಎಷ್ಟ ಬಣ್ಣ ಅವ ಅಂತ? ಹಳದಿ.... ಹಸರು... ಜಾಂಬಳಿ....

**ಅವ್ವ :** ನಡೀ ಹೋಮ್‌ವರ್ಕ್ ಮುಗಸು.... ಸಂಜಾತು ಅಂದ್ರ ಲಕ್ಷ್ಮೀ ಗುಡ್ಯಾಗ ಗದ್ದಲಾ. ಅದಕ್ಕ ನಾಲ್ಕ ಗಂಟೇಗೆಲ್ಲಾ ಹೊರಡೋಣಾ... ಅಲ್ಲಿಂದ ಪ್ಯಾಟಿಗೆ ಹೋಗಬೇಕು. ಆಮೇಲೆ ಹೊರಗ ಊಟಾ ಮುಗಿಸಿಕೊಂಡ ಬರೋಣ.

**ಶಾಲೂ :** ಅವ್ವಾ ನಾ ಬರೂದಿಲ್ಲಾ.... ನಿನ್ನ ಗುಡಿಗುಂಡಾರು, ಪ್ಯಾಟಿ ಕ್ವಾಟಿಗೆ ನಾ ಬರೂದಿಲ್ಲಾ. ಅಪ್ಪನ ಕರಕೊಂಡ ಹೋಗು. ನಾನು ರಾಜೂನ ಮನೀಗೆ ಹೋಗಬೇಕು. ಟೀಚರ ಬರೀಲಿಕ್ಕೆ ಕೊಟ್ಟಾರ.

**ಅವ್ವ :** ಶಾಲೂ ಏನವ್ವಾ ನೀನು? ಹಗಲು ಹನ್ನೆರಡು ತಾಸೂ ರಾಜೂನ ಬೆನ್ನ ಹತ್ತಿರತೀ... ನೋಡಿಲ್ಲೆ, ನೀನು ಹುಡಗಿ, ಅವ ಹುಡಗಾ. ದೂರ ಇರಬೇಕು. ಏನೋ ಬಾಜೂಮನಿ ಹುಡಗಾ ಅಂತ ಸುಮ್ಮನಿರತೇನಿ ಗೆಳೆತನಾ ಎಷ್ಟೋ ಅಷ್ಟ ಇರಬೇಕು.... ತಾಕೀತು ಮಾಡತೇನಿ.

**ಶಾಲೂ :** ಇದೇನವ್ವಾ ನೀ ಹೇಳೂದು? ಹುಡುಗಿ ಹುಡುಗಾ ಅಂತ. ರಾಜೂ ಕ್ಲಾಸಿನ್ಯಾಗ ಅವ ಎಷ್ಟು ಶಾಣ್ಯಾ ಇದ್ದಾನ ಅನ್ನೋದು ನಿನಗ ಗೊತ್ತಿಲ್ಲಾ.... ನನಗ ತಿಳೀತೇನು. ಅವನ ಹೆಲ್ಪ ತೊಗೋತೀನಿ ಅವನ ಬೆನ್ನ ಹತ್ತದಿದ್ದರ... ನಾ ನಪಾಸಾಗತೇನಿ.

**ಅವ್ವ :** ಅದೆಲ್ಲಾ ಇರಲಿ.... ಅವರವ್ವಾ ಅಪ್ಪಾ ಕೂಲೀಗೆ ಹೋಗೋ ಜನ... ಅವರ ಕೂಡ ನಮ್ಮದೇನ ಸಂಬಂಧಾ? ಮೇಲು, ಕೀಳು ಎಂಬ ಭಾವನೆ ಮೂಡುತ್ತದೆ-ಇದು ತಪ್ಪು.

**ಶಾಲೂ :** ಅವ್ವಾ ಅವ್ವಾ ಪ್ಲೀಜ್ ಹಂಗೆಲ್ಲಾ ಮಾತಾಡಬ್ಯಾಡಾ....ಅವರ ಮನೀಗೆ ಹೋದ್ರ ನನಗ ಎಷ್ಟು ತಿನಸ್ತಾರ, ಉಣಸ್ಯಾರ ಗೊತ್ತದ ಏನು?.... ರಾಜೂನ ತಂಗೀ ಗಂಗೂ ನನ್ನ ಎಷ್ಟು ಹಚಗೊಂಡದ ಗೊತ್ತದ ಏನು?... ನನ್ನ ಮನ್ಯಾಗ ತಂಗೀನೂ ಇಲ್ಲಾ ತಮ್ಮನೂ ಇಲ್ಲಾ.... ಹಗಲೆಲ್ಲಾ ನೀನು ರಾಜೂನ ಮನೀಗೆ ಹೋಗಬ್ಯಾಡ ....ಹೋಗಬ್ಯಾಡ ಅಂತೀ, ಹಿಂಗ ಕಾಡಿದ್ರ ನಾ ಅಜ್ಜನ ಹಳ್ಳಿಗೆ ಹೋಗ್ತೀನಿ.



© KTBS Not to be republished

**ಅವ್ವ** : ನಮ್ಮ ಅಂತಸ್ತಿಗೆ ಅವರ ಒಡನಾಟ ಸರಿ ಅಲ್ಲಾ.... ಇಷ್ಟ ತಿಳಿಕೋ ಹಗಲೆಲ್ಲಾ ರಾಜೂನ ಮನೀಗೆ ಹೋಗಬ್ಯಾಡಾ ಅಂದ್ರ ನಾ ಅಜ್ಜನ ಹಳ್ಳೀಗೆ ಹೋಗತೇನಿ.... ರಾಜೂನ ಬಿಟ್ಟು ನನಗ ಇರಲಿಕ್ಕೆ ಸಾಧ್ಯ ಇಲ್ಲಾ ಅಂತ ಏನೇನೋ ಅಂತಿ, ಏನ ಉದ್ಧಟ ಹುಡಗಿ ನೀನು?.... ಅಜ್ಜನ ಹಳ್ಳಿಗೆ ಹೋಗತಾಳಂತ, ಏನ ಹಿಂಗ ಹಟಾ ಹಿಡದ್ರ?

**ಶಾಲೂ** : ನಾ ಬರೂದಿಲ್ಲವ್ವಾ.... ಟೀಚರು ಹೋಮ್‌ವರ್ಕ್ ಕೊಟ್ಟಾರ, ರಾಜೂನ ಮನೀಗೆ ಹೋಗಬೇಕು.

* * * * *

## ದೃಶ್ಯ – ೨

(ಬಾಗಿಲ ಚಿಲಕದ ಸಪ್ಪಳ)

**ಶಾಲೂ** : ಓ ರಾಜೂ ಬಾ.... ಬಾ ನಾನ ಬರಬೇಕಂತ ಮಾಡಿದ್ದೆ .....

**ರಾಜು** : ಶಾಲೂ ನಿನಗೊಂದ ಮಜಾ ಸುದ್ದಿ ಅದ! (ಮೆಲುಧ್ವನಿಯಲ್ಲಿ) ನಿಮ್ಮ ಅವ್ವ... ಅಪ್ಪಾ ಇದ್ದಾರಾ?

**ಶಾಲೂ** : ಅವರಿಲ್ಲ ರಾಜೂ ಅಂಜಬ್ಯಾಡಾ ಬಾ ಒಳಗ.... ಏನು ಸುದ್ದಿ?


**ರಾಜು** : ನಿನ್ನೆ ಗೌರಿ ಆಕಳ ಕರಾ ಹಾಕೇದ. ಅದು ಎಷ್ಟು ಛಂದದ ಗೊತ್ತದ ಏನು? ಒಂದು ಎಳೆ ಬಿಳೇ ಚಿಗರಿ ಚಿಗರಿ ಮರಿ ನೋಡಿದಾಂಗ ಅನಸ್ತದ.... ನಾ ಅನಕಾ ಕುಣಿದಾಡಿ ಬಿಟ್ಟೆ. ಬಾ ತೋರಸ್ತೇನಿ ಬಾ.... ಅವ್ವ, ಅಪ್ಪ ನಿನ್ನ ಕರಿ ಅಂದಾರ ಮತ್ತ ನಿನಗ ಗಿಣ್ಣದ ವಡಿ ತಿನ್ನಲಿಕ್ಕೆ ಕೊಡತೇನಿ ಅಂದಾರ.
(ಸ್ವಲ್ಪ ಸಮಯ ಮ್ಯೂಸಿಕ್, ಅಂಬಾ.... ಅಂಬಾ.... ಎನ್ನುವ ಆಕಳ ಕರುವಿನ ಕೂಗು. ಕೊರಳ ಗಂಟೆಗಳ ಸಪ್ಪಳ).

**ಶಾಲೂ** : (ನಗುತ್ತ) ರಾಜೂ ರಾಜೂ ಗೌರಿ ಕರಾ ನೋಡು ಎಷ್ಟ ಛಂದ ಅದ ಅಲ್ಲಾ! ಬೆಳ್ಳಗ ಬೆಳದಿಂಗಳ ಮರಿ ಆಗೇದ .... ನಾ ಇದನ್ನ ಎತ್ತಿಗೊಳ್ಳಲಾ?

**ರಾಜು** : ನಿನ್ನೆ ಹುಟ್ಟಿದ ಮರಿ ಇದು.... ಅವ್ವ ಅದಕ್ಕ ಏನೇನೋ ಆರೈಕಿ ಮಾಡತ್ತಾಳ ... ನಾಳೆ ಬಾ ಎತ್ತಿಗೊಳ್ಳುವಿಯಂತೆ.

**ಶಾಲೂ** : ನಾ ಈ ಚಿಗರಿ ಮರೀನ್ನ ನಮ್ಮ ಮನೀಗೆ ಒಯ್ಯುತ್ತೀನಿ.

©KTBS Not to be republished



**ರಾಜು** : ಮರಿ ಭಾಳ ಸಣ್ಣದದ, ನಾಲ್ಕಾರು ತಿಂಗಳಾ ಆರೈಕೆ ಆಗಬೇಕು. ಮತ್ತ ಈ ಮರಿ, ಗೌರಿ ಆಕಳು ಇಲ್ಲೇ ಇರುತಾವ .... ನೀ ಬೇಕಾದಾಗ ಬಾ, ಆಡು.

**ಶಾಲೂ** : ನಾ ಇವತ್ತ ರಾತ್ರಿ ಈ ಮರಿ ಹತ್ರ ಮಲಗತೇನಿ .... ನೀನು?

**ರಾಜು** : (ನಗುತ್ತ) ನಾನೂ .... (ಇಬ್ಬರೂ ನಗುತ್ತಾರೆ)
(ಶಾಲೂ ಏ ಶಾಲೂ ... ಅಪ್ಪನ ಕೂಗು)

**ಶಾಲೂ** : ಅಪ್ಪ ಬಂದರು ಅಂತ ಕಾಣಸ್ತದ.

* * * *

## ದೃಶ್ಯ – ೩

**ಅಪ್ಪ** : ದೀಪಾವಳಿ ರಜಾ ನಾಳಿಂದ ಶುರು ಆಗತದ ಏನು?

**ಶಾಲೂ** : ಹೌದಪ್ಪ ಹತ್ತ ದಿನಾ ಸೂಟೀ

©KTBS Not to be republished

ಅಪ್ಪ : ಶಾಲೂ ನಿಮ್ಮ ದೊಡ್ಡಪ್ಪನ ಫೋನ ಬಂದದ.... ಅವರು ಹೊಸಾ ಮನೀ ತಗೊಂಡಾರ, ಗೃಹಪ್ರವೇಶಕ್ಕೆ ಕರದಾರ... ನಾಳೆ ನಾವೆಲ್ಲಾ ಬೆಂಗಳೂರಿಗೆ ಹೋಗಬೇಕು .... ನಿನ್ನ ಬಟ್ಟೆ ಬರೆ ಎಲ್ಲಾ ಪ್ಯಾಕ್ ಮಾಡು.

ಶಾಲೂ : (ಅಳುತ್ತ) ಅಪ್ಪಾ ನನಗ ಅಜ್ಜಾ, ಅಜ್ಜಿ ನೆನಪ ಆಗಲಿಕ್ಕೆ ಹತ್ಯೇದ!.... ನಾ ಅಜ್ಜನೂರಿಗೆ ಹೋಗಬೇಕು.... ಮಾಮಾ ಕರೀಲಿಕ್ಕೆ ಬರ್ತಾನಂತ.... ಅವನ ಫೋನ ಬಂದಿತ್ತು.

ಅಪ್ಪ : ಆ ಹಳ್ಳಿಗೆ ಹೋಗಿ ಏನ ಮಾಡತೀ?

ಶಾಲೂ : ಅಜ್ಜನ ಹೊಲಾ ಅದ, ತ್ವಾಟಾ ಅದ, ನೋಡತೇನಿ.... ನದಿ ಅದ, ಬೆಟ್ಟಾಗುಡ್ಡಾ, ಕಾಡು ಎಲ್ಲಾ ಅದ. ಮತ್ತೆ .... ಮಾಮಾನ ಮೂರೂ ಮಕ್ಕಳ ಜೋಡಿ ನಾನು ಆಟಾ ಆಡತೀನಿ.

ಅಪ್ಪ : ಬೆಂಗಳೂರು ದೊಡ್ಡ ಊರು. ಅಲ್ಲೆ ಲಾಲ್ ಬಾಗದ, ಕಬ್ಬನ್ ಪಾರ್ಕ್ ಅದ...... ವಿಧಾನಸೌಧ ಅದ....ದೊಡ್ಡಪ್ಪನ ಮಕ್ಕಳೂ ಬ್ಯಾರೆ ಊರಿಂದ ಬರತಾರ.

ಶಾಲೂ : ಅಪ್ಪ ಅವರೆಲ್ಲ ದೊಡ್ಡ ದೊಡ್ಡವರು... ಅವರು ನನ್ನ ಕೂಡ ಆಡಲಿಕ್ಕೆ ಬರೂದಿಲ್ಲಾ. ಆ ಗದ್ದಲದ ಊರಾಗ ಯಾರ್‍ಯಾರೂ ಮಾತಾಡಸೋದಿಲ್ಲಾ. ಎಲ್ಲಾರ ಮಾರಿ ಮಿಕಿ ಮಿಕಿ ನೋಡಕೋತ ಮಂಗ್ಯಾ ಆಗಬೇಕು. ಹಳ್ಳೀಗೆ ನಾ ಹೋದ್ರ ಇಡೀ ಹಳ್ಳೀ ಜನಾ ಮಾತಾಡಿಸತಾರ... ಅಂದಾಂಗ ಈ ಸಲೆ ಮಾಮಾ ಈಸೂದನ್ನ ಕಲಸ್ತಾನಂತ....

ಅಪ್ಪ : ಶಾಲೂ ಅಲ್ಲೆ ಮದಲಿನ್ಯಾಂಗ ನೀರು ಸ್ವಚ್ಛ ಇರೂದಿಲ್ಲ. ನೀನು ಹಳ್ಳಿಗೆ ಹೋಗೋದು ಬ್ಯಾಡ.

* * * * *

## ದೃಶ್ಯ – ೪

ಅಪ್ಪ : ಶಾಲೂ ಬೆಂಗಳೂರಿಗೆ ನಮ್ಮ ಕೂಡ ಯಾಕ ಬರೂದಿಲ್ಲಾ?

ಅವ್ವ : ಆಕಿ ಮಾಮಾ ಫೋನ್ ಮಾಡ್ಯಾನ.....ಶಾಲೂ ಹಳ್ಳಿಗೆ ಹೊರಟಾಳ.

ಅಪ್ಪ : ಅಲ್ಲೆ ನಿನ್ನ ದೊಡ್ಡಪ್ಪ, ದೊಡ್ಡಮ್ಮ, ಅಣ್ಣಾ, ಅಕ್ಕಾ ಎಲ್ಲಾರೂ ನಿನ್ನ ಕೇಳತಾರ..... ಅವರಿಗೆ ಏನು ಉತ್ತರ ಹೇಳ್ಬೇಕು?



©KTBS Not to be republished

**ಶಾಲೂ :** ಅಪ್ಪಾ, ನಾ ನಿಮ್ಮೆಲ್ಲಾರ ಮಾತ ಕೇಳಕೋತ ಬಂದೇನಿ, ಒಂದೊಂದ ಸಲ ನನ್ನ ಮನಸ್ಸು ಏನೇನೋ ಹೇಳತದ, ಅದರ ಮಾತ ಕೇಳಬಾರದ? ನೀವಿಬ್ಬರೂ ಆಫೀಸಿಗೆ ಹೋಗತೀರಿ. ಒಬ್ಬಾಕೀನ ನನಗ ಬ್ಯಾಸರಾಗತದ. ಅಜ್ಜನ ಊರಿನ್ಯಾಗಿನ ತೋಟಾ, ಹೊಲಾ ನೋಡಬೇಕು, ಜಾತ್ರಿಗೆ ಹೋಗಬೇಕು, ನಾಟಕಾ ನೋಡಬೇಕು, ನನಗ ತಂಗಿಲ್ಲಾ, ತಮ್ಮಿಲ್ಲಾ, ಯಾರ ಕೂಡ ಆಡಲಿ? ಅದಕ್ಕ ರಾಜೂ ಬೇಕು, ಗೊಂಬಿ ಬೇಕು, ಗೌರಿ ಆಕಳು ಮತ್ತ ಕರಾ ಬೇಕು... ನಿಮಗ ಇವೆಲ್ಲಾ ಬ್ಯಾಡ, ಇವರಿದ್ರ ನಾನು ಖುಷಿಯಿಂದ ಇರತೇನಿ.

**ಅವ್ವ :** ನಿಮ್ಮ ಮಗಳಿಗೆ ನೀವಷ್ಟ ಅಲ್ಲಾ – ಇವರೆಲ್ಲಾ ಬೇಕು. ಆತು ಬಿಡು, ನಿಂದೆಲ್ಲಾ ಪುರಾಣಾ ಬಿಚ್ಚಿಟ್ಟಿ, ನಿನ್ನ ಮನಸ್ಸಿಗೆ ಬಂದಾಂಗ ಮಾಡು.

**ಅಪ್ಪ :** ತೀಳೀತು ಬಿಡು....ಆತು ನೀ ಅಜ್ಜನೂರಿಗೆ ಹೋಗು.

**ಶಾಲೂ :** ಅವ್ವಾ..... ಅಪ್ಪಾ.... ಮತ್ತ ನೀವೂ ಬೇಕೇ ಬೇಕು... ಬೆಂಗಳೂರಿಂದ ಲಗೂ ಬರ್ರೀ

(ಅವ್ವ ಅಪ್ಪನ ಕೈಹಿಡಿದು ಕುಣಿಯುತ್ತಾ ಹಾಡುತ್ತಾ)

ಕಣ್ಣ ತುಂಬ ಕನಸಿವೆ
ಕಾಣುವೆ ಕಾಣುವೆ
ದಾರಿ ಬಿಡಿ ದಾರಿ ಬಿಡಿ

ಎದೆಯ ತುಂಬಿದೆ ಪ್ರೀತಿ
ಹಂಚುವೆ ಹಂಚುವೆ
ಅವಕಾಶ ಕೊಡಿ ಅವಕಾಶ ಕೊಡಿ

ಅಜ್ಜಿ ಬೇಕು ಅಜ್ಜ ಬೇಕು
ಗೆಳೆಯ ಬೇಕು ಗೆಳತಿ ಬೇಕು
ಪಡೆಯುವೆ ದಾರಿ ಬಿಡಿ

ಒಂದೇ ಒಂದು ಬಾಲ್ಯವಿದೆ
ಹಾಡುವೆ ಕುಣಿಯುವೆ ಬೆಳೆಯುವೆ
ಹೇಗೆ ನೋಡಿ ಹೇಗೆ ನೋಡಿ ಹೇಗೆ ನೋಡಿ.

* * * * *

©KTBS Not to be republished

## ಕೃತಿಕಾರರ ಪರಿಚಯ :



**ಪ್ರೊ. ಮಾಲತಿ ಪಟ್ಟಣಶೆಟ್ಟಿ** ಅವರು ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ೧೯೪೦ ರಲ್ಲಿ ಜನಿಸಿದರು. ಆಂಗ್ಲ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಇವರು ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಇವರು 'ಬಾ ಪರೀಕ್ಷೆಗೆ', 'ಗರಿಗೆದರಿ ತಂದೆ ಬದುಕು', 'ಗುಲಾಬಿ', 'ಇಂದು ನಿನ್ನಿನ ಕತೆಗಳು', 'ಸೂರ್ಯ ಮುಳುಗುವುದಿಲ್ಲ', 'ಬಸವರಾಜ ಕಟ್ಟೀಮನಿ ಬದುಕು-ಬರಹ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಇನ್ನಿತರ ಸಂಸ್ಥೆಗಳು ಹಲವಾರು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಪ್ರಸ್ತುತ 'ಕೊಡು ನನ್ನ ಬಾಲ್ಯವ' ನಾಟಕವನ್ನು ಅವರ 'ಮಕ್ಕಳ ಮೂರು ನಾಟಕಗಳು' ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಅಭ್ಯಾಸ

### I. ಪದಗಳ ಅರ್ಥ :

**ಅಂಜು** – ಹೆದರು
**ಉದ್ಧಟ** – ಸೊಕ್ಕಿನ
**ಜಗದಾಗ** – ಸ್ಥಳದಲ್ಲಿ
**ತಾಕೀತು** – ಎಚ್ಚರಿಕೆ; ಕಟ್ಟಪ್ಪಣೆ.
**ನಪಾಸು** – ಅನುತ್ತೀರ್ಣ
**ಪಾತರಗಿತ್ತಿ** – ಚಿಟ್ಟೆ; ಪತಂಗ.
**ಮ್ಯಾಥ್ಸ್** – ಗಣಿತ
**ವಡಿ** – ಗಿಣ್ಣದ ಸಿಹಿ ಹಾಲು.
**ಸೂಟಿ** – ರಜೆ; ಬಿಡುವು.
**ಹೆಲ್ಪ** – ಸಹಾಯ
**ಅರವಿ** – ಬಟ್ಟೆ; ವಸ್ತ್ರ.
**ಗಿಣ್ಣ** – ಕರು ಹಾಕಿದ ಹಸು/ಎಮ್ಮೆಯ ಮೊದಲ ಹಾಲಿನಿಂದ ಮಾಡಿದ ಸಿಹಿ ಪದಾರ್ಥ.
**ಜಾಂಬಳಿ** – ನೇರಳೆಬಣ್ಣ
**ತಾಸು** – ಸಮಯ; ಒಂದು ಗಂಟೆ.
**ಪಕ್ಕ** – ರೆಕ್ಕೆ; ಪುಕ್ಕ.
**ಬಾಜುಮನಿ** – ಪಕ್ಕದ ಮನೆ
**ಲಗೂ** – ಬೇಗ
**ಶಾಣ್ಯ** – ಜಾಣ; ಬುದ್ಧಿವಂತ; ಚುರುಕುಳ್ಳವ.
**ಹಚಕೊಂಡದ** – ಮನಸ್ಸಿಗೆ ಹಿಡಿಸಿದೆ

©KTBS Not to be republished

## II. ಪ್ರಶ್ನೆಗಳು :

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಶಾಲು ತನ್ನ ಅಮ್ಮನಿಗೆ ಪಾತರಗಿತ್ತಿಯನ್ನು ಯಾವ ರೀತಿ ವರ್ಣಿಸಿದಳು?

೨. ರಾಜು ಶಾಲುವಿಗೆ ತಿಳಿಸಿದ ಮಜಾ ಸುದ್ದಿ ಯಾವುದು?

೩. ರಾಜು ಆಕಳ ಕರುವಿನ ಚಂದವನ್ನು ಯಾವ ರೀತಿ ಬಣ್ಣಿಸಿದನು?

೪. ಶಾಲುವಿನ ಅಪ್ಪ ಅಮ್ಮ ಬೆಂಗಳೂರಿಗೆ ಹೊರಟದ್ದು ಏಕೆ?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಶಾಲು ಪಾತರಗಿತ್ತಿ ಜೊತೆ ಏನೆಂದು ಕುಣಿದು ಹಾಡಿದಳು?

೨. ಶಾಲುವಿಗೆ ಅವಳ ತಾಯಿ ರಾಜು ಮನೆಗೆ ಹೋಗಬೇಡ ಎಂದು ಏಕೆ ತಾಕೀತು ಮಾಡಿದಳು?

೩. ಶಾಲು ರಾಜುವಿನ ಬಗ್ಗೆ ಹೇಳಿದ ಪ್ರಶಂಸೆಯ ಮಾತುಗಳಾವುವು?

೪. ಅಜ್ಜನ ಊರಲ್ಲಿ ಆಟ ಆಡಲು ಶಾಲುವಿಗೆ ಏನೇನು ಸಿಗುತ್ತವೆ?

೫. ಶಾಲುವಿನ ತಂದೆ ಬೆಂಗಳೂರಿನಲ್ಲಿ ಆಟ ಆಡಲು ಯಾವ ಯಾವ ಪ್ರೇಕ್ಷಣೀಯ ಸ್ಥಳಗಳಿವೆ ಎಂದರು?

೬. ಪೇಟೆ ಜನರ ಬಗ್ಗೆ ಶಾಲು ಮಾಡಿದ ಆಕ್ಷೇಪವೇನು?

೭. ಶಾಲು ತಾನು ಯಾವಾಗ ಖುಷಿಯಾಗಿರುವೆನೆಂದು ಅಪ್ಪನಿಗೆ ಹೇಳಿದಳು?

**ಇ) ಈ ಕೆಳಗಿನ ಮಾತನ್ನು ಯಾರು ಯಾರಿಗೆ ಹೇಳಿದರು? ತಿಳಿಸಿರಿ.**

೧. "ನಾ ಇವತ್ತ ರಾತ್ರಿ ಈ ಮರಿ ಹತ್ರ ಮಲಗತೇನಿ."

೨. "ಆ ಗದ್ದಲದ ಊರಾಗ ಯರ‍್ಯಾರೂ ಮಾತಾಡಸೋದಿಲ್ಲ."

೩. "ನನಗೆ ತಂಗಿಲ್ಲಾ, ತಮ್ಮಿಲ್ಲಾ ಯಾರ ಕೂಡ ಆಡಲಿ?"

©KTBS Not to be republished

ಈ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಯ ಉತ್ತರಗಳಿಂದ ಸರಿಯಾದುದನ್ನು ಆರಿಸಿ ತುಂಬಿರಿ.

೧. ಶಾಲು ____________ ವಿಷಯದಲ್ಲಿ ನಪಾಸಾಗಿದ್ದಳು.

ಅ) ಕನ್ನಡ ಆ) ವಿಜ್ಞಾನ ಇ) ಇಂಗ್ಲೀಷು ಈ) ಗಣಿತ

೨. ರಾಜು ಮನೆಯಲ್ಲಿದ್ದ ಆಕಳ ಹೆಸರು ____________

ಅ) ಗೌರಿ ಆ) ಗಂಗೆ ಇ) ತುಂಗೆ ಈ) ಭದ್ರೆ

೩. ನೀರು ಸ್ವಚ್ಛ ಇಲ್ಲದ್ದರಿಂದ ಶಾಲು ____________ ಹೋಗುವುದು ಬೇಡ ಎಂದು ಅವರ ತಂದೆ ಹೇಳಿದರು.

ಅ) ಹಳ್ಳಿಗೆ ಆ) ಬೆಂಗಳೂರಿಗೆ ಇ) ಈಸಲು ಈ) ರಾಜುಮನೆಗೆ

೪. ಲಾಲ್‌ಬಾಗ್ ____________ ನಗರದಲ್ಲಿದೆ.

ಅ) ಮೈಸೂರು ಆ) ಮಂಗಳೂರು ಇ) ಬೆಂಗಳೂರು ಈ) ಬೆಳಗಾವಿ

## III. ಭಾಷಾಭ್ಯಾಸ :

ಅ) ಪ್ರಸ್ತುತ ಪಾಠದಲ್ಲಿ ಬಳಕೆಯಾಗಿರುವ ಈ ಗ್ರಾಮ್ಯ ಪದಗಳನ್ನು ಗಮನಿಸಿ, ಅವುಗಳನ್ನು ಮಾದರಿಯಂತೆ ಗ್ರಾಂಥಿಕ ಭಾಷೆಗೆ ಬದಲಿಸಿ ಬರೆಯಿರಿ.

**ಮಾದರಿ :** ಹಾಂಗ – ಹಾಗೆ ಸಿಕ್ಕೀ – ಸಿಗುವುದು.

| | | | |
|---|---|---|---|
| ಥಂದವ್ವ | – ____________ | ಬಣ್ಣೇನು | – ____________ |
| ತಿವೀತಾವ | – ____________ | ಈಕಿನ್ನ | – ____________ |
| ಕೈಯಾಗ | – ____________ | ಸಂಜಾತು | – ____________ |
| ಗುಡ್ಯಾಗ | – ____________ | ಪ್ಯಾಟಿಗೆ | – ____________ |
| ಕ್ವಾಟಿ | – ____________ | ಬರೀಲಿಕ್ಕೆ | – ____________ |
| ಕೊಟ್ಟಾರ | – ____________ | ಮನೀಗೆ | – ____________ |
| ತಿನಸ್ತಾರ | – ____________ | ಉಣಸ್ತಾರ | – ____________ |
| ಚಿಗರಿ | – ____________ | ಕರದಾರ | – ____________ |
| ಮನೀ | – ____________ | ಹತ್ರ | – ____________ |

©KTBS Not to be republished

ಆ) ಇಲ್ಲಿರುವ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

೧. ಸಂಭ್ರಮ : ______________________

೨. ಗೆಳೆತನ : ______________________

೩. ತಾಕೀತು : ______________________

೪. ತಾಸು : ______________________

೫. ಒಡನಾಟ : ______________________

೬. ಸೂಟಿ : ______________________

೭. ಕಾಳಜಿ : ______________________

ಇ) ಇಲ್ಲಿರುವ ಪದಗಳನ್ನು ಬಿಡಿಸಿ ಬರೆಯಿರಿ.

೧. ಕಣ್ಣೇನು

೨. ಮೇಲಕರಿಷಿಣ

೩. ನವಿಲಗಣ್ಣ

೪. ಭೆಟ್ಟಿಯಾಗಲಿಕ್ಕೆ

೫. ನೀವಿಬ್ಬರು

೬. ಹೇಳ್ಬೇಕು

ಈ) ಇಲ್ಲಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಪಾಸು X ..........................................

ಮೃದು X ..........................................

ದೂರ X ..........................................

ಸಾಧ್ಯ X ..........................................

ಹಳ್ಳಿ X ..........................................

ಸಣ್ಣದು X ..........................................

## IV. ಚಟುವಟಿಕೆ :

೧. ಈ ನಾಟಕದಲ್ಲಿ ಬರುವ ಪಾತ್ರಗಳನ್ನು ಹಂಚಿಕೊಂಡು ಅಭ್ಯಾಸ ಮಾಡಿ, ನಿಮ್ಮ ಶಾಲಾ ವಾರ್ಷಿಕೋತ್ಸವದಲ್ಲಿ ಅಭಿನಯಿಸಿರಿ.

೨. ರಜಾ ದಿನಗಳಲ್ಲಿ ಹಳ್ಳಿಗಳಿಗೆ ಭೇಟಿ ನೀಡಿ, ಅಲ್ಲಿಯ ಜನ ಮತ್ತು ಪರಿಸರದೊಂದಿಗೆ ಬೆರೆತು ಆಟ ಆಡಿರಿ.

೩. ಪಾಠದಲ್ಲಿ ಬಳಕೆಯಾಗಿರುವ ಗ್ರಾಮ್ಯ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ.

©KTBS Not to be republished

## V. ಸೈದ್ಧಾಂತಿಕ ವ್ಯಾಕರಣ :

**ಪದ :** ಹಲವು ಅಕ್ಷರಗಳು ಸೇರಿ ಒಂದು ಪದವಾಗುತ್ತದೆ. ಈ ರೀತಿಯ ಪದ ನಿರ್ದಿಷ್ಟ ಅರ್ಥವನ್ನು ಹೊಂದಿರಬೇಕು.

**ಉದಾ :** ವೀ, ರ = ವೀರ (ಇದರ ಅರ್ಥ ಶೂರ)

ಕೆ, ಳ, ದಿ = ಕೆಳದಿ (ಇದು ಊರ ಹೆಸರು)

ಹೋ, ರಾ, ಡು = ಹೋರಾಡು (ಇದರ ಅರ್ಥ ಯುದ್ಧ)

**ಇಂತಹ ಅನೇಕ ಪದಗಳು ಕೂಡಿ ಸಂಪೂರ್ಣ ಅರ್ಥಕೊಡುವ ಪದಗಳ ಗುಂಪಿಗೆ ವಾಕ್ಯ ಎನ್ನುವರು.**

**ಉದಾ :** ೧. ರಾಧೆ ಶಾಲೆಗೆ ಹೋಗುತ್ತಾಳೆ.

೨. ಆಕಳು ಕರುವಿಗೆ ಹಾಲು ಉಣಿಸಿತು.

೩. ಔರಂಗಜೇಬನ ಕೋಪಕ್ಕೆ ಹೆದರಿ ರಾಜರು ರಕ್ಷಣೆ ನೀಡಲು ನಿರಾಕರಿಸಿದರು.

### ವಾಕ್ಯಗಳ ಪ್ರಕಾರಗಳು:

೧. ಶ್ರೀಮತಿ ಸಾವಿತ್ರಿ ಯಾವ ಜಿಲ್ಲೆಯ ಅಧಿಕಾರಿಯಾಗಿದ್ದಾರೆ? **(ಪ್ರಶ್ನಾರ್ಥಕ ವಾಕ್ಯ)**

೨. ಶ್ರೀಮತಿ ಸಾವಿತ್ರಿ ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದಾರೆ. **(ಸಾದಾ /ಸಾಮಾನ್ಯ ವಾಕ್ಯ)**

೩. ಓಹೋ! ಅವರು ಜಿಲ್ಲಾಧಿಕಾರಿ. **(ಭಾವ ಸೂಚಕ ವಾಕ್ಯ)**

೪. ನೀನು ಮನೆಗೆ ಹೋಗು. **(ಆಜ್ಞಾರ್ಥಕ ವಾಕ್ಯ)**

**ಇಂತಹ ೪ ವಾಕ್ಯಗಳನ್ನು ನೀವು ರಚಿಸಿರಿ.**

೧. ______________________________

೨. ______________________________

೩. ______________________________

೪. ______________________________

* * * * *

©KTBS Not to be republished

## ಪಾಠ – ೬

# ನಮ್ಮೂರ ಕೆರೆ

– ಚಿದಾನಂದ ಸಾಲಿ

**ಪಾಠ ಪ್ರವೇಶ :**

ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ಸಿಲುಕಿ ನಮ್ಮ ನೆಲ ಜಲ ಸಂಸ್ಕೃತಿ ನಲುಗುತ್ತಿವೆ. ಶುದ್ಧನೆಲ, ಶುದ್ಧಜಲ, ಶುದ್ಧಗಾಳಿ ಸಿಗುವುದು ದುರ್ಲಭವಾಗಿದೆ. ಹಚ್ಚಹಸಿರು ಪ್ರದೇಶದಲ್ಲಿ ಕಾರ್ಖಾನೆಗಳು ತಲೆಯೆತ್ತುತ್ತಿವೆ. ಕೆರೆಗಳು ಬತ್ತುತ್ತಿವೆ. ನಿವೇಶನಗಳು ಮೈದಳೆಯುತ್ತಿವೆ. ಇದರ ಪರಿಹಾರಕ್ಕಾಗಿ ನಾವೇನು ಮಾಡಬಹುದು? ವಿಚಾರ ಮಾಡಿರಿ. ನಿಮ್ಮೂರ ಕೆರೆಯನ್ನು ಹೋಗಿ ನೋಡಿರಿ. ಹಿಂದೆ ಹೇಗಿತ್ತು? ಈಗ ಹೇಗಾಗಿದೆ ? ಎಂಬುದನ್ನು ಹಿರಿಯರಿಂದ ತಿಳಿದುಕೊಳ್ಳಿ. ಅದರ ಉಪಯೋಗದ ಬಗ್ಗೆ ತರಗತಿಯಲ್ಲಿ ಚರ್ಚಿಸಿರಿ. ಈ ಬಗ್ಗೆ ಚಿಂತನೆಗೆ ಹಚ್ಚುವುದೇ ಈ ಕವಿತೆಯ ಮೂಲ ಉದ್ದೇಶವಾಗಿದೆ.



KTBS Not to be Republished

ಸುತ್ತ ಹತ್ತೂರಲ್ಲಿ ಮುತ್ತಂತೆ ನಮ್ಮ ಕೆರೆ
ಅದರ ಉಳಿವಿನ ಕಥೆಯ ಕೇಳಿರೆಲ್ಲ । ಪ ।

ಕೆರೆಯ ದಾರಿಯಲೆಲ್ಲ ತಂಪು ತಂಬೆಲರು
ಏರಿಯ ಸುತ್ತೆಲ್ಲ ಕಾವಲಿನ ಮರಸಾಲು
ಒಂದೊಂದು ಮರದಲ್ಲಿ ಹತ್ತಾರು ಟೊಂಗೆಗಳು
ಹತ್ತಾರು ಟೊಂಗೆಯಲಿ ನೂರಾರು ಹಕ್ಕಿಗಳು । ಸುತ್ತ ।

ಬೆಳ್ಳಿ ತಟ್ಟೆಯ ಹಾಗೆ ಹೊಳೆ ಹೊಳೆವ ನೀರು
ಮಿಂಚುಬಳ್ಳಿಯ ಹಾಗೆ ಥಳ ಥಳಿಪ ಮೀನು
ಕಪ್ಪೆಗಳ ವಟವಟರು, ಸುತ್ತ ಮೇಯುವ ಟಗರು
ದನಗಾಹಿಯ ಹಾಡಿಗೆ ತಲೆದೂಗುವಾ ಪೈರು । ಸುತ್ತ ।

ಕಾರ್ಖಾನೆಗಳು ಬಂದು, ಜನಸಂಖ್ಯೆ ಬೆಳೆದು
ಗಟಾರದ ಕೊಳೆಯೆಲ್ಲ ಕೆರೆಯೊಳಗೆ ಬೆರೆತು
ಭೂತಾಯಿ ಎದೆ ತುಂಬ ಕೊಳವೆಬಾವಿಯ ಕೊರೆದು
ನೀರಸೆಲೆಯೂ ಬತ್ತಿಹುದು, ಕೆರೆ ಒಡಲು ಬಿರಿದು । ಸುತ್ತ ।

ಊರ ಜನರು ಸಭೆಯ ಸೇರಿ ಒಮ್ಮತಕೆ ಬರಲು
ಹೊಗೆ ಬೆಂಕಿ ಕಾರ್ಖಾನೆಯ ಊರಾಚೆ ಇಡಲು
ಮನೆಗೆರಡು ಮರ, ಕೆರೆ ಸುತ್ತ ಬನ ನೆಡಲು
ಪ್ಲಾಸ್ಟಿಕಿನ ಬಳಕೆಗೆ ವಿದಾಯವ ಹೇಳಲು । ಸುತ್ತ ।

ನಮ್ಮೂರ ನೆಲವೀಗ ಜಲನಿಧಿಯ ಆಗರವು
ಮರಗಳಲಿ ಮತ್ತೀಗ ಹಸಿರು ಹಕ್ಕಿಯ ಹಾಡು
ಉಪ್ಪು ತಿಂದವ ನೀರು ಕುಡಿಯಲೇ ಬೇಕಲ್ಲ
ತಪ್ಪು ಮಾಡಿದ ನಾವೇ ಸರಿಪಡಿಸಬೇಕಲ್ಲ । ಸುತ್ತ ।

– ಚಿದಾನಂದ ಸಾಲಿ

©KTBS Not to be republished

## ಕೃತಿಕಾರರ ಪರಿಚಯ :



**ಚಿದಾನಂದ ಸಾಲಿ** ರಾಯಚೂರು ಜಿಲ್ಲೆಯ ಆಶಾಪುರ ಗ್ರಾಮದವರು. ಇವರು **'ಎಲೆಯುದುರುವ ಕಾಲ', 'ಮೌನ', 'ಧರೆಗೆ ನಿದ್ರೆಯು ಇಲ್ಲ', 'ಯಜ್ಞ', 'ಚೌಕಟ್ಟಿನಾಚೆ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರು ಕಣವಿ ಕಾವ್ಯ ಪ್ರಶಸ್ತಿ, ವಸುದೇವ ಭೂಪಾಲಂ ದತ್ತಿ ಪ್ರಶಸ್ತಿ, ಪ್ರೊ ಎಸ್.ವಿ. ಪರಮೇಶ್ವರ ಭಟ್ಟ ಪ್ರಶಸ್ತಿ, ಬೇಂದ್ರೆ ಗ್ರಂಥ ಬಹುಮಾನ, ಸೋಮೇಶ್ವರ ಕಥಾ ಪ್ರಶಸ್ತಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪುಸ್ತಕ ಬಹುಮಾನಗಳಿಗೆ ಭಾಜನರಾಗಿದ್ದಾರೆ. ಇವರು ತೆಲುಗು, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಿಂದ ಕೆಲವು ಕೃತಿಗಳನ್ನು ಅನುವಾದ ಮಾಡಿದ್ದಾರೆ.

## ಅಭ್ಯಾಸ

### I. ಪದಗಳ ಅರ್ಥ :

**ಆಗರ** – ಕಣಜ

**ಒಡಲು** – ದೇಹ; ಶರೀರ; ಹೊಟ್ಟೆ.

**ಕಾವಲು** – ಹುಲ್ಲುಗಾವಲು; ದನಕರುಗಳನ್ನು ಮೇಯಿಸಲು ಮೀಸಲಾಗಿರುವ ಸ್ಥಳ.

**ಗಟಾರ** – ಚರಂಡಿ

**ತಂಬೆಲರು** – ತಂಪಾದ ಗಾಳಿ

**ಪೈರು** – ಬೆಳೆ

**ಬನ** – ವನ

**ಸೆಲೆ** – ನೀರು ಒಸರುವ ಜಾಗ

**ಏರಿ** – ಎತ್ತರವಾದ ಕಟ್ಟೆ

**ಒಮ್ಮತ** – ಎಲ್ಲರ ಅಭಿಪ್ರಾಯ ಒಂದೇ ಆಗಿರುವುದು.

**ಕೊಳೆ** – ಹೊಲಸು

**ಜಲನಿಧಿ** – ಸಮುದ್ರ; ಸಾಗರ.

**ದನಗಾಯಿ** – ದನಗಳನ್ನು ಕಾಯುವವನು

**ಬತ್ತು** – ಒಣಗು

**ವಿದಾಯ** – ಬೀಳ್ಕೊಡುಗೆ

**ಉಪ್ಪು ತಿಂದವ ನೀರು ಕುಡಿಯಲೇಬೇಕು** – ಇದೊಂದು ಗಾದೆ ಮಾತು. ಇದರ ಅರ್ಥ ತಪ್ಪು ಮಾಡಿದವ ಶಿಕ್ಷೆ ಅನುಭವಿಸಲೇಬೇಕು.

### II. ಪ್ರಶ್ನೆಗಳು :

**ಅ) ಇಲ್ಲಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕೆರೆಯ ಏರಿಯ ಸುತ್ತ ಯಾವುದರ ಕಾವಲಿತ್ತು?

೨. ಕೆರೆಯ ನೀರು ಹಾಗೂ ಮೀನು ಯಾವ ರೀತಿ ಹೊಳೆಯುತ್ತಿದ್ದವು?

©KTBS Not to be republished

೩. ಭೂಮಿಯೊಳಗಿನ ನೀರಸೆಲೆ ಬತ್ತಿಹುದು ಏಕೆ?

೪. ಕೆರೆಯ ಉಳಿವಿಗೆ ಊರಿನ ಜನ ಯಾವುದಕ್ಕೆ ವಿದಾಯ ಹೇಳಿದರು?

೫. ನಮ್ಮೂರ ಕೆರೆ ಈಗ ಯಾವುದರ ಆಗರವಾಗಿದೆ ಎಂದು ಕವಿ ಹೇಳುತ್ತಾರೆ?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. 'ನಮ್ಮೂರ ಕೆರೆ' ಪದ್ಯದಲ್ಲಿ ಕವಿ ಕೆರೆಯ ದಾರಿಯನ್ನು ಯಾವ ರೀತಿ ವರ್ಣಿಸಿದ್ದಾರೆ?

೨. 'ನಮ್ಮೂರ ಕೆರೆ' ಪದ್ಯದಲ್ಲಿ ಕವಿ ಕೆರೆಯ ಸೊಬಗನ್ನು ಯಾವ ರೀತಿ ಬಣ್ಣಿಸಿದ್ದಾರೆ?

೩. ಕೆರೆಯ ಒಡಲು ಬತ್ತಿ ಹೋಗಲು ಕಾರಣಗಳೇನು?

೪. ಕೆರೆಯ ಉಳಿವಿಗೆ ಊರ ಜನರು ಕೈಗೊಂಡ ಕ್ರಮಗಳಾವುವು?

೫. 'ನಮ್ಮೂರ ಕೆರೆ' ಪದ್ಯದಲ್ಲಿ ಕವಿ ನೀಡುವ ಸಂದೇಶವೇನು?

## III. ಭಾಷಾಭ್ಯಾಸ :

**ಅ) ಇಲ್ಲಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ :** ಹತ್ತಾರು = ಹತ್ತು + ಆರು

೧. ಕೇಳಿರೆಲ್ಲ = ________ + ________

೨. ಒಂದೊಂದು = ________ + ________

೩. ಹತ್ತೂರು = ________ + ________

೪. ನೂರಾರು = ________ + ________

೫. ಊರಾಚೆ = ________ + ________

೬. ಮನೆಗೆರಡು = ________ + ________

೭. ಮತ್ತೀಗ = ________ + ________

೮. ನಮ್ಮೂರು = ________ + ________

೯. ನೆಲವೀಗ = ________ + ________

©KTBS Not to be republished

ಆ) ಇಲ್ಲಿರುವ ಪದಗಳಿಗೆ ವಿರುದ್ಧಾರ್ಥ ಪದಗಳನ್ನು ಬರೆಯಿರಿ

೧. ಉಳಿವು x ..................................... ೨. ತಪ್ಪು x .....................................

೩. ಏರಿ x ..................................... ೪. ತಂಪು x .....................................

೫. ಬತ್ತು x ..................................... ೬. ನೆಡು x .....................................

ಇ) ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.

ತಂಬೆಲರು : ______________________________

ಒಮ್ಮತ : ______________________________

ಉಳಿವು : ______________________________

ಒಡಲು : ______________________________

ಆಗರ : ______________________________

ವಿದಾಯ : ______________________________

ಈ) ಥಳ ಥಳ, ಫಳ ಫಳ ಇಂತಹ ಐದು ಪದಗಳನ್ನು ನಿಮ್ಮ ನೆನಪಿನಿಂದ ಬರೆಯಿರಿ.

ಉ) ಈ ಕೆಳಗಿನ ಗಾದೆ/ ಹೇಳಿಕೆ ಮಾತುಗಳನ್ನು ಪೂರ್ಣಗೊಳಿಸಿರಿ.

೧. ಉಪ್ಪು ತಿಂದವ ______________

೨. ಮನೆಗೊಂದು ಮರ ಊರಿಗೊಂದು ______________

೩. ಹಸಿರೇ ______________

೪. ಮರದಿಂದ ಮಳೆ; ಮಳೆಯಿಂದ ______________

ಊ) ನಾಲ್ಕು ಸಾಲಿನ ಟಿಪ್ಪಣಿ ಬರೆಯಿರಿ.

ನಮ್ಮೂರ ಕೆರೆ :

______________________________

______________________________

______________________________

______________________________

©KTBS Not to be republished

ಊರ ಜನರ ಒಮ್ಮತದ ನಿರ್ಧಾರ :

______________________________

______________________________

______________________________

______________________________

## IV. ಚಟುವಟಿಕೆ :

೧. ಕೆರೆಗಳಿಗೆ ಸಂಬಂಧಿಸಿದ ಕಥೆಗಳನ್ನು ನಿಮ್ಮ ಅಧ್ಯಾಪಕರಿಂದ ಅಥವಾ ಅಜ್ಜ ಅಜ್ಜಿಯರಿಂದ ಕೇಳಿ ತಿಳಿಯಿರಿ.

೨. ನಿಮ್ಮ ಸಮೀಪದ ಕೆರೆ ಹಿಂದೆ ಹೇಗಿತ್ತು? ಈಗ ಹೇಗಿದೆ? ಎಂಬುದನ್ನು ಕೇಳಿ ತಿಳಿಯಿರಿ.

೩. ಕೆರೆಗಳ ಉಪಯೋಗಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

೪. ಕೆರೆಗಳ ಉಳಿವಿಗೆ ನಾವು ಮಾಡಬೇಕಾದ ಕಾರ್ಯಗಳೇನು? ತರಗತಿಯಲ್ಲಿ ಚರ್ಚೆ ನಡೆಸಿರಿ.

## V. ಸೈದ್ಧಾಂತಿಕ ವ್ಯಾಕರಣ :

### ೧. ವಚನಗಳು :

'ವಚನ' ಎಂದರೆ ಸಂಖ್ಯೆ. ವಸ್ತು ಅಥವಾ ವ್ಯಕ್ತಿ ಒಂದು ಆಗಿದ್ದರೆ ಏಕವಚನ ಎನ್ನುತ್ತೇವೆ. ಎರಡು ಅಥವಾ ಅದಕ್ಕಿಂತ ಹೆಚ್ಚಾಗಿದ್ದರೆ ಬಹುವಚನ ಎನ್ನುತ್ತೇವೆ.

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ.**

೧. ನನ್ನ ಊರಿನಲ್ಲಿ ಕೆರೆ ಇದೆ.

೨. ನಮ್ಮ ಊರಿನಲ್ಲಿ ಕೆರೆಗಳು ಇವೆ.

ಇವುಗಳಲ್ಲಿ ಯಾವುದು ಏಕವಚನ ಹಾಗೂ ಬಹುವಚನ? ವಿಚಾರ ಮಾಡಿ ತಿಳಿಯಿರಿ.

**ಇಲ್ಲಿ ಕೆಲವು ಏಕವಚನ ವಾಕ್ಯಗಳನ್ನು ಕೊಟ್ಟಿದೆ, ಅವುಗಳನ್ನು ಬಹುವಚನದಲ್ಲಿ ಪ್ರಯೋಗಿಸಿರಿ.**

೧. ಶಿಲ್ಪಳ ಹತ್ತಿರ ಪುಸ್ತಕ ಇಲ್ಲ. ______________

೨. ನಮ್ಮೂರಲ್ಲಿ ಗಂಧದ ಗಿಡ ಇದೆ. ______________

೩. ಅವನು ಬಹಳ ಜಾಣನು. ______________

೪. ಕೆರೆಯನ್ನು ಸಂರಕ್ಷಿಸಿ. ______________

©KTBS Not to be republished

**ಇಲ್ಲಿ ಕೆಲವು ಬಹುವಚನ ವಾಕ್ಯಗಳನ್ನು ಕೊಟ್ಟಿದೆ, ಅವುಗಳನ್ನು ಏಕವಚನದಲ್ಲಿ ಪ್ರಯೋಗಿಸಿರಿ.**

೧. ನಾವು ಚಿಕ್ಕಮಗಳೂರಿಗೆ ಹೋಗುತ್ತೇವೆ. ______________________

೨. ಪುಟ್ಟಿಯಲ್ಲಿ ಹಣ್ಣುಗಳು ಇವೆ. ______________________

೩. ಸ್ಪರ್ಧೆಯಲ್ಲಿ ಶಾಲೆಗೆ ಬಹುಮಾನಗಳು ದೊರೆತವು. ______________________

೪. ಶಾಲೆಯ ಆವರಣದಲ್ಲಿ ಗಿಡ ನೆಟ್ಟೆವು. ______________________

## ೨. ಲಿಂಗಗಳು :

ಕನ್ನಡದಲ್ಲಿ ಮೂರು ಲಿಂಗಗಳಿವೆ ಎಂಬುದನ್ನು ನೆನಪಿಡಿ. ಅವುಗಳೆಂದರೆ....

೧. ಪುಲ್ಲಿಂಗ

೨. ಸ್ತ್ರೀಲಿಂಗ

೩. ನಪುಂಸಕಲಿಂಗ

ಯಾವ ಶಬ್ದ **'ಗಂಡು'** ಎನ್ನುವ ಅರ್ಥ ನೀಡುತ್ತದೋ ಅದು **'ಪುಲ್ಲಿಂಗ'** ಎಂದು ತಿಳಿಯಿರಿ. ಯಾವ ಶಬ್ದ **'ಹೆಣ್ಣು'** ಎನ್ನುವ ಅರ್ಥ ನೀಡುತ್ತದೋ ಅದು **'ಸ್ತ್ರೀಲಿಂಗ'** ಎಂದು ತಿಳಿಯಿರಿ. ಯಾವ ಶಬ್ದ **'ಗಂಡೂ ಅಲ್ಲ, ಹೆಣ್ಣೂ ಅಲ್ಲ'** ಎನ್ನುವ ಅರ್ಥ ನೀಡಿದರೆ ಅದು **'ನಪುಂಸಕಲಿಂಗ'** ಎಂದು ತಿಳಿಯಿರಿ.

**ಈ ವಾಕ್ಯಗಳನ್ನು ಓದಿ, ವ್ಯತ್ಯಾಸ ತಿಳಿದು ಲಿಂಗವನ್ನು ಗುರುತಿಸಿರಿ.**

೧. ಅವನು ಮನೆಗೆ ಹೋಗುತ್ತಾನೆ.

೨. ಅವಳು ಮನೆಗೆ ಹೋಗುತ್ತಾಳೆ.

೩. ಅದು ಮನೆಗೆ ಹೋಗುತ್ತದೆ.

**ಇಲ್ಲಿರುವ ಪದಗಳು ಯಾವ ಲಿಂಗದಲ್ಲಿವೆ ಎಂದು ಗುರುತಿಸಿರಿ.**

| | |
|---|---|
| ೧. ಅವನು ____________ | ೨. ಹುಡುಗ ____________ |
| ೩. ಗಣೇಶ ____________ | ೪. ರಾಜ ____________ |
| ೫. ಶಿಕ್ಷಕಿ ____________ | ೬. ಕಲ್ಲು ____________ |
| ೭. ಪುಸ್ತಕ ____________ | ೮. ಶಾಲೆ ____________ |
| ೯. ಇವಳು ____________ | ೧೦. ನಾಯಿ ____________ |

* * * * *



©KTBS Not to be republished

# ಪಾಠ – ೭

# ಪಂಚತಂತ್ರ

**– ಎಂ. ಗೋಪಾಲಕೃಷ್ಣ ಅಡಿಗ**
**(ಮೂಲ: ಮನೋಜ್‌ದಾಸ್)**

**ಪಾಠ ಪ್ರವೇಶ :**

ಮಕ್ಕಳೇ ನೀವು ಕೇಳಲೇಬೇಕಾದ, ಓದಲೇಬೇಕಾದ ಕಥೆಗಳಲ್ಲಿ 'ಪಂಚತಂತ್ರದ ಕಥೆಗಳು' ಪ್ರಮುಖವಾದವು. ಪಂಚತಂತ್ರವು ಪ್ರಾಣಿ ಪ್ರಪಂಚದೊಂದಿಗೆ ಬೆಸೆದ ನೀತಿಕಥೆಗಳು. ನಮ್ಮ ಜೀವನಕ್ಕೆ ಬೇಕಾಗುವ ಐದು ಮೂಲತತ್ವಗಳನ್ನು ಈ ಕಥೆಗಳು ಉಪದೇಶಿಸುತ್ತವೆ. ಅವುಗಳೆಂದರೆ 1. ಮಿತ್ರ–ಭೇದ 2. ಮಿತ್ರ–ಲಾಭ 3. ಯುದ್ಧ ಹಾಗೂ ಶಾಂತಿ 4. ಲಾಭದ ನಷ್ಟ 5. ದುಡುಕಿನ ಕೃತ್ಯಗಳು. ಈ ಕಥೆಗಳನ್ನು ಕ್ರಿ.ಪೂ. ಮೂರನೇ ಶತಮಾನದಲ್ಲಿ ವಿಷ್ಣುಶರ್ಮನು ರಚಿಸಿದನು ಎಂದು ಹೇಳಲಾಗಿದೆ. ಈ ಪಂಚತಂತ್ರ ಕಥೆಗಳು ಹುಟ್ಟಿದ್ದು ಹೇಗೆ? ಕುತೂಹಲಕಾರಿಯಾಗಿದೆ ನೀವೇ ಓದಿ......

ಪುರಾತನ ಕಾಲದಲ್ಲಿ ಒಬ್ಬ ರಾಜನಿಗೆ ಮೂರುಮಂದಿ ಗಂಡು ಮಕ್ಕಳಿದ್ದರು. ರಾಜಕುಮಾರರು ತಮ್ಮ ವಿದ್ಯಾಭ್ಯಾಸದ ಕಡೆಗೆ ಕೊಂಚವೂ ಲಕ್ಷ್ಯ ಕೊಡದೆ ಸೋಮಾರಿಗಳಾಗಿ ಕಾಲ ಕಳೆಯುತ್ತಿದ್ದರು. ಇದರಿಂದ ರಾಜನಿಗೆ ತುಂಬ ದುಃಖವಾಯಿತು. ಅವರು ಅದೇರೀತಿ ಸಮಯವನ್ನು ವ್ಯರ್ಥ ಮಾಡಿದರೆ ಪಟ್ಟಕ್ಕೆ ಬರಲು ಅವರಲ್ಲಿ ಒಬ್ಬನೂ ಅರ್ಹನಾಗುವುದಿಲ್ಲ ಎಂದು ರಾಜನಿಗೆ ಗೊತ್ತು.

ಅನೇಕ ಅಧ್ಯಾಪಕರನ್ನು ರಾಜ ನೇಮಿಸಿಕೊಂಡ. ಆದರೆ ಎಲ್ಲವೂ ವ್ಯರ್ಥ. ಅಧ್ಯಾಪಕನೊಬ್ಬ ಕಣ್ಣಿಗೆ ಬಿದ್ದರೆ ಸಾಕು, ರಾಜಕುಮಾರರು ಭಯದಿಂದ ತತ್ತರಿಸಿ ಕಾಲಿಗೆ ಬುದ್ಧಿಹೇಳುತ್ತಿದ್ದರು.

ಕಾಲ ಕಳೆಯುತ್ತ ಬಂತು; ರಾಜನ ನಿರಾಶೆಯೂ ಹೆಚ್ಚುತ್ತಾ ಹೋಯಿತು.

ಕೊನೆಗೆ ರಾಜ ತನ್ನ ದೇಶದ ಎಲ್ಲ ವಿದ್ವಾಂಸರನ್ನೂ ಕರೆಸಿ ಒಂದು ಸಭೆ ಏರ್ಪಡಿಸಿ ಅವರಿಗೆ ತನ್ನ ಸಮಸ್ಯೆಯನ್ನು ವಿವರವಾಗಿ ಹೇಳಿದ. "ನಿಮ್ಮಲ್ಲಿ ಯಾರಾದರೂ ನನಗೆ ಸಹಾಯ ಮಾಡಬಲ್ಲಿರಾ?" ಎಂದು ಪ್ರಶ್ನಿಸಿದ.

ಬಹಳ ಹೊತ್ತಿನವರೆಗೆ ಯಾರೂ ಉತ್ತರ ಕೊಡಲಿಲ್ಲ. ಕೊನೆಗೆ ಅವರಲ್ಲೊಬ್ಬ ಎದ್ದು ನಿಂತು, "ಮಹಾರಾಜರೇ, ತಾವು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ನನ್ನ ಕೈಗೆ ಒಪ್ಪಿಸಿದರೆ ಕೈಲಾದುದನ್ನು ಮಾಡುತ್ತೇನೆ" ಎಂದ.

ಈ ವಿದ್ವಾಂಸನೇ ವಿಷ್ಣುಶರ್ಮ. ತನ್ನ ಜ್ಞಾನದಿಂದ ಆತ ಇಡೀ ದೇಶದಲ್ಲಿ ಸುಪ್ರಸಿದ್ಧನಾಗಿದ್ದ. ಅಂಥ ಮನುಷ್ಯ ತನ್ನ ಮಕ್ಕಳಿಗೆ ಪಾಠ ಹೇಳಲು ಮುಂದೆ ಬಂದನೆಂದು ರಾಜನಿಗೆ ತುಂಬಾ ಸಂತೋಷವಾಯಿತು.

©KTBS Not to be republished

ರಾಜನ ಅರಮನೆ ಬಹಳ ದೊಡ್ಡದು. ಅದರ ಸುತ್ತ ಎತ್ತರವಾದ ಮರಗಳಿದ್ದವು. ಉದ್ದವಾಗಿಯೂ ತುಂಬ ಅಗಲವಾಗಿಯೂ ಇದ್ದ ಮೇಲ್ಛಾವಣಿಯ ಕೆಲವು ಭಾಗಗಳ ಮೇಲೆ ಈ ಮರಗಳು ನೆಳಲು ಚೆಲ್ಲುತ್ತಿದ್ದವು. ವಿಷ್ಣುಶರ್ಮ ಛಾವಣಿಯ ಮೇಲಿನ ಒಂದು ಏಕಾಂತವಾದ ಮೂಲೆಗೆ ರಾಜಕುಮಾರರನ್ನು ಕರೆದುಕೊಂಡು ಹೋದ. ಅಲ್ಲಿ ತನ್ನ ಮುಂದೆ ಅವರನ್ನು ಕುಳ್ಳಿರಿಸಿಕೊಂಡು ತಾನೂ ಕುಳಿತ.

ವಿದ್ಯಾಭ್ಯಾಸವನ್ನು ದ್ವೇಷಿಸುತ್ತಿದ್ದ ಆ ರಾಜಕುಮಾರರಿಗೆ ಮೊದಮೊದಲು ಇದರಿಂದೇನೂ ಸಂತೋಷವಾಗಲಿಲ್ಲ. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಈ ಸ್ಥಳವನ್ನು ಬಿಟ್ಟು ಏಳಲೂ ಅವರಿಗೆ ಬೇಡವೆನ್ನಿಸಿತು. ವಿಷ್ಣುಶರ್ಮನ ವಿದ್ಯಾಭ್ಯಾಸದ ರೀತಿ ಅಪೂರ್ವ. ಅವನು ಹೀಗೆ ಆರಂಭಿಸಿದ: "ಗೋದಾವರಿ ನದೀ ತೀರದಲ್ಲಿ ದೊಡ್ಡದೊಂದು ಮರ. ಬೇರೆ ಬೇರೆ ದಿಕ್ಕುಗಳಿಂದ ಬರುತ್ತಿದ್ದ ಪಕ್ಷಿಗಳೆಲ್ಲ ರಾತ್ರಿ ಹೊತ್ತು ಆ ಮರದಲ್ಲಿ ಆಶ್ರಯ ಪಡೆಯುತ್ತಿದ್ದವು......"

ಹೀಗೆ ಅವನು ಕಥೆಗಳನ್ನು ಹೇಳುತ್ತ ಹೋದ. ಅವೆಲ್ಲ ಮೃಗಪಕ್ಷಿಗಳನ್ನು ಕುರಿತ ಕಥೆಗಳು. ಆದರೆ ನಿಜವಾಗಿ ಅವು ನಮ್ಮ ಬಗ್ಗೆಯೇ ಇರುವಂಥವು; ಮನುಷ್ಯನ ಬೇರೆ ಬೇರೆ ಸಮಸ್ಯೆಗಳನ್ನೂ ಅವುಗಳ ಪರಿಹಾರಗಳನ್ನೂ ಕುರಿತ ಕಥನಗಳು.

ಆದರ್ಶ ಸ್ನೇಹಿತ ಯಾರು? ಗೆಳೆತನವನ್ನು ಉಳಿಸಿಕೊಂಡು ಬರುವುದು ಹೇಗೆ? ನಮಗೆ ವಿನಾಶ ತರಬಲ್ಲ ಆಸೆಗಳಿಂದ ತಪ್ಪಿಸಿಕೊಳ್ಳುವುದು ಹೇಗೆ? ಒಳ್ಳೆಯವನಾಗಿದ್ದೂ ಜಾಗರೂಕನಾಗಿರುವುದರಿಂದ, ಉದಾತ್ತನಾಗಿದ್ದೂ ಚತುರನಾಗಿರುವುದರಿಂದ ಲಾಭವಿದೆ ಎಂಬುದನ್ನು ಈ ಕಥೆಗಳು ತೋರಿಸಿಕೊಡುತ್ತವೆ. ವಿಷ್ಣುಶರ್ಮನ ಜೊತೆಗೆ ಕುಳಿತಿದ್ದರಿಂದ ಹುಡುಗರು ತಿಳಿವಳಿಕೆಯನ್ನೂ ವ್ಯವಹಾರ ಜ್ಞಾನವನ್ನೂ ಪಡೆದರು.

ಪಂಚತಂತ್ರದ ಕಥೆಗಳನ್ನು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಮತ್ತೆ ಮತ್ತೆ ಹೇಳಲಾಗಿದೆ. ನೀವು ಕೂಡಾ ಈ ಕಥೆಗಳಲ್ಲಿ ಬೇಕಾದಷ್ಟು ಕಥೆಗಳನ್ನು ಓದಿರಬೇಕು. ಆದರೆ ಕೆಲವು ಕಥೆಗಳು ಅಷ್ಟು ಜನಪ್ರಿಯವಾಗಿಲ್ಲದೆ ಇದ್ದರೂ ಕಥಾಲೇಖದಲ್ಲಿ ಅವು ರತ್ನಗಳಂತೆ ಇವೆ. ಉದಾಹರಣೆಗೆ, 'ಮಾತಾಡುವ ಗುಹೆ' ಎಂಬ ಕಥೆಯನ್ನು ತೆಗೆದುಕೊಳ್ಳಬಹುದು. ಇದು ತುಂಬ ರಸಭರಿತವಾದ ಕಥೆಯಾಗಿರುವುದು ಮಾತ್ರವಲ್ಲದೆ ಪ್ರತಿಯೊಬ್ಬನೂ ಯಾವಾಗಲೂ ತನ್ನ ಬಗ್ಗೆ ಎಚ್ಚರಿಕೆಯಿಂದಿದ್ದು, ಆತ್ಮರಕ್ಷಣೆಗೆ ಸಿದ್ಧನಾಗಿರಬೇಕೆಂಬ ಪಾಠವನ್ನು ಕಲಿಸುತ್ತದೆ.

ಒಂದಾನೊಂದು ಕಾಲದಲ್ಲಿ ಒಂದು ಕಾಡಿನಲ್ಲಿ ಒಂದು ನರಿ ಇತ್ತು. ನಿರ್ಜನವಾದ ಪ್ರದೇಶದಲ್ಲಿದ್ದ ಗುಹೆಯೊಂದರಲ್ಲಿ ಅದರ ವಾಸ. ಒಂದು ದಿನ ನರಿ ಅಲ್ಲಿ ಇಲ್ಲದೆ ಇದ್ದಾಗ ಹಸಿವೆಯಿಂದ ಕಂಗಾಲಾಗಿದ್ದ ಸಿಂಹವೊಂದು ಅಲ್ಲಿಗೆ ಬಂತು. ಗುಹೆಯನ್ನು ಹೊಕ್ಕು ಆ ಸಿಂಹ ಸುತ್ತಲೂ ಮೂಸಿ ನೋಡಿತು. ಅದು ನರಿಯ ವಾಸಸ್ಥಳ ಎಂಬುದರಲ್ಲಿ ಸಂದೇಹವಿಲ್ಲ ಎಂದು ಸಿಂಹ ಭಾವಿಸಿತು. ಆಹಾರ ಹುಡುಕಿಕೊಂಡು ನಾನು ಅಲೆಯುವುದು ಏಕೆ? ಇಲ್ಲಿ ಕೊಂಚ ಒರಗಿಕೊಂಡು ವಿಶ್ರಾಂತಿ ತೆಗೆದುಕೊಳ್ಳುತ್ತೇನೆ. ನರಿ ಹಿಂತಿರುಗಿ ಬಂದಾಗ ನನಗೆ ಸವಿಯೂಟ ಸಿಕ್ಕದೇ?

©KTBS Not to be republished



ಮುಸ್ಸಂಜೆಯ ಹೊತ್ತಿಗೆ ನರಿ ಮನೆಗೆ ಮರಳಿ ಬಂತು. ಗುಹೆಯನ್ನು ಪ್ರವೇಶಿಸಬೇಕು ಎನ್ನುವಾಗ ಅದಕ್ಕೆ ಸಿಂಹದ ಅಸ್ಪಷ್ಟ ಹೆಜ್ಜೆಯ ಗುರುತುಗಳು ಕಂಡವು. ಅದರ ಹೃದಯ ಜೋರಾಗಿ ಬಡಿದುಕೊಳ್ಳತೊಡಗಿತು. ಆನಂತರ ಅದು ಧೈರ್ಯ ತಂದುಕೊಂಡು ಗಟ್ಟಿಯಾಗಿ ಕೂಗಿ ಹೇಳಿತು: "ಎಲೆ ಮಾತಾಡುವ ಗುಹೆಯೇ, ನಿನಗೇನಾಗಿದೆ? ಸಾಮಾನ್ಯವಾಗಿ ನಾನು ಮನೆಗೆ ಬಂದಾಗಲೆಲ್ಲ ನೀನು ನನ್ನನ್ನು ಕುರಿತು 'ನರಿಯೇ ದಯಮಾಡಿಸಬೇಕು' ಎಂದು ಹೇಳಿ ನನ್ನನ್ನು ಬರಮಾಡಿಕೊಳ್ಳುತ್ತಿದ್ದೆ. ಆದರೆ ಈ ದಿನ ನೀನು ಮೌನ. ನಾನು ಒಳಕ್ಕೆ ಬರಬಾರದು ಎಂದು ನಿನ್ನ ಇಷ್ಟ ಎಂದು ನಾನು ನಂಬಲೇ?"

ಸಿಂಹ ತನ್ನಷ್ಟಕ್ಕೆ ಹೀಗೆ ಯೋಚಿಸಿತು: "ನಾನು ಇಲ್ಲಿ ಇರುವುದರಿಂದ ಈ ಗುಹೆಗೆ ಹೆದರಿಕೆಯಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಆ ಕಾರಣದಿಂದಲೇ ಅದು ನರಿಯನ್ನು ಸ್ವಾಗತಿಸುತ್ತಿಲ್ಲ."

ಹೀಗೆಂದು ಸಿಂಹ ಜೋರಾಗಿ ಗರ್ಜಿಸಿ ಹೇಳಿತು: "ನರಿರಾಯರೇ ಬರಬೇಕು, ಬರಬೇಕು."


ತನ್ನ ಜೀವ ಉಳಿಸಿಕೊಳ್ಳುವುದಕ್ಕಾಗಿ ಪಲಾಯನ ಮಾಡುತ್ತ ನರಿ ಊಳಿ ಹೇಳಿತು: "ಪ್ರಿಯ ಗುಹೆಯೇ, ನಿನ್ನನ್ನು ತ್ಯಜಿಸಿ ಹೋಗಲು ನಾನು ನಿಶ್ಚಯಿಸಿದ್ದೇನೆ."

ತನ್ನಷ್ಟಕ್ಕೆ ತಾನು ಒಳಗೊಳಗೇ ನಗುತ್ತ ನರಿ ಹೀಗೆ ಅಂದುಕೊಂಡಿತು: ಮಾತಾಡುವ ಗುಹೆ ಅಲ್ಲವಾ? ಇಂಥ ಸಂಗತಿಯನ್ನು ಕೇಳೇ ಇಲ್ಲ. ದೇವರ ದಯೆ ಬಚಾವಾದೆ!

* * * * *

©KTBS Not to be republished

## ಕೃತಿಕಾರರ ಪರಿಚಯ :



**ಎಂ. ಗೋಪಾಲಕೃಷ್ಣ ಅಡಿಗ** ಅವರು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊಗೇರಿ ಎಂಬ ಹಳ್ಳಿಯಲ್ಲಿ ೧೯೧೮ ರಲ್ಲಿ ಜನಿಸಿದರು. ಇವರು ಪ್ರಾಧ್ಯಾಪಕಾರಗಿ, ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ್ದಾರೆ. ಸಾಹಿತಿಯಾಗಿ ಹಲವಾರು ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

'ಕಟ್ಟುವೆವು ನಾವು', 'ಚಂಡೆಮದ್ದಳೆ', 'ಭೂಮಿಗೀತ', 'ವರ್ಧಮಾನ', 'ಬತ್ತಲಾರದ ಗಂಗೆ', 'ಭಾವತರಂಗ' ಇವು ಅಡಿಗರ ಪ್ರಮುಖ ಕೃತಿಗಳು. ಇವರ 'ವರ್ಧಮಾನ' ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇರಳದ 'ಕುಮಾರ್ ಸಮ್ಮಾನ್' ಪ್ರಶಸ್ತಿ, ಮಧ್ಯಪ್ರದೇಶದ 'ಕಬೀರ್ ಸಮ್ಮಾನ್' ಪ್ರಶಸ್ತಿ, ಪಂಪ ಪ್ರಶಸ್ತಿ ಇನ್ನು ಮುಂತಾದ ಗೌರವ ಪ್ರಶಸ್ತಿಗಳು ಅಡಿಗರಿಗೆ ಲಭಿಸಿವೆ. ಇವರು ೧೯೯೨ ರಲ್ಲಿ ಮರಣ ಹೊಂದಿದರು.

ಪ್ರಸ್ತುತ 'ಪಂಚತಂತ್ರ' ಪಾಠವನ್ನು 'ಸಾರ್ವಕಾಲಿಕ ಪುಸ್ತಕಗಳು' (ಮೂಲ : ಮನೋಜ್‌ದಾಸ್) ಅನುವಾದಿತ ಕೃತಿಯಿಂದ ಆರಿಸಲಾಗಿದೆ.

©KTBS Not to be republished

## ಅಭ್ಯಾಸ

### I. ಪದಗಳ ಅರ್ಥ :

**ಅಪೂರ್ವ** – ಅಪರೂಪದ; ಶ್ರೇಷ್ಠವಾದ.

**ಉದಾತ್ತ** – ಶ್ರೇಷ್ಠ

**ಊಳಿ** – ಗಟ್ಟಿಯಾಗಿ ಕೂಗಿ

**ಏಕಾಂತ** – ಪ್ರಶಾಂತ ಸ್ಥಳ

**ಕಂಗಾಲು** – ದುರ್ಬಲವಾಗು

**ಕಾಲಿಗೆ ಬುದ್ಧಿಹೇಳು** – ಓಡಿಹೋಗು

**ಕೊಂಚ** – ಸ್ವಲ್ಪ

**ಗುಹೆ** – ಗವಿ; ಕಲ್ಲಿನ ದೊಡ್ಡಪೊಟರೆ.

**ಛಾವಣಿ** – ಮಾಳಿಗೆ; ಮನೆ ಮೇಲಿನ ಆವರಣ.

**ನಿಶ್ಚಯಿಸು** – ನಿರ್ಧರಿಸು; ಗೊತ್ತುಮಾಡು.

**ನಿರ್ಜನ** – ಜನ ವಸತಿ ಇಲ್ಲದ

**ಪಟ್ಟ** – ಅಧಿಕಾರ; ಸ್ಥಾನ.

**ಪಲಾಯನ** – ಓಟ; ಪರಾರಿ; ತಪ್ಪಿಸಿಕೊ.

**ಮಂದಿ** – ಜನ

**ಮುಸ್ಸಂಜೆ** – ಸೂರ್ಯ ಮುಳುಗುವ ಸಮಯ.

**ಲಕ್ಷ್ಯ** – ಗಮನ

**ವ್ಯರ್ಥ** – ನಿರುಪಯುಕ್ತ

**ಸಂದೇಹ** – ಸಂಶಯ; ಅನುಮಾನ.

## II. ಪ್ರಶ್ನೆಗಳು :

### ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ರಾಜನಿಗೆ ತನ್ನ ಮಕ್ಕಳ ಬಗ್ಗೆ ಏಕೆ ದುಃಖವಾಯಿತು?

೨. ರಾಜಕುಮಾರರು ಅಧ್ಯಾಪಕರನ್ನು ಕಂಡರೆ ಹೇಗೆ ವರ್ತಿಸುತ್ತಿದ್ದರು?

೩. ರಾಜನು ವಿದ್ವಾಂಸರ ಸಭೆಯನ್ನು ಏಕೆ ಕರೆದನು?

೪. ವಿಷ್ಣುಶರ್ಮನು ರಾಜನಿಗೆ ಏನೆಂದು ಹೇಳಿದನು?

೫. ವಿಷ್ಣುಶರ್ಮ ಕಥೆಗಳನ್ನು ಹೇಗೆ ಆರಂಭಿಸುತ್ತಿದ್ದನು?

೬. 'ಮಾತನಾಡುವ ಗುಹೆ' ಕಥೆಯ ನೀತಿ ಏನು?

೭. ಸಿಂಹವು ನರಿಯನ್ನು ಹೇಗೆ ಸ್ವಾಗತಿಸಿತು?

೮. ನರಿಯು ತನ್ನ ಗುಹೆಯನ್ನು ಏಕೆ ತ್ಯಜಿಸಿತು?

### ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ವಿಷ್ಣುಶರ್ಮನು ಯಾರು? ಆತನ ಮಾತುಗಳಿಂದ ರಾಜನಿಗೆ ಏಕೆ ಸಂತೋಷವಾಯಿತು?

೨. ವಿಷ್ಣುಶರ್ಮನು ರಾಜಕುಮಾರರಿಗೆ ಪಾಠ ಹೇಳಿಕೊಡುತ್ತಿದ್ದ ಸ್ಥಳ ಯಾವ ರೀತಿ ಇತ್ತು?

೩. ವಿಷ್ಣುಶರ್ಮನ ಕಥೆಗಳಲ್ಲಿ ಬರುವ ಪಂಚತಂತ್ರದ ವಿಚಾರಗಳಾವುವು?

೪. ಸಿಂಹವು ನರಿ ಗುಹೆಯಲ್ಲಿಯೇ ಏಕೆ ಉಳಿಯಿತು?

೫. ನರಿಯು ಗುಹೆಯ ಒಳಗೆ ಸಿಂಹ ಇರುವುದನ್ನು ಹೇಗೆ ಪರೀಕ್ಷಿಸಿತು?

### ಇ) ಈ ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಪಂಚತಂತ್ರದ ಕಥೆಗಳು ಹುಟ್ಟಿಕೊಂಡದ್ದು ಹೇಗೆ?

೨. 'ಮಾತನಾಡುವ ಗುಹೆ' ಕಥೆಯನ್ನು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

### ಈ) ಈ ಮಾತುಗಳನ್ನು ಯಾರು ಯಾರಿಗೆ ಹೇಳಿದರು? ತಿಳಿಸಿರಿ.

೧. 'ನಿಮ್ಮಲ್ಲಿ ಯಾರಾದರೂ ನನಗೆ ಸಹಾಯ ಮಾಡಬಲ್ಲಿರಾ?'

೨. 'ಎಲೆ ಮಾತನಾಡುವ ಗುಹೆಯೇ, ನಿನಗೇನಾಗಿದೆ?'

೩. 'ನರಿರಾಯರೇ, ಬರಬೇಕು, ಬರಬೇಕು.'

©KTBS Not to be republished

## III. ಭಾಷಾಭ್ಯಾಸ :

ಅ) ಇಲ್ಲಿರುವ ಪದಗಳಿಗೆ ವಿರುದ್ಧಾರ್ಥ ಪದಗಳನ್ನು ಬರೆಯಿರಿ.

೧. ದುಃಖ x ..................................... ೨. ಲಕ್ಷ್ಯ x .....................................

೩. ಅರ್ಹ x ..................................... ೪. ನಿರಾಶೆ x .....................................

೫. ಜ್ಞಾನ x ..................................... ೬. ದ್ವೇಷಿಸು x .....................................

೭. ಅಸ್ಪಷ್ಟ x ..................................... ೮. ಧೈರ್ಯ x .....................................

ಆ) ಇಲ್ಲಿರುವ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

೧. ವಿದ್ಯಾಭ್ಯಾಸ : ______________________________

೨. ಅಪೂರ್ವ : ______________________________

೩. ಪರಿಹಾರ : ______________________________

೪. ಸಂದೇಹ : ______________________________

೫. ನಿಶ್ಚಯಿಸು : ______________________________

ಇ) ಇಲ್ಲಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.

**ಮಾದರಿ :** ವಿದ್ಯಾಭ್ಯಾಸ = ವಿದ್ಯಾ + ಅಭ್ಯಾಸ

೧. ಅವರಲ್ಲೊಬ್ಬ = ____________ + ____________

೨. ಮರಗಳಿದ್ದವು = ____________ + ____________

೩. ಒಳಗೊಳಗೆ = ____________ + ____________

೪. ದುಃಖವಾಯಿತು = ____________ + ____________

೫. ಗುಹೆಯನ್ನು = ____________ + ____________



©KTBS Not to be republished


## IV. ಚಟುವಟಿಕೆಗಳು :

ಅ) ಸಿಂಹ, ನಾಯಿ, ನರಿ, ಬೆಕ್ಕು, ಗಿಳಿ, ಕೋಗಿಲೆಗಳ ಧ್ವನಿಯನ್ನು ಅನುಕರಣೆ ಮಾಡಿ.

ಆ) 'ಮಾತನಾಡುವ ಗುಹೆ' ಕಥೆಯನ್ನು ಹಾವಭಾವಗಳೊಂದಿಗೆ ತರಗತಿಯಲ್ಲಿ ಹೇಳಿರಿ.

ಇ) ನಿಮಗೆ ಪ್ರಿಯವಾದ ಪ್ರಾಣಿಗಳ ಚಿತ್ರ ಅಂಟಿಸಿ, ಅವು ನಿಮಗೆ ಏಕೆ ಇಷ್ಟ? ಹೇಳಿರಿ.

ಈ) ಕೆಳಗೆ ನೀಡಿರುವ ಚಿತ್ರಗಳನ್ನು ಗಮನಿಸಿ, ಕಥೆ ಹೇಳಿರಿ. ಅದರ ನೀತಿ ತಿಳಿಯಿರಿ.





ಉ) ಕೆಳಗೆ ನೀಡಿರುವ ಸುಳಿವು ಬಳಸಿಕೊಂಡು 'ಹೊಗಳಿಕೆಗೆ ಉಬ್ಬಬೇಡ' ಎಂಬ ನಾಣ್ಣುಡಿಗೆ ಸೂಕ್ತ ಕಥೆ ಹೇಳುತ್ತಾ ಅಭಿನಯಿಸಿರಿ.

**ಸುಳಿವು :** ಕಾಗೆಯೊಂದು ಮಾಂಸದ ತುಂಡು ಕಚ್ಚಿಕೊಂಡು ಮರದ ಮೇಲೆ ಇತ್ತು.
ನರಿ ಅದರ ಹಾಡನ್ನು ವರ್ಣಿಸಿ ಹಾಡಲು ಹೇಳುವುದು.
ಕಾಗೆ ಹಾಡಲು ಬಾಯಿ ತೆರೆದಾಗ ಮಾಂಸದ ತುಂಡು ನೆಲಕ್ಕೆ ಬಿತ್ತು.

* * * *

©KTBS Not to be republished

# ಪಾಠ – ೮

## ಕನ್ನಡಮ್ಮ

– ಭಾಗೀರಥಿ ಹೆಗಡೆ

**ಪ್ರವೇಶ :**

ನಮ್ಮಮ್ಮ ನಮ್ಮನ್ನು ಹೇಗೆ ಸಲಹುತ್ತಾಳೆ? ಹೇಗೆ ಮುದ್ದಾಡುತ್ತಾಳೆ? ಅವಳು ಮಾತು ಕಲಿಸುವ ಪರಿ ಯಾವುದು? ಅವಳೇಕೆ ಹಾಗೆ ಮಾಡುತ್ತಾಳೆ? ಈ ಬಗ್ಗೆ ಒಂದೊಂದು ವಾಕ್ಯ ಹೇಳಿ.

ನಾವು ನಾಡನ್ನು ತಾಯಿಗೆ ಹೋಲಿಸುತ್ತೇವೆ. ಏಕೆಂದರೆ ಅದು ನಮ್ಮ ಬದುಕಿಗೆ ಆಸರೆಯಾಗಿದೆ. ಮಳೆ, ಬೆಳೆ, ಉದ್ಯೋಗವನ್ನು ನೀಡಿ ನಮ್ಮನ್ನು ರಕ್ಷಿಸುತ್ತದೆ. ನಮ್ಮ ಕನಸುಗಳನ್ನು ನನಸು ಮಾಡುತ್ತದೆ. ನಮಗೆ ಸಂತೋಷವನ್ನು ತರುತ್ತದೆ. ಈ ಅಂಶಗಳು ಪ್ರಸ್ತುತ 'ಕನ್ನಡಮ್ಮ' ಕವಿತೆಯಲ್ಲಿ ಒಡಮೂಡಿವೆ. ಕವಿ ತಾಯಿಯ ಸ್ಥಾನದಲ್ಲಿ ನಿಂತು ಮಕ್ಕಳಿಗೆ ಕನ್ನಡಮ್ಮನ ಭವ್ಯತೆಯನ್ನು ಪರಿಚಯಿಸಿದ್ದಾರೆ.

ಹೊತ್ತು ಹೆತ್ತು ಸಲಹಿದವಳು
ತುತ್ತನಿತ್ತು ಬೆಳೆಸಿದವಳು
ಎತ್ತಿ ಮುದ್ದಾಡಿದವಳು ತಾಯಿಯಲ್ಲವೆ?
ನಮ್ಮ ತಾಯಿಯಲ್ಲವೆ?

ನುಡಿಗೆ ನಾದ ತುಂಬಿದವಳು
ಎದೆಗೆ ಹಾಡನೂಡಿದವಳು
ಒಡಲಿಗನ್ನವುಣಿಸಿದವಳು ಅಮ್ಮನಲ್ಲವೆ?
ಕನ್ನಡಮ್ಮನಲ್ಲವೆ?

ಮಣ್ಣಿನಲ್ಲಿ ಚಿನ್ನವಿರಿಸಿ
ಕಣ್ಣಿನಲ್ಲಿ ಬೆಳಕು ಬರಿಸಿ
ನಮ್ಮ ನಿಮ್ಮ ಕಾಯುವವಳು ಅಮ್ಮನಲ್ಲವೆ?
ಕನ್ನಡಮ್ಮನಲ್ಲವೆ?

©KTBS Not to be republished

ಮೊರೆವ ಕಡಲ ತೆರೆಗಳಾಗಿ
ಸುರಿವ ಮಳೆಯ ಹನಿಗಳಾಗಿ
ನಿರತ ಲಾಲಿ ಹಾಡುವವಳು ಅಮ್ಮನಲ್ಲವೆ?
ಕನ್ನಡಮ್ಮನಲ್ಲವೆ?

ಅಮ್ಮ ನಿನಗೆ ನೂರು ನಮನ
ಕಣ್ಣಬಿಟ್ಟು ನೋಡು ನಮ್ಮ
ನಿನ್ನ ಕೈಯನೆತ್ತಿ ಹರಸು, ತಾಯಿಯಲ್ಲವೆ?
ನಾಡದೇವಿಯಲ್ಲವೆ?

* * * *

## ಕೃತಿಕಾರರ ಪರಿಚಯ :

**ಭಾಗೀರಥಿ ಹೆಗಡೆ** ಅವರು ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ತಟ್ಟಿಕಾಯ ಗ್ರಾಮದಲ್ಲಿ ಜನ್ಮವೆತ್ತಿದ್ದಾರೆ. ಇವರು ೧೨ ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. **'ಗುಬ್ಬಿಯ ಸ್ವರ್ಗ'**, **'ಕನ್ನಡಮ್ಮ'** ಇವು ಮಕ್ಕಳಿಗಾಗಿಯೇ ರಚಿಸಿದ ಕೃತಿಗಳು. ಮಕ್ಕಳು ಹಾಡಿ ನಲಿದು ಕುಣಿವ ಪದ್ಯವಿದು.



## ಅಭ್ಯಾಸ

### I. ಪದಗಳ ಅರ್ಥ :

**ಉಡು** – ತೊಡಿಸು
**ಕಡಲು** – ಸಮುದ್ರ
**ಧರೆ** – ಭೂಮಿ
**ನಮನ** – ವಂದನೆ
**ನಾಡದೇವಿ** – ರಾಜ್ಯದ ದೇವತೆ; ಭುವನೇಶ್ವರಿ.
**ಬಿಂಬ** – ಪ್ರತಿರೂಪ
**ಲಾಲಿ** – ಜೋಗುಳ ಹಾಡು
**ಹರಸು** – ಆಶೀರ್ವಾದ ಮಾಡು; ಹಾರೈಸು.
**ಒಡಲು** – ಹೊಟ್ಟೆ
**ಚಿನ್ನ** – ಬಂಗಾರ; ಹೊನ್ನು.
**ಧಾರೆ** – ಒಂದೇ ಸಮನೆ ನೀರು ಸುರಿಯುವಿಕೆ
**ನಾದ** – ಮಧುರ ಧ್ವನಿ
**ಪೊರೆ** – ರಕ್ಷಣೆ; ಸಲಹು.
**ಮೊರೆ** – ಧ್ವನಿಮಾಡು; ಝೇಂಕರಿಸು.
**ಸಲಹು** – ಕಾಪಾಡು; ರಕ್ಷಿಸು.
**ಹೆತ್ತು** – ಜನುಮ ನೀಡಿ



©KTBS Not to be republished

## II. ಪ್ರಶ್ನೆಗಳು :

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ನಮ್ಮನ್ನು ಹೊತ್ತು ಹೆತ್ತು ಸಲಹಿದವರನ್ನು ಏನೆಂದು ಕರೆಯುತ್ತೇವೆ?

೨. ಕವಯಿತ್ರಿ ಕನ್ನಡ ನಾಡನ್ನು ಯಾರಿಗೆ ಹೋಲಿಸಿದ್ದಾರೆ?

೩. ಕನ್ನಡ ನುಡಿಯ ಸೊಬಗು ಯಾವ ರೀತಿಯದು?

೪. ಕನ್ನಡಮ್ಮ ಈ ನಾಡ ಮಣ್ಣಿನಲ್ಲಿ ಏನನ್ನು ಇರಿಸಿದ್ದಾಳೆ?

೫. ಕವಯಿತ್ರಿ ಕಡಲ ತೆರೆಗಳ ಮೊರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ನಮ್ಮ ತಾಯಿ ನಮ್ಮನ್ನು ಯಾವ ರೀತಿ ಸಾಕಿ ಸಲಹುತ್ತಾಳೆ?

೨. ಕನ್ನಡಮ್ಮ ತನ್ನ ಕಂದಮ್ಮಗಳನ್ನು ಹೇಗೆ ಸಲಹಿದ್ದಾಳೆ?

೩. ಕನ್ನಡಮ್ಮ ನಮ್ಮನ್ನು ಯಾವ ರೀತಿ ಕಾಯುತ್ತಿದ್ದಾಳೆ?

೪. ಕನ್ನಡಮ್ಮನ ಲಾಲಿ ಹಾಡು ಯಾವ ರೀತಿಯಲ್ಲಿದೆ?

೫. ಕವಯಿತ್ರಿ ಕನ್ನಡಮ್ಮನನ್ನು ಏನೆಂದು ಪ್ರಾರ್ಥಿಸುತ್ತಾರೆ?

೬. ಕವಯಿತ್ರಿ ಕನ್ನಡ ನಾಡನ್ನು ಹೆತ್ತ ತಾಯಿಗೆ ಏಕೆ ಹೋಲಿಸಿದ್ದಾರೆ?

೭. ನಮ್ಮ ಅಮ್ಮನ ಬಗ್ಗೆ ನಮಗೆ ಪ್ರೀತಿ ಏಕೆ?

**ಇ) ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು–ಐದು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕನ್ನಡ ನಾಡು ನಮ್ಮ ಬದುಕಿಗೆ ಯಾವ ರೀತಿ ಆಸರೆಯಾಗಿದೆ?

೨. ಕನ್ನಡ ನಾಡಿನ ಬಗ್ಗೆ ನಮಗೆ ಪ್ರೀತಿ ಇರಬೇಕು. ಏಕೆ?

**ಈ) ಇಲ್ಲಿರುವ ಪದ್ಯದ ಭಾವಾರ್ಥವನ್ನು ಬರೆಯಿರಿ.**

ಮಣ್ಣಿನಲಿ ಚಿನ್ನವಿರಿಸಿ
ಕಣ್ಣಿನಲ್ಲಿ ಬೆಳಕು ಬರಿಸಿ
ನಮ್ಮ ನಿಮ್ಮ ಕಾಯುವವಳು ಅಮ್ಮನಲ್ಲವೆ?
ಕನ್ನಡಮ್ಮನಲ್ಲವೇ?

©KTBS Not to be republished

ಉ) ಕನ್ನಡ ನಾಡು ನುಡಿಗೆ ಸಂಬಂಧಿಸಿದಂತೆ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಕೇಳಿ ತಿಳಿದುಕೊಳ್ಳಿರಿ.

೧. ಕನ್ನಡ ನಾಡಿನ ಕರಾವಳಿ ಪ್ರದೇಶಗಳಾವುವು?

೨. ಕರ್ನಾಟಕದಲ್ಲಿ ಚಿನ್ನದ ಗಣಿಗಳು ಯಾವ ಸ್ಥಳಗಳಲ್ಲಿವೆ?

೩. ಕರ್ನಾಟಕದಲ್ಲಿ ಹೆಚ್ಚು ಮಳೆ ಬೀಳುವ ಪ್ರದೇಶಗಳಾವುವು?

೪. ಕರ್ನಾಟಕದಲ್ಲಿ ಶಿಲ್ಪಕಲೆಗೆ ಹೆಸರಾದ ಊರುಗಳಾವುವು?

೫. ಕರ್ನಾಟಕದಲ್ಲಿ ಹರಿಯವ ಪ್ರಮುಖ ನದಿಗಳಾವುವು?

೬. ಕರ್ನಾಟಕವನ್ನು ಆಳಿದ ಪ್ರಮುಖ ರಾಜ ಮನೆತನಗಳು ಯಾವುವು?

೭. ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಕವಿಗಳು ಯಾರು ಯಾರು?

೮. ಕರ್ನಾಟಕದಲ್ಲಿರುವ ಪ್ರಮುಖ ಜನಪದ ಕಲೆಗಳಾವುವು?

೯. ಕರ್ನಾಟಕದ ಖ್ಯಾತರಾದ ಸಂಗೀತ ವಿದ್ವಾಂಸರು ಯಾರು ಯಾರು?

೧೦. ಕರ್ನಾಟಕದಲ್ಲಿರುವ ಪ್ರಮುಖ ಅರಣ್ಯ ಪ್ರದೇಶಗಳಾವುವು?

## III. ಭಾಷಾಭ್ಯಾಸ :

ಅ) ಪ್ರಸ್ತುತ ಪದ್ಯದಲ್ಲಿ ಬಳಕೆ ಆಗಿರುವ ಪ್ರಾಸ ಪದಗಳನ್ನು ಹುಡುಕಿ ಬರೆಯಿರಿ.

**ಉದಾ :** ಸಲಹಿದವಳು – ಬೆಳೆಸಿದವಳು

ಆ) ಇಲ್ಲಿರುವ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

೧. ಕನ್ನಡಮ್ಮ : ____________________

೨. ಲಾಲಿಹಾಡು : ____________________

೩. ಹರಸು : ____________________

೪. ನಾಡದೇವಿ : ____________________

೫. ಸಲಹು : ____________________

©KTBS Not to be republished

ಇ) ಇಲ್ಲಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.

**ಮಾದರಿ :** ಹಾಡನೂಡಿದವಳು = ಹಾಡನು + ಊಡಿದವಳು

೧. ಚಿನ್ನವಿರಿಸಿ = ________ + ________

೨. ಮುದ್ದಾಡಿದವಳು = ________ + ________

೩. ತುತ್ತನಿತ್ತು = ________ + ________

೪. ಒಡಲಿಗನ್ನವುಣಿಸಿದವಳು = ________ + ________ + ________

## IV. ಚಟುವಟಿಕೆಗಳು :

ಅ) ಕನ್ನಡ ನಾಡು ನುಡಿಗಾಗಿ ದುಡಿದವರ ಚಿತ್ರ ಸಂಗ್ರಹಿಸಿರಿ.

ಆ) ಕನ್ನಡ ಅಭಿಮಾನ ಮೂಡಿಸುವ ಕವಿತೆಗಳನ್ನು ಸಂಗ್ರಹಿಸಿರಿ.

ಇ) ಕನ್ನಡಮ್ಮ ಕವಿತೆಯನ್ನು ಭಾವಾಭಿನಯದೊಂದಿಗೆ ಹಾಡಿರಿ.

* * * * *

©KTBS Not to be republished

## ಪಾಠ – ೯

# ಎದೆಗುಂದದ ಧೀರರು

**ಪಾಠ ಪ್ರವೇಶ :**

ಪ್ರತಿಯೊಬ್ಬ ಮನುಷ್ಯನ ಜೀವನ ಬೆಲೆ ಬಾಳುವಂತಹುದು. ಜೀವನದಲ್ಲಿ ಕಷ್ಟ, ಅಪಾಯ ತೊಂದರೆಗಳು ಬರುವುದು ಸಹಜ. ಅದಕ್ಕೆ ಧೈರ್ಯಗೆಡದೆ ವಿಚಾರ ಮಾಡಬೇಕು. ಸಮಯ ಪ್ರಜ್ಞೆ ಬಳಸಬೇಕು. ಜಾಣ್ಮೆಯನ್ನು ಪ್ರದರ್ಶಿಸಿ ಕಷ್ಟದಿಂದ ಹೊರಬರಬೇಕು. ಅದುವೆ ಜೀವನ.

ಬಸ್ ಅಪಘಾತದಲ್ಲಿ ಸುಧಾಚಂದ್ರನ್ ಎಂಬ ಹುಡುಗಿ ಕಾಲು ಕಳೆದುಕೊಂಡಳು. ಧೈರ್ಯಗೆಡದೆ ಕೃತಕ ಕಾಲು ಹಾಕಿಸಿಕೊಂಡಳು. ನೃತ್ಯ ಮಾಡಿದಳು. ಸಾಹಸ ಮೆರೆದಳು. ಅವಳ ಮಯೂರಿ ನೃತ್ಯ ಜನಪ್ರಿಯತೆ ಹಾಗೂ ಅಪಾರಕೀರ್ತಿ ತಂದುಕೊಟ್ಟಿತು. ನನಗೆ ಕಾಲಿಲ್ಲವೆಂದು ಅವಳು ಕುಳಿತಿದ್ದರೆ, ಅವಳ ಬದುಕು ಅವಳಿಗೆ ಹೊರೆಯಾಗುತ್ತಿತ್ತು. ಆದ್ದರಿಂದ ಜೀವನದಲ್ಲಿ ಎಂತಹ ತೊಂದರೆಗಳು ಬಂದರೂ ಎದೆಗುಂದದೆ ಧೈರ್ಯದಿಂದ ಮುನ್ನುಗ್ಗಬೇಕು. ಅಂತಹ ಎದೆಗುಂದದ ಧೀರರ ಪರಿಚಯ ಇಲ್ಲಿದೆ.

## ೧. ಜೂಲಿಯೋ ಇಗ್ಲೇಶಿಯಸ್:

– ಎಂ.ಎನ್. ಸುಂದರರಾಜ

ಸ್ಪೇನ್ ದೇಶದ ಬಾಲಕ ಜೂಲಿಯೋ ಇಗ್ಲೇಶಿಯಸ್. ತನ್ನ ಹತ್ತನೆಯ ವಯಸ್ಸಿನಲ್ಲಿಯೇ ಫುಟ್‌ಬಾಲ್ ಆಟಗಾರನಾಗುವ ಕನಸು ಕಂಡನು. ದಿನದ ಹೆಚ್ಚಿನ ಭಾಗವನ್ನು ಫುಟ್ಬಾಲ್ ಆಡುವುದರಲ್ಲಿಯೇ ಕಳೆದನು. ತಾನು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸಬೇಕೆಂಬ ಆಸೆ. ದೇಶಕ್ಕೆ ಕೀರ್ತಿ ತರಬೇಕೆಂಬ ಹಂಬಲ. ಅದಕ್ಕಾಗಿ 'ರಿಯಲ್ ಮ್ಯಾಡ್ರಿಡ್ ಕ್ಲಬ್' ಸೇರಿದ. ನಿರಂತರ ಅಭ್ಯಾಸ ಮಾಡಿದ. ತನ್ನ ಇಪ್ಪತ್ತನೆಯ ವಯಸ್ಸಿಗೆ ಉತ್ತಮ ಗೋಲ್ ಕೀಪರ್ ಎಂಬ ಖ್ಯಾತಿ ಪಡೆದನು. ರಾಷ್ಟ್ರ ಮಟ್ಟಕ್ಕೆ ಬೆಳೆದನು. ಆದರೆ ೧೯೬೩ ರಲ್ಲಿ ಸ್ನೇಹಿತರ ಜೊತೆ ಕಾರಿನಲ್ಲಿ ಹೋಗುವಾಗ ಭೀಕರ ಅಪಘಾತಕ್ಕೆ ಒಳಗಾದ. ಆಸ್ಪತ್ರೆ ಸೇರಿದ. ಅಲ್ಲಿ ಚಿಕಿತ್ಸೆಯೇನೋ ನಡೆಯಿತು. ಆದರೆ ಸೊಂಟದ ಕೆಳಭಾಗ ಸಂಪೂರ್ಣ ಶಕ್ತಿಯನ್ನು ಕಳೆದುಕೊಂಡಿತು. ಇದರಿಂದ ವಿಶ್ವದ ಗೋಲ್‌ಕೀಪರನಾಗುವ ಅವನ ಕನಸು ನುಚ್ಚುನೂರಾಯಿತು.



ಜೂಲಿಯೋ ಇಗ್ಲೇಶಿಯಸ್

ಜೂಲಿಯೋ ಗುಣಮುಖನಾಗಲು ತುಂಬ ದಿನಗಳು ಬೇಕಾದವು. ಇದರಿಂದ ಅವನಲ್ಲಿ ದು:ಖ, ಕೋಪ ಮನೆಮಾಡಿತು. ಮನನೊಂದನು. ನೋವು ಮರೆಯಲು ಹಾಡುಗಳನ್ನು ಬರೆದು ತಾನೇ ಹಾಡತೊಡಗಿದ. ಅವನ ಇಂಪಾದ ಧ್ವನಿ ಗಮನಿಸಿದ ದಾದಿಯೊಬ್ಬಳು ಗಿಟಾರೊಂದನ್ನು ತಂದು ಕೊಟ್ಟಳು. ಅವನೆಂದೂ ಅದುವರೆಗೆ ಗಿಟಾರನ್ನು ಮುಟ್ಟಿರಲಿಲ್ಲ. ಆದರೂ ಗಿಟಾರನ್ನು ನುಡಿಸುತ್ತ ಹಾಡತೊಡಗಿದ. ಹೀಗೆ ೧೮ ತಿಂಗಳು ಆಸ್ಪತ್ರೆಯಲ್ಲಿ ಕಳೆದನು. ಈಗ ಜೂಲಿಯೋ ಹಾಡುವುದರಲ್ಲಿ ಮತ್ತು ಗಿಟಾರ್ ನುಡಿಸುವುದರಲ್ಲಿ ಪರಿಣತಿ ಪಡೆದನು. ಅದು ಅವನ ಆತ್ಮವಿಶ್ವಾಸವನ್ನು ಹೆಚ್ಚಿಸಿತ್ತು.

©KTBS Not to be republished

ತಾನೇ ಹಾಡುಗಳನ್ನು ಬರೆದ. ಹಾಡಿನಲ್ಲಿ ತಲ್ಲೀನನಾದ. **"ಜೀವನ ಹೀಗೆ ಸಾಗುತ್ತಿದೆ"** ಎಂಬ ಹೆಸರಿನ ಹಾಡುಗಳ ಆಲ್ಬಂಗಳನ್ನು ಹೊರತಂದನು. ಅದು ವಿಶ್ವಾದ್ಯಂತ ಜನಪ್ರಿಯವಾಗಿ ೩೦೦ ಮಿಲಿಯನ್ ಆಲ್ಬಂಗಳು ಮಾರಾಟವಾದವು. ವಿಶ್ವದ ಹತ್ತು ಪ್ರಮುಖ ಗಾಯಕರಲ್ಲಿ ಜೂಲಿಯೋ ಸಹ ಒಬ್ಬನಾದನು. ಅವನು ಈಗ ಶ್ರೇಷ್ಠ ಕಲಾವಿದನಾಗಿ ಕೋಟ್ಯಂತರ ಸಂಗೀತ ಪ್ರೇಮಿಗಳ ಕಣ್ಮಣಿಯಾದನು. ಜೀವನದಲ್ಲಿ ವಿಫಲತೆಯಿಂದ ಎದೆಗುಂದಬಾರದು. ಅದೃಷ್ಟದ ಒಂದು ಬಾಗಿಲು ಮುಚ್ಚಿದರೆ ಇನ್ನೊಂದು ದಾರಿ ತೆರೆದುಕೊಳ್ಳುತ್ತದೆ ಎಂದು ಹೇಳಿದನು. ಅದಕ್ಕೆ ಅವನ ಜೀವನವೇ ಸಾಕ್ಷಿ.

* * * * *

## ೨. ಮಾಲತಿ ಹೊಳ್ಳ :

– ಸಂಪಾದಿತ



'ಎಲ್ಲಾ ಬಾಗಿಲುಗಳು ಮುಚ್ಚಿದ್ದರೂ, ಎಲ್ಲೋ ಒಂದು ಸಣ್ಣ ಕಿಂಡಿಯಿಂದ ಬೆಳಕು ಹರಿದುಬರುತ್ತದೆ' – ಇದು ಮಾಲತಿ ಹೊಳ್ಳರ ಬದುಕಿನ ಸತ್ಯ. ಪೋಲಿಯೋ ಎಂಬ ಭಯಂಕರ ವ್ಯಾಧಿಗೆ ತುತ್ತಾಗಿ, ಕಾಲುಗಳು ಶಕ್ತಿಹೀನವಾದರೂ, ಕ್ರೀಡಾಲೋಕದಲ್ಲಿ ವಿಶ್ವವೇ ಬೆರಗಾಗುವಂಥ ಸಾಧನೆಯನ್ನು ಮಾಡಿದವರು ಮಾಲತಿ ಹೊಳ್ಳ. ವಿಧಿ ನೀಡಿದ ಅಂಗವಿಕಲತೆ ಈ ಸಾಧಕಿಯ ಪಾಲಿಗೆ ವರವಾಯಿತು.

ಮಾಲತಿ ಹೊಳ್ಳರ ತಂದೆ ಕೃಷ್ಣಮೂರ್ತಿ ಹೊಳ್ಳ, ತಾಯಿ ಪದ್ಮಾವತಿ. ಹೋಟೆಲ್ ವೃತ್ತಿಗಾಗಿ ಉಡುಪಿ ಜಿಲ್ಲೆಯ ಮಣ್ಣೂರು ಗ್ರಾಮದಿಂದ ಬೆಂಗಳೂರಿಗೆ ಬಂದವರು. ಇವರ ನಾಲ್ಕನೆಯ ಮಗುವಾಗಿ, ಜುಲೈ ೬, ೧೯೫೮ ರಂದು ಮಾಲತಿ ಜನಿಸಿದರು.

ದುರದೃಷ್ಟವಶಾತ್ ಒಂದು ವರ್ಷದ ಮಗು ಮಾಲತಿಗೆ ಪೋಲಿಯೋ ಆಗಿದ್ದರಿಂದ, ಮಗುವನ್ನು ಚೆನ್ನೈನಲ್ಲಿರುವ ದತ್ತಾತ್ರೇಯ ಮೆಡಿಕಲ್ ಸೆಂಟರ್ ಎಂಬ ಪುನರ್ವಸತಿ ಕೇಂದ್ರಕ್ಕೆ ಚಿಕಿತ್ಸೆಗಾಗಿ ಸೇರಿಸಿದರು. ಆಕೆಯ ಬಾಲ್ಯದ ಬಹುಭಾಗ ಅಲ್ಲಿಯೇ ಕಳೆಯಿತು.

ದೇಹದ ನರಗಳೆಲ್ಲ ಚೆಂಡಿನಂತೆ ಒಂದುಗೂಡುವುದು ಇವರ ಕಾಯಿಲೆಯ ಸ್ವರೂಪ. ಇದನ್ನು ತಪ್ಪಿಸಲು ಪ್ರತಿ ಆರು ತಿಂಗಳಿಗೊಮ್ಮೆ ಮಾಲತಿಗೆ ಶಸ್ತ್ರಚಿಕಿತ್ಸೆ ಆಗುತಿತ್ತು. ಇಂತಹ ೩೨ ಶಸ್ತ್ರಚಿಕಿತ್ಸೆಗಳನ್ನು ಅವರು ಎದುರಿಸಿದರು. ಆದಾಗ್ಯೂ, ಪ್ರತಿ ಪರೀಕ್ಷೆಯಲ್ಲೂ ಮಾಲತಿ ತರಗತಿಗೇ ಪ್ರಥಮಳಾಗಿರುತ್ತಿದ್ದರು.

೧೯೭೫ ರಲ್ಲಿ, ಬೆಂಗಳೂರಿಗೆ ಹಿಂತಿರುಗಿದ ನಂತರ ಮಹಾರಾಣಿ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ತಂದೆಯ ಪ್ರೋತ್ಸಾಹದ ನುಡಿಗಳು ಮಾಲತಿಗೆ ಧೈರ್ಯ ನೀಡಿದವು. ಅದೇ ವರ್ಷ ರಾಷ್ಟ್ರೀಯ ಅಂಗವಿಕಲರ ಕ್ರೀಡಾಕೂಟದಲ್ಲಿ ಭಾಗವಹಿಸಿ ಎರಡು ಚಿನ್ನದ ಪದಕ, ಎರಡು ಬೆಳ್ಳಿಯ ಪದಕಗಳನ್ನು ಗಳಿಸಿದ ಮಾಲತಿ ಹೊಳ್ಳ ಸಾಧನೆಯ ಹಾದಿಯಲ್ಲಿ ಮುಂದುವರೆದರು.

© KTBS Not to be republished

ಈ ಯಶಸ್ಸು ಕ್ರೀಡೆಗಳತ್ತ ಅವರ ಒಲವು ಬೆಳೆಯಲು ಕಾರಣವಾಯಿತು. ಒಮ್ಮೆ ಅಹಮದಾಬಾದಿನಲ್ಲಿ ನಡೆದ ಕ್ರೀಡಾಕೂಟದಲ್ಲಿ ಗಾಲಿಕುರ್ಚಿಯ ಓಟದ ಸ್ಪರ್ಧೆಗೆ ಬೇರೆ ಮಹಿಳಾ ಸ್ಪರ್ಧಿಗಳೇ ಇರಲಿಲ್ಲ. ಆಗ ಮಾಲತಿ ಪುರುಷ ಸ್ಪರ್ಧಿಗಳೊಂದಿಗೇ ಸ್ಪರ್ಧಿಸಬೇಕಾಯಿತು. ಅವರೆಲ್ಲ ಆಗಲೇ ಹೆಸರು ಮಾಡಿದವರು. ಅದ್ಭುತ! ಮಾಲತಿಯೇ ಗೆದ್ದರು! ಒಬ್ಬ ಮಹಿಳೆ ಪುರುಷರನ್ನು ಹಿಮ್ಮೆಟ್ಟಿಸಿ, ಬಹುಮಾನ ಪಡೆದಾಗ, ಅಭಿನಂದನೆಗಳ ಸುರಿಮಳೆಯೇ ಆಯಿತು. ಕೊರಿಯಾ, ಡೆನ್ಮಾರ್ಕ್, ಬೀಜಿಂಗ್, ಬ್ಯಾಂಕಾಕ್, ಬೆಲ್ಜಿಯಂ, ಬರ್ಮಿಂಗ್‌ಹ್ಯಾಂ, ಮ್ಯಾಂಚೆಸ್ಟರುಗಳಲ್ಲಿ ನಡೆದ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಏಷಿಯಾಡ್ ಕ್ರೀಡಾ ಕೂಟಗಳಲ್ಲಿ ಗಾಲಿಕುರ್ಚಿ ಓಟ, ಗುಂಡು ಎಸೆತ, ತಟ್ಟೆ ಎಸೆತ, ಈಟಿ ಎಸೆತ ಸ್ಪರ್ಧೆಗಳಲ್ಲಿ ಮಾಲತಿ ಹೊಳ್ಳ ಭಾಗವಹಿಸಿ, ವಿಜಯಿಯಾದಾಗ ಇಡೀ ವಿಶ್ವವೇ ಅವರತ್ತ ತಿರುಗಿತು. ಬರ್ಮಿಂಗ್‌ಹ್ಯಾಂಗೆ ಹೋದಾಗ, ಬಸ್‌ನಿಂದ ಬಿದ್ದು ಮೂಳೆ ಮುರಿದರೂ ಅವರ ಉತ್ಸಾಹ ಮಾತ್ರ ತಗ್ಗಲಿಲ್ಲ. ಇದು ಅವರಿಗೆ ೧೭ ನೇ ಮೂಳೆ ಮುರಿತ !

ಕ್ರೀಡಾ ಜಗತ್ತಿನಲ್ಲಿ ಮಾಲತಿ ಹೊಳ್ಳರ ಸಾಧನೆಯನ್ನು ಪರಿಗಣಿಸಿ, ಭಾರತ ಸರ್ಕಾರ ಅರ್ಜುನ ಪ್ರಶಸ್ತಿ (೧೯೯೫), ಪದ್ಮಶ್ರೀ ಪ್ರಶಸ್ತಿ (೨೦೦೧) ನೀಡಿ ಗೌರವಿಸಿತು. ಕೆ.ಕೆ. ಬಿರ್ಲಾ ಪ್ರಶಸ್ತಿ, ಅಮೆರಿಕನ್ ಬಯೋಗ್ರಾಫಿಕಲ್ ಇನ್ಸ್‌ಟಿಟ್ಯೂಟ್‌ನ ವರ್ಷದ ಮಹಿಳಾ ಪ್ರಶಸ್ತಿ, ಇಂಗ್ಲೆಂಡಿನ ಅಂತಾರಾಷ್ಟ್ರೀಯ ಬಯೋಗ್ರಾಫಿಕಲ್ ಕೇಂದ್ರದ ಅಂತಾರಾಷ್ಟ್ರೀಯ ಮಹಿಳಾ ಪ್ರಶಸ್ತಿ, ಕರ್ನಾಟಕ ಸರ್ಕಾರದ ಏಕಲವ್ಯ ಪ್ರಶಸ್ತಿ, ಮುಂತಾದ ೩೦ ಕ್ಕೂ ಮೀರಿ ಪ್ರತಿಷ್ಠಿತ ಪ್ರಶಸ್ತಿಗಳಿಗೆ ಮಾಲತಿ ಹೊಳ್ಳ ಭಾಜನರಾಗಿದ್ದಾರೆ.

ಅಭಿನಯ ಜಗತ್ತಿಗೂ ಮಾಲತಿ ಹೊಳ್ಳ ಹೊರತಾಗಿಲ್ಲ. ಡಾ. ರಾಜ್‌ಕುಮಾರ್ ಅವರೊಡನೆ 'ಕಾಮನಬಿಲ್ಲು' ಚಲನಚಿತ್ರದಲ್ಲಿ ಅಭಿನಯಿಸುವ ಮೂಲಕ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಮಾಲತಿ ಹೊಳ್ಳ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿ. ವಿಧಿ ಬದುಕಿನಲ್ಲಿ ಕೊಟ್ಟ ನೋವನ್ನು ನುಂಗಿ, ವಿಶ್ವವೇ ಬೆರಗಾಗುವಂತೆ ಬೆಳೆದಿರುವುದರಲ್ಲಿ ಅವರ ಪರಿಶ್ರಮವಿದೆ. ಅವರ ಸಾಧನೆಯನ್ನು ಕುರಿತು ಬರೆಯಲಾದ ಪ್ರೌಢ ಪ್ರಬಂಧವೊಂದಕ್ಕೆ ಡಾಕ್ಟರೇಟ್ ಪದವಿ ಲಭಿಸಿದೆ.

ತಮ್ಮಂತೆಯೇ ವಿಕಲಚೇತನರಾದ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಆಶ್ರಯ, ಶಿಕ್ಷಣ, ವೈದ್ಯಕೀಯ ನೆರವು ನೀಡುವ ಸಲುವಾಗಿ 'ಮಾತೃ ಫೌಂಡೇಶನ್' ಎಂಬ ಸೇವಾ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ಸದಾ ಚಟುವಟಿಕೆ ಅವರ ಯಶಸ್ಸಿನ ಗುಟ್ಟು. ಕೀಳರಿಮೆಗಿಂತ ಮಿಗಿಲಾದ ಅಂಗವೈಕಲ್ಯವಿಲ್ಲ. ನಾವು ನಗುತ್ತಲೇ ಜೀವನವನ್ನು ಎದುರಿಸಬೇಕು ಎನ್ನುವುದು ಅವರ ಸಿದ್ಧಾಂತ.

ಮಾಲತಿ ಹೊಳ್ಳರ ಜೀವನ ವಿಶೇಷ ಚೇತನರಿಗೆ (ವಿಭಿನ್ನ ಸಾಮರ್ಥ್ಯವುಳ್ಳವರು) ಮಾತ್ರವಲ್ಲ, ಎಲ್ಲ ಮಹಿಳೆಯರಿಗೂ ಸ್ಫೂರ್ತಿದಾಯಕ. ಛಲಗಾತಿ ಮಾಲತಿ ವಿಶೇಷ ಚೇತನರ ಕ್ರೀಡಾಪ್ರಪಂಚದಲ್ಲಿ ಹಲವು ದಾಖಲೆಗಳನ್ನು ನಿರ್ಮಿಸಿ, ಭಾರತದ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

* * * * *

©KTBS Not to be republished

**ಕೃತಿಕಾರರ ಪರಿಚಯ:**



**ಎಂ.ಎನ್. ಸುಂದರರಾಜ** ಅವರು ನಿವೃತ್ತ ಪ್ರಾಧ್ಯಾಪಕರು. ಇವರು ಚಿತ್ರದುರ್ಗ ಜಿಲ್ಲೆಯ ದುಮ್ಮಿಯವರು. ಅವರು ಅಂಕಣ ಬರಹಗಾರರಾಗಿ, ಲೇಖಕರಾಗಿ ಪ್ರಸಿದ್ಧರಾಗಿದ್ದಾರೆ. ಇಲ್ಲಿ ನೀಡಿರುವ 'ಜೂಲಿಯೋ ಇಗ್ಲೇಶಿಯಸ್' ವ್ಯಕ್ತಿ ಚಿತ್ರಣವನ್ನು ಅವರ **'ಹಿರಿಯರ ಹಾದಿ'** ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ. ಇವರ ಕೃತಿಗಳೆಂದರೆ **'ಹುಡುಕಾಟ'** ಮತ್ತು **'ನನ್ನ ಜೀವನ ಮತ್ತು ನನ್ನ ಹಾದಿ'**.

## ಅಭ್ಯಾಸ

### I. ಪದಗಳ ಅರ್ಥ :

**ಅನಿವಾರ್ಯ** – ತಪ್ಪಿಸಲಾಗದ

**ಅದೃಷ್ಟ** – ಭಾಗ್ಯ

**ಆಲ್ಬಂ** – ಹಾಡುಗಳ ಧ್ವನಿ ಸುರುಳಿ

**ಎದೆಗುಂದು** – ಭಯಪಡು

**ಕಣ್ಮಣಿ** – ಅಚ್ಚುಮೆಚ್ಚಾದ

**ಗಿಟಾರ** – ಸಂಗೀತದ ಒಂದು ತಂತಿ ವಾದ್ಯ.

**ಚಿಕಿತ್ಸೆ** – ವೈದ್ಯೋಪಚಾರ

**ತಲ್ಲೀನ** – ಮಗ್ನವಾಗು; ಆಸಕ್ತನಾಗು.

**ದಾಖಲೆ** – ಯಾರೂ ಮಾಡಲಾಗದ್ದು

**ದಾದಿ** – ಸೇವಕಿ

**ಪರಿಣತಿ** – ಕುಶಲತೆ

**ಪರಿಶ್ರಮ** – ವಿಶೇಷ ಶ್ರಮ

**ಭಾಜನ** – ಪಾತ್ರ

**ಭೀಕರ** – ಭಯಂಕರ

**ಮಿನುಗು** – ಹೊಳೆಯುವುದು

**ಯಶಸ್ಸು** – ಗೆಲವು

**ವ್ಯಾಧಿ** – ರೋಗ

**ವೃತ್ತಿ** – ಉದ್ಯೋಗ

**ಸಿದ್ಧಾಂತ** – ನಿರ್ಧರಿಸಲ್ಪಟ್ಟ ತತ್ತ್ವ

**ಸ್ಫೂರ್ತಿ** – ಪ್ರೇರಣೆ

**ಸ್ವಾಭಿಮಾನ** – ಆತ್ಮಗೌರವ

**ಸ್ವಾವಲಂಬನೆ** – ಇನ್ನೊಬ್ಬರನ್ನು ಆಶ್ರಯಿಸದಿರು.

### ಟಿಪ್ಪಣಿ :

೧. **ಸ್ಪೈನ್** – ಯುರೋಪ ಖಂಡದ ಒಂದು ದೇಶ.

೨. **ರಿಯಲ್ ಮ್ಯಾಡ್ರಿಡ್ ಕ್ಲಬ್** – ಸ್ಪೈನ್ ದೇಶದ ಒಂದು ಪ್ರಸಿದ್ಧ ಫುಟ್‌ಬಾಲ್ ಕ್ಲಬ್.

೩. **ಪೋಲಿಯೋ** – ಮಕ್ಕಳಿಗೆ ಬರುವ ಈ ವ್ಯಾಧಿಯಿಂದ ಕೈಕಾಲುಗಳು ಶಕ್ತಿಹೀನವಾಗಿ, ಶರೀರ ದುರ್ಬಲತೆಯನ್ನು ಹೊಂದುತ್ತದೆ.

©KTBS Not to be republished

೪. **ಪುನರ್ವಸತಿ ಕೇಂದ್ರ** – ಚಿಕಿತ್ಸೆ ಹಾಗೂ ವಸತಿ ವ್ಯವಸ್ಥೆ ಇರುವ ಸೇವಾಕೇಂದ್ರ. ಮನೆಯಲ್ಲಿ ಕೊಡಿಸಲಾಗದ ಚಿಕಿತ್ಸೆ ಹಾಗೂ ಸೇವಾಸೌಲಭ್ಯಗಳನ್ನು ಇಂತಹ ಕೇಂದ್ರಗಳು ನಿರ್ವಹಿಸುತ್ತವೆ.

೫. **ಅಭಿನಂದನೆ** – ಯಶಸ್ಸು ಸಾಧಿಸಿದಾಗ ಪ್ರಶಂಸಿಸುವ ರೀತಿ.

೬. **ಸಂಶೋಧನಾ ಪ್ರಬಂಧ** – ಯಾವುದಾದರೊಂದು ವಿಷಯ ಕುರಿತು ದೀರ್ಘ ವಿವರಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ ಬರೆದ ಅಧ್ಯಯನಪೂರ್ಣ ಬರಹ.

೭. **ಗಾಲಿಕುರ್ಚಿ** – ನಡೆಯಲಾಗದವರಿಗಾಗಿ ನಿರ್ಮಿಸಿರುವ ಚಕ್ರಗಳುಳ್ಳ ಕುರ್ಚಿ.

## II. ಪ್ರಶ್ನೆಗಳು :

### ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಜೂಲಿಯೋ ಇಗ್ಲೇಶಿಯಸ್ ಯಾವ ದೇಶದವನು?

೨. ಬಾಲಕ ಜೂಲಿಯೋ ಇಗ್ಲೇಶಿಯಸ್ ತಾನು ಮುಂದೆ ಏನಾಗಬೇಕೆಂದು ಬಯಸಿದ್ದನು?

೩. ಜೂಲಿಯೋ ಇಗ್ಲೇಶಿಯಸ್ ತನ್ನ ದುಃಖವನ್ನು ಹೇಗೆ ಮರೆತನು?

೪. ಜೂಲಿಯೋ ಇಗ್ಲೇಶಿಯಸ್ ಹೊರತಂದ ಹಾಡುಗಳ ಆಲ್ಬಂ ಯಾವುದು?

೫. ಮಾಲತಿ ಹೊಳ್ಳ ಅವರ ತಂದೆ ತಾಯಿಗಳ ಹೆಸರೇನು?

೬. ಮಾಲತಿ ಅವರಿಗೆ ಬಾಲ್ಯದಲ್ಲೇ ತಗುಲಿದ ರೋಗ ಯಾವುದು?

೭. ಮಾಲತಿ ಅವರು ಚೆನ್ನೈನಲ್ಲಿ ಚಿಕಿತ್ಸೆ ಪಡೆದ ಪುನರ್ವಸತಿ ಕೇಂದ್ರ ಯಾವುದು?

೮. ಮಾಲತಿ ಹೊಳ್ಳ ಗಳಿಸಿದ ಮೂರು ಮುಖ್ಯ ಪ್ರಶಸ್ತಿಗಳು ಯಾವುವು?

೯. ಮಾಲತಿ ಹೊಳ್ಳ ಯಾವ ಉದ್ಯೋಗದಲ್ಲಿದ್ದಾರೆ?

### ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಜೂಲಿಯೋ ಇಗ್ಲೇಶಿಯಸ್ ಫುಟ್ಬಾಲ್ ಆಟದಲ್ಲಿ ಯಾವ ರೀತಿ ಯಶಸ್ಸು ಸಾಧಿಸಿದ್ದರು?

೨. ಜೂಲಿಯೋ ಯಾವ ಕನಸು ಹೊಂದಿದ್ದನು? ಅದು ನುಚ್ಚುನೂರಾದುದು ಹೇಗೆ?

೩. ಜೂಲಿಯೋ ಇಗ್ಲೇಶಿಯಸ್ ಸಂಗೀತ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳೇನು?

©KTBS Not to be republished

೪. ಮಾಲತಿ ಅವರನ್ನು ಆಕ್ರಮಿಸಿದ ರೋಗದ ಲಕ್ಷಣವೇನು?

೫. ಅಹಮದಾಬಾದ್‌ನಲ್ಲಿ ನಡೆದ ಗಾಲಿಕುರ್ಚಿಯ ಓಟದ ಸ್ಪರ್ಧೆಯಲ್ಲಿ ಮಾಲತಿ ಹೊಳ್ಳ ಜಯಗಳಿಸಿದುದರ ವಿಶೇಷವೇನು?

೬. ಕ್ರೀಡೆಗಳತ್ತ ಮಾಲತಿಯವರಿಗೆ ಒಲವು ಬೆಳೆಯಲು ಕಾರಣವೇನು?

೭. ಮಾಲತಿ ಹೊಳ್ಳ ಭಾಗವಹಿಸಿದ ಅಂತಾರಾಷ್ಟ್ರೀಯ ಕ್ರೀಡಾಕೂಟಗಳು ಯಾವುವು?

೮. ಸಾಮಾಜಿಕ ಸೇವೆಯಲ್ಲಿ ಮಾಲತಿ ಹೇಗೆ ಕ್ರಿಯಾಶೀಲರಾಗಿದ್ದಾರೆ?

೯. ಮಾಲತಿ ಹೊಳ್ಳ ಜೀವನದಲ್ಲಿ ಕಂಡುಕೊಂಡ ಸಿದ್ಧಾಂತವೇನು?

**ಇ) ಬಿಟ್ಟ ಸ್ಥಳಗಳನ್ನು ನೀಡಿರುವ ಆಯ್ಕೆಯ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

೧. ಪೋಲಿಯೋ ಎಂಬುದು __________ ಬರುವ ವ್ಯಾಧಿ.
(ಮಕ್ಕಳಿಗೆ, ವಯಸ್ಕರಿಗೆ)

೨. ಮಾತೃ ಫೌಂಡೇಶನ್ ______ ಪ್ರದೇಶದ ಮಕ್ಕಳಿಗಾಗಿ ಸ್ಥಾಪಿಸಿದ ಸೇವಾಸಂಸ್ಥೆ.
(ನಗರ, ಗ್ರಾಮಾಂತರ)

೩. ಭಾರತ ಸರ್ಕಾರ ಮಾಲತಿ ಅವರಿಗೆ ________ ಪ್ರಶಸ್ತಿಯನ್ನು ೨೦೦೧ ರಲ್ಲಿ ನೀಡಿತು.
(ಪದ್ಮಭೂಷಣ, ಪದ್ಮಶ್ರೀ)

೪. ಮಾಲತಿ ಹೊಳ್ಳ ಅವರ ಕಾಲೇಜು ಶಿಕ್ಷಣ ______ ನಲ್ಲಿ ನಡೆಯಿತು.
(ಬೆಂಗಳೂರು, ಮದ್ರಾಸು)

೫. ಮಾಲತಿ ಹೊಳ್ಳರ ತಂದೆ ತಾಯಿಗಳ ಊರು _____ ಜಿಲ್ಲೆಯಲ್ಲಿದೆ.
(ಶಿವಮೊಗ್ಗ, ಉಡುಪಿ)

೬. ಜೂಲಿಯೋ ಆಸ್ಪತ್ರೆಯಲ್ಲಿದ್ದಾಗ ದಾದಿಯೊಬ್ಬಳು ______________ ಒಂದನ್ನು ತಂದು ಕೊಟ್ಟಳು.
(ಗಿಟಾರು, ಪಿಟೀಲು)

೭. ಜೂಲಿಯೋ ತನ್ನ ಇಪ್ಪತ್ತನೆಯ ವಯಸ್ಸಿಗೆ ಫುಟ್ಬಾಲ್ ಆಟದಲ್ಲಿ ಉತ್ತಮ ____________ ಎಂಬ ಖ್ಯಾತಿ ಪಡೆದನು.
(ಗೋಲ್ ಕೀಪರ್, ನಾಯಕ)

© KTBS Not to be republished

## III. ಭಾಷಾಭ್ಯಾಸ :

**ಅ) ಇಲ್ಲಿ ನೀಡಿರುವ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

೧. ನುಚ್ಚುನೂರಾಗು : ______________________

೨. ಆತ್ಮವಿಶ್ವಾಸ : ______________________

೩. ಕಣ್ಮಣಿ : ______________________

೪. ಯಶಸ್ಸು : ______________________

೫. ಭಾಜನ : ______________________

೬. ಸ್ಫೂರ್ತಿ : ______________________

**ಆ) ಇಲ್ಲಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

೧. ಆಸೆ X ..................... ೨. ಕೀರ್ತಿ X .....................

೩. ಖ್ಯಾತಿ X ..................... ೪. ವಿಫಲತೆ X .....................

೫. ಸ್ವಾವಲಂಬನೆ X ..................... ೬. ಅದೃಷ್ಟ X .....................

**ಇ) ಇಲ್ಲಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ :** ವಿದ್ಯಾಭ್ಯಾಸ = ವಿದ್ಯಾ + ಅಭ್ಯಾಸ

೧. ವಿಶ್ವಾದ್ಯಂತ = __________ + __________

೨. ಕೊಟ್ಯಂತರ = __________ + __________

೩. ನೂರಾಯಿತು = __________ + __________

೪. ಮುಟ್ಟಿರಲಿಲ್ಲ = __________ + __________

೫. ತಿಂಗಳಿಗೊಮ್ಮೆ = __________ + __________

©KTBS Not to be republished

## IV. ಚಟುವಟಿಕೆಗಳು :

೧. ಕರ್ನಾಟಕದ ಕ್ರೀಡಾಪಟುಗಳ ವಿವರ ಸಂಗ್ರಹಿಸಿ.
೨. ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿದ ವಿಶೇಷಚೇತನರ ಹೆಸರುಗಳನ್ನು ಸಂಗ್ರಹಿಸಿ.
೩. ವಿಶೇಷಚೇತನವುಳ್ಳ ಮಕ್ಕಳ ಪುನರ್ವಸತಿ ಕೇಂದ್ರಕ್ಕೆ ನಿಮ್ಮ ಅಧ್ಯಾಪಕರೊಂದಿಗೆ ಭೇಟಿ ನೀಡಿ ಅಲ್ಲಿರುವ ಮಕ್ಕಳೊಂದಿಗೆ ಸಂಭಾಷಿಸಿ, ವರದಿ ಬರೆಯಿರಿ.

**೪. ಇಲ್ಲಿ ಕೊಟ್ಟಿರುವ ವಿಷಯ ಹಾಗೂ ಗಾದೆಮಾತುಗಳ ನಡುವಿರುವ ಸಂಬಂಧವನ್ನು ಚರ್ಚಿಸಿರಿ.**

ಬಸಯ್ಯ ಕಡು ಬಡತನದ ಯುವಕ. ರೈತನಾಗಬೇಕೆಂಬ ಬಯಕೆ. ತಂದೆಯಿಂದ ಬಂದ ಎರಡು ಎಕರೆ ಭೂಮಿಯಿತ್ತು. ಅದು ಬಂಜರು ಗುಡ್ಡಗಳಿಂದ ಕೂಡಿದ ಭೂಮಿ. ನೀರಾವರಿ ಸೌಲಭ್ಯವಿಲ್ಲ. ಆದರೂ ಸಾಧಿಸುವ ಛಲವಿತ್ತು. ತನ್ನ ಭೂಮಿಯಲ್ಲಿದ್ದ ಗಿಡಗಂಟೆಗಳನ್ನು ತೆಗೆದ. ಅಲ್ಲಲ್ಲಿ ಇದ್ದ ಸಣ್ಣ ಪುಟ್ಟ ಬಂಡೆಗಲ್ಲುಗಳನ್ನು ಒಡೆಸಿ ಹೊರ ಹಾಕಿದ. ನೇಗಿಲಿನಿಂದ ಉಳುಮೆ ಮಾಡಿದ. ಕೊಟ್ಟಿಗೆ ಗೊಬ್ಬರ ಹಾಕಿ ಭೂಮಿಯನ್ನು ಹದ ಮಾಡಿದನು.

ಮಳೆಗಾಲದಲ್ಲಿ ತನ್ನ ಭೂಮಿಯ ಪಕ್ಕದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಕಂಡನು. ಸರ್ಕಾರದಿಂದ ಹಣ ಸಹಾಯ ಪಡೆದು ಹೊಂಡ ತೆಗೆಸಿದ. ಮಳೆ ನೀರನ್ನು ಸಂಗ್ರಹಿಸಿದ. ಕೃಷಿ ಅಧಿಕಾರಿಗಳ ಜೊತೆ ಚರ್ಚಿಸಿದ. ಸಂಗ್ರಹಿಸಿದ ಮಳೆ ನೀರಿಗೆ ಹನಿ ನೀರಾವರಿ ಅಳವಡಿಸಿದನು. ವಿವಿಧ ಬೆಳೆ ಪದ್ಧತಿ ಅಳವಡಿಸಿಕೊಂಡನು. ದಾಳಿಂಬೆ, ಸಪೋಟ, ತೆಂಗು, ಹೂ ಬೆಳೆಗಳನ್ನು ಬೆಳೆದ. ಅಧಿಕ ಇಳುವರಿ ಪಡೆದನು. ಕೈತುಂಬ ಹಣ ಸಂಪಾದಿಸಿದನು. ಸುತ್ತಮುತ್ತಲಿನ ರೈತರು ಇವನ ಸಾಹಸ ಕಂಡು ಬೆರಗಾದರು. ಯುವಕನ ಸಾಧನೆ ಕಂಡು ಸರ್ಕಾರ 'ಕೃಷಿ ಪಂಡಿತ' ಪ್ರಶಸ್ತಿ ನೀಡಿ ಗೌರವಿಸಿತು.

**ಗಾದೆಗಳು :**

೧. ಕಾಯಕವೇ ಕೈಲಾಸ.

೨. ದುಡಿಮೆಯೇ ದುಡ್ಡಿನ ತಾಯಿ.

೩. ಕೈ ಕೆಸರಾದರೆ ಬಾಯಿ ಮೊಸರು.

೪. ಕಷ್ಟಪಟ್ಟರೆ ಫಲವುಂಟು.

* * * * *

©KTBS Not to be republished

## ಪಾಠ – ೧೦

# ಐಕ್ಯಗಾನ

– ಜಿ.ಎಸ್. ಶಿವರುದ್ರಪ್ಪ

**ಪಾಠ ಪ್ರವೇಶ :**

ಭಾರತ ಭೌಗೋಳಿಕವಾಗಿ ವೈವಿಧ್ಯತೆಯಿಂದ ಕೂಡಿದೆ. ಭಾರತದ ನಾನಾ ಭಾಗಗಳಲ್ಲಿ ವಾಸಿಸುವ ಜನರ ಉಡುಗೆ, ತೊಡುಗೆ, ಸಂಸ್ಕೃತಿ, ಭಾಷೆ, ಧರ್ಮ, ಕಸುಬು ಭಿನ್ನ ಭಿನ್ನವಾಗಿದ್ದರೂ ನಾವು ಭಾರತೀಯರು ಎನ್ನುವ ಏಕತಾ ಭಾವ ಎಲ್ಲರಲ್ಲೂ ಮನೆಮಾಡಿದೆ. ಹೀಗಾಗಿ ಭಾರತವನ್ನು ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವ ವಿಶಿಷ್ಟ ರಾಷ್ಟ್ರ ಎಂದು ಕರೆಯಲಾಗುತ್ತದೆ.

ಇಂತಹ ಪುಣ್ಯಭೂಮಿಯಲ್ಲಿ ಜನಿಸಿದ ನಾವು ಜಾತಿ, ಧರ್ಮ, ಪಂಗಡ, ಪ್ರದೇಶ, ಭಾಷೆ, ನೆಲ, ಜಲಗಳ ವಿಚಾರವಾಗಿ ಪರಸ್ಪರ ದ್ವೇಷ ಕಟ್ಟಿಕೊಳ್ಳದೆ ಪ್ರೀತಿ ವಿಶ್ವಾಸ ಗೌರವಗಳನ್ನು ಬೆಳೆಸಿಕೊಂಡು ರಾಷ್ಟ್ರೀಯ ಭಾವೈಕ್ಯತೆಯನ್ನು ಬಲಪಡಿಸಬೇಕಾಗಿದೆ. ನಮ್ಮಲ್ಲಿ ಎಷ್ಟೇ ಭೇದಗಳಿದ್ದರೂ ನಾವೆಲ್ಲರೂ ಒಂದೇ, ಭಾರತಾಂಬೆಯ ಮಕ್ಕಳು ಎನ್ನುವ ಐಕ್ಯತಾ ಭಾವ ಬಲವಾದರೆ ದೇಶ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಹೀಗಾಗಿ ಕವಿ ಪ್ರಕೃತಿಯ ಹಲವು ನಿದರ್ಶನಗಳ ಮೂಲಕ ಭಾವೈಕ್ಯತೆಯ ಸಂದೇಶವನ್ನು ಸ್ಪಷ್ಟಪಡಿಸಿದ್ದಾರೆ.

©KTBS Not to be republished

ಒಂದೇ ಒಂದೇ, ನಾವೆಲ್ಲರು ಒಂದೇ,
ಈ ದೇಶದೊಳೆಲ್ಲಿದ್ದರು
ಭಾರತ ನಮಗೊಂದೇ–

ಹಲವು ಕೊಂಬೆಗಳ ಚಾಚಿಕೊಂಡರೂ
ಮರಕ್ಕೆ ಬುಡ ಒಂದೇ
ಸಾವಿರ ನದಿಗಳು ಹೇಗೆ ಹರಿದರೂ
ಕೂಡುವ ಕಡಲೊಂದೇ.

ಇರುಳಿಗೆ ಸಾಸಿರ ಚಿಕ್ಕೆಗಳಿದ್ದರು
ಹಗಲಿಗೆ ರವಿ ಒಂದೇ
ಅಗಣಿತ ಗ್ರಹಮಂಡಲಗಳ ಚಲನೆಗೆ
ಆಕಾಶವು ಒಂದೇ.



ನೂರುಬಗೆಯ ಆರಾಧನೆಯಿದ್ದರು
ದೇವರು ಎಲ್ಲರಿಗೊಂದೇ,
ಹಲವು ಬಣ್ಣಗಳ ಹಸುಗಳು ಕರೆಯುವ
ಹಾಲಿನ ಬಿಳುಪೊಂದೇ.

ನಡೆ-ನುಡಿ ಭೇದಗಳೆಷ್ಟೇ ಇದ್ದರು
ಬದುಕುವ ಜನ ಒಂದೇ,
ನೆಳಲು-ಬೆಳಕುಗಳ ರೆಕ್ಕೆಯ ಬಿಚ್ಚುತ
ಹಾರಾಡುವ ಧ್ವಜ ಒಂದೇ.

* * * * *

## ಕೃತಿಕಾರರ ಪರಿಚಯ :



ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರು ೧೯೨೬ ರಲ್ಲಿ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಈಸೂರು ಎಂಬ ಗ್ರಾಮದಲ್ಲಿ ಜನಿಸಿದರು. ಮೈಸೂರು, ಉಸ್ಮಾನಿಯಾ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ಇವರು ಕವಿಯಾಗಿ, ವಿಮರ್ಶಕರಾಗಿ ಪ್ರಸಿದ್ಧರಾಗಿದ್ದಾರೆ. **'ಸೌಂದರ್ಯ ಸಮೀಕ್ಷೆ'**, **'ದೀಪದ ಹೆಜ್ಜೆ'**, **'ಸಾಮಗಾನ'**, **'ಕಾರ್ತೀಕ'**, **'ಅನಾವರಣ'**, **'ಚೆಲುವು-ಒಲವು'**, **'ಗೋಡೆ'**, **'ತೆರೆದ ದಾರಿ'**, **'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು'**, **'ಕಾವ್ಯಾರ್ಥ ಚಿಂತನ'** ಮುಂತಾದವು ಇವರ ಪ್ರಮುಖ ಕೃತಿಗಳು.

'ಕಾವ್ಯಾರ್ಥ ಚಿಂತನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಜೊತೆಗೆ ಪಂಪ ಪ್ರಶಸ್ತಿ, ನೃಪತುಂಗ ಪ್ರಶಸ್ತಿ ಹಾಗೂ ರಾಷ್ಟ್ರಕವಿ ಬಿರುದನ್ನೂ ಪಡೆದಿದ್ದಾರೆ. ಇವರು ೧೯೯೨ ರಲ್ಲಿ ದಾವಣಗೆರೆಯಲ್ಲಿ ನಡೆದ ೬೧ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಇವರು ೨೦೧೩ ರಂದು ನಿಧನರಾದರು. ಪ್ರಸ್ತುತ **'ಐಕ್ಯಗಾನ'** ಕವಿತೆಯನ್ನು ಅವರ **'ಪ್ರೀತಿ ಇಲ್ಲದ ಮೇಲೆ'** ಕವನ ಸಂಕಲನದಿಂದ ಆಯ್ಕೆಮಾಡಲಾಗಿದೆ.

## ಅಭ್ಯಾಸ

### I. ಪದಗಳ ಅರ್ಥ :

**ಅಗಣಿತ** – ಅಸಂಖ್ಯ; ಲೆಕ್ಕವಿಲ್ಲದಷ್ಟು.
**ಇರುಳು** – ಕತ್ತಲೆ; ರಾತ್ರಿ.
**ಗ್ರಹಮಂಡಲ** – ಗ್ರಹ ಮತ್ತು ಉಪಗ್ರಹಗಳ ಸಮೂಹ.
**ಚಿಕ್ಕೆ** – ನಕ್ಷತ್ರ; ತಾರೆ.
**ಬುಡ** – ಬೇರು; ತಳ; ಮೂಲ.
**ಚಾಚು** – ಹರಡು; ವಿಸ್ತರಿಸು.
**ಆರಾಧನೆ** – ಪೂಜೆ; ಧ್ಯಾನ.
**ಐಕ್ಯ** – ಒಂದಾಗು; ಸೇರು.
**ಗಾನ** – ಹಾಡು
**ನೆಳಲು** – ನೆರಳು; ಛಾಯೆ.
**ಸಾಸಿರ** – ಸಾವಿರ; ಸಹಸ್ರ.

## II. ಪ್ರಶ್ನೆಗಳು :

**ಅ) ಈ ಕೆಳಗೆ ನೀಡಿರುವ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.**

೧. ಸಾವಿರ ನದಿಗಳು ಹೇಗೆ ಹರಿದರೂ ____________

೨. ಅಗಣಿತ ____________ ಚಲನೆಗೆ ಆಕಾಶವು ಒಂದೇ.

೩. ನೂರು ಬಗೆಯ ಆರಾಧನೆಯಿದ್ದರು ____________ ಎಲ್ಲರಿಗೊಂದೇ.

೪. ನಡೆನುಡಿ ____________ ಇದ್ದರು ಬದುಕುವ ಜನ ಒಂದೇ.

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಐಕ್ಯಗಾನ ಪದ್ಯದಲ್ಲಿ ಮರದ ಕೊಂಬೆ ಹಾಗೂ ಬುಡ ಏನನ್ನು ಸಂಕೇತಿಸುತ್ತವೆ?

೨. ಐಕ್ಯಗಾನ ಪದ್ಯದಲ್ಲಿ ಹಸುಗಳ ಬಣ್ಣ ಹಾಗೂ ಹಾಲಿನ ಬಿಳುಪು ಏನನ್ನು ಧ್ವನಿಸುತ್ತವೆ?

೩. ಹಾರಾಡುವ ಧ್ವಜ ಯಾವುದರ ಸಂಕೇತವಾಗಿದೆ?

೪. ಐಕ್ಯಗಾನ ಕವನದ ಆಕರ ಗ್ರಂಥ ಯಾವುದು?

**ಇ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಅನೇಕತೆಯಲ್ಲಿ ಏಕತೆಯನ್ನು ಮರ ಮತ್ತು ನದಿಗಳು ಹೇಗೆ ತಿಳಿಸುತ್ತವೆ?

೨. ಇರುಳಿಗೆ ಸಾಸಿರ ಚಿಕ್ಕೆಗಳಿದ್ದರು ಹಗಲಿಗೆ ರವಿ ಒಂದೇ – ಎನ್ನುವಲ್ಲಿ ವ್ಯಕ್ತವಾಗಿರುವ ಕವಿಯ ಭಾವನೆಗಳೇನು?

೩. ಭಾರತೀಯರ ಧರ್ಮಾಚಾರಣೆ ಹಾಗೂ ವೇಷಭೂಷಣಗಳು ಭಿನ್ನವಾಗಿದ್ದರೂ ಭಾವ ಒಂದೇ ಎಂಬುದಕ್ಕೆ ಕವಿ ಯಾವ ನಿದರ್ಶನಗಳನ್ನು ನೀಡಿದ್ದಾರೆ?

**ಈ) ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ನಾವೆಲ್ಲರು ಒಂದೇ ಭಾರತ ನಮಗೊಂದೆ ಎನ್ನುವುದಕ್ಕೆ ಕವಿ ನೀಡುವ ನಿದರ್ಶನಗಳಾವುವು?

೨. ಐಕ್ಯಗಾನ ಪದ್ಯದಲ್ಲಿ ಕವಿ ನೀಡಿರುವ ಸಂದೇಶವೇನು?

©KTBS Not to be republished

ಉ) ಸಂದರ್ಭದೊಡನೆ ವಿವರಿಸಿರಿ.

೧. ಹಲವು ಕೊಂಬೆಗಳ ಚಾಚಿಕೊಂಡರೂ ಮರಕ್ಕೆ ಬುಡ ಒಂದೇ.

೨. ಹಲವು ಬಣ್ಣಗಳ ಹಸುಗಳು ಕರೆಯುವ ಹಾಲಿನ ಬಿಳುಪೊಂದೇ.

೩. ನೆಳಲು-ಬೆಳಕುಗಳ ರೆಕ್ಕೆಯ ಬಿಚ್ಚುತ ಹಾರಾಡುವ ಧ್ವಜ ಒಂದೇ.

ಊ) ಮರದ ಕೊಂಬೆಗಳು ವಿವಿಧತೆಯನ್ನು, ಬುಡ ಏಕತೆಯನ್ನು ಬಿಂಬಿಸುತ್ತದೆ. ಅದೇರೀತಿ ಐಕ್ಯಗಾನ ಪದ್ಯದಲ್ಲಿ ವಿವಿಧತೆ ಹಾಗೂ ಏಕತೆಯನ್ನು ಸಂಕೇತಿಸಿರುವ ಅಂಶಗಳನ್ನು ಪಟ್ಟಿಮಾಡಿರಿ.

| ವಿವಿಧತೆ | ಏಕತೆ |
|---|---|
| ಮರದ ಕೊಂಬೆಗಳು | ಮರದ ಬುಡ |

©KTBS Not to be republished

## III. ಭಾಷಾಭ್ಯಾಸ :

ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

೧. ಮರ –

೨. ನಕ್ಷತ್ರ –

೩. ರವಿ –

೪. ಕಡಲು –

೫. ಇರುಳು –

ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.

೧. ಹಗಲು X ......................................     ೨. ಭೇದ X ......................................

೩. ನೆಳಲು X ......................................     ೪. ಹಲವು X ......................................

ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.

೧. ನಾವೆಲ್ಲರು :______________________________

೨. ಅಗಣಿತ : ______________________________

೩. ನಡೆನುಡಿ :______________________________

೪. ಆರಾಧನೆ :______________________________

ಈ) ಇಲ್ಲಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.

**ಮಾದರಿ :** ನಾವೆಲ್ಲರು = ನಾವು + ಎಲ್ಲರು

೧. ದೇಶದೊಳಿಲ್ಲಿದ್ದರು = ____________ + ____________

೨. ನಮಗೊಂದೆ = ____________ + ____________

೩. ಕಡಲೊಂದೆ = ____________ + ____________

೪. ಚಿಕ್ಕೆಗಳಿದ್ದರು = ____________ + ____________

೫. ಬಿಳುಪೊಂದೆ = ____________ + ____________

## IV. ಚಟುವಟಿಕೆ :

೧. ಐಕ್ಯಗಾನ ಪದ್ಯವನ್ನು ಕಂಠಪಾಠ ಮಾಡಿ, ರಾಗವಾಗಿ ಹಾಡುವುದನ್ನು ಕಲಿಯಿರಿ.

೨. ನಮ್ಮ ರಾಷ್ಟ್ರಗೀತೆಯ ಪ್ರತಿ ಸಾಲು ನೀಡುವ ಅರ್ಥವನ್ನು ತಿಳಿಯಿರಿ.

೩. ಭಾರತದ ರಾಷ್ಟ್ರಧ್ವಜ, ಚಿಹ್ನೆ, ಪಕ್ಷಿ, ಪ್ರಾಣಿ, ಹೂವು, ಮರ ಹಾಗೂ ಹಣ್ಣು ಇವುಗಳ ಚಿತ್ರ ಸಂಗ್ರಹಿಸಿ, ಭಿತ್ತಿಪತ್ರದಲ್ಲಿ ಪ್ರಕಟಿಸಿ.

೪. ಭಾವೈಕ್ಯತೆಯ ಸಂದೇಶವಿರುವ ಕವಿತೆಗಳನ್ನು ಸಂಗ್ರಹಿಸಿ, ಶಾಲಾ ಕಾರ್ಯಕ್ರಮಗಳಲ್ಲಿ ಸಾಮೂಹಿಕವಾಗಿ ಹಾಡಿರಿ.

©KTBS Not to be republished

## V. ಸೈದ್ಧಾಂತಿಕ ವ್ಯಾಕರಣ:

### ವಿಧ್ಯರ್ಥಕ ವಾಕ್ಯಗಳು :

ಮಕ್ಕಳೇ, ನೀವು ಈಗಾಗಲೇ ಹಲವು ರೀತಿಯ ವಾಕ್ಯಗಳನ್ನು ಗಮನಿಸಿದ್ದೀರಿ. ಈಗ ಇಲ್ಲಿರುವ ವಾಕ್ಯಗಳನ್ನು ಓದಿರಿ. ಆ ವಾಕ್ಯಗಳ ಹಿಂದಿರುವ ಭಾವವನ್ನು ಗಮನಿಸಿ. ಅವುಗಳನ್ನು ಕಂಸದಲ್ಲಿ ನೀಡಿದೆ.

೧. ಪ್ರಕಾಶ ಇತ್ತ ಕಡೆಗೆ ಬಾ. **(ಆದೇಶ)**

೨. ದೇವರು ಎಲ್ಲರಿಗೂ ಒಳ್ಳೆಯದು ಮಾಡಲಿ. **(ಪ್ರಾರ್ಥನೆ)**

೩. ನೀನು ಅಂಗಡಿಗೆ ಹೋಗಿ ಸಕ್ಕರೆ ತೆಗೆದುಕೊಂಡು ಬರಬೇಕು. **(ಆದೇಶ)**

೪. ನೀನು ಸ್ವಲ್ಪ ನೀರು ಕೊಡುವೆಯಾ? **(ಬೇಡಿಕೆ / ಕೋರಿಕೆ)**

**ಈ ರೀತಿ ಆದೇಶ, ಪ್ರಾರ್ಥನೆ, ಕೋರಿಕೆ ಅಥವಾ ಬೇಡಿಕೆಗಳನ್ನು ಮಂಡಿಸುವ ವಾಕ್ಯಗಳಿಗೆ ವಿಧ್ಯರ್ಥಕ ವಾಕ್ಯಗಳೆಂದು ಕರೆಯುತ್ತಾರೆ.**

* * * * *

©KTBS Not to be republished


# ಪಾಠ – ೧೧

## ಸಾಹಸಿ ಮೊನಾಲಿಸಾ

**ಪಾಠ ಪ್ರವೇಶ :**

ಯುದ್ಧವನ್ನು ಗೆಲುವುದು ಸಾಹಸ. ಗಡಸು ಭೂಮಿಯನ್ನು ಉತ್ತು ಬಿತ್ತುವುದೂ ಸಾಹಸ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸುವುದೂ ಸಾಹಸ. ಇವು ಆಕಸ್ಮಿಕವಾಗಿ ದಿಢೀರನೆ ಬರುವುದಿಲ್ಲ. ಬಾಲ್ಯದಲ್ಲಿಯೇ ಈ ನಡತೆಯನ್ನು ಬೆಳೆಸಿಕೊಳ್ಳಬೇಕು.

ಇದೇ ರೀತಿ ಪ್ರೀತಿ, ದಯೆ, ಅಂತಃಕರಣಗಳನ್ನು ಇನ್ನೊಬ್ಬರಿಗೆ ತೋರಿಸಲೇಬೇಕು. ಇನ್ನೊಬ್ಬರ ಕಷ್ಟದಲ್ಲಿ ಸಹಾಯ, ಅನುಕಂಪ ಇರಬೇಕು. ವಿಶೇಷಚೇತನರ ಬಗ್ಗೆ, ರೋಗಿಗಳ ಬಗ್ಗೆ, ಅಜ್ಜ-ಅಜ್ಜಿಯರಿಗೆ ನೀವು ಸಹಾಯ ಮಾಡಬೇಕು. ಚಿಕ್ಕ ಬಾಲಕಿಯೊಬ್ಬಳು ತನ್ನ ಪ್ರಾಣವನ್ನು ಲೆಕ್ಕಿಸದೆ ಕುರುಡ ಬಾಲಕನನ್ನು ರಕ್ಷಿಸಿದ ಸಾಹಸ ಕಥೆ ಇಲ್ಲಿದೆ. ಮಕ್ಕಳು ಇದರಿಂದ ಪ್ರೇರಣೆ ಪಡೆಯಬೇಕು.



©KTBS Not to be republished

ಒಡಿಶಾ ರಾಜ್ಯದಲ್ಲಿ ಒಂದು ನಗರ ಗೋಪಬಂಧು. ಆ ನಗರದ ಯು.ಜಿ.ಎಂ.ಇ. ಶಾಲೆಯ ಗಂಟೆ ಬಾರಿಸಿತು. ಮಕ್ಕಳೆಲ್ಲ ಹೋ.. ಎನ್ನುತ್ತ ಮನೆಯ ಕಡೆ ಹೊರಟರು. ಎರಡನೆಯ ತರಗತಿಯ ಮೊನಾಲಿಸಾ ಮೆಲ್ಲನೆ ಮನೆಗೆ ಹೊರಟಿದ್ದಳು. ಆಕೆಯ ಹಿಂದೆ ಹತ್ತು ವರುಷದ ಕುರುಡ ಹುಡುಗನೂ ಹೊರಟಿದ್ದನು.

ರಸ್ತೆಯ ಬದಿಯ ಹುಲ್ಲನ್ನು ಎರಡು ದಷ್ಟಪುಷ್ಟ ಹೋರಿಗಳು ಮೇಯುತ್ತಿದ್ದವು. ಚಿನ್ನಾಟವಾಡುತ್ತಿದ್ದವು. ಅವು ಒಮ್ಮಿಂದೊಮ್ಮೆಲೆ ಗುದ್ದಾಟಕ್ಕೆ ನಿಂತವು. ಒಂದನ್ನು ಇನ್ನೊಂದು ಕೊಂಬಿನಿಂದ ತಿವಿಯುತ್ತ, ಇರಿಯುತ್ತ ಮೆರೆದಾಡತೊಡಗಿದವು. ಅದನ್ನು ಮೊನಾಲಿಸಾ ನೋಡಿದಳು. ರಸ್ತೆಯ ಬದಿಗೆ ಸಾಗುತ್ತಿರುವಾಗ, ಅವು ಅವಳ ಕಡೆಗೆ ಜಿಗಿದು ಬಂದವು. ಆ ಕ್ಷಣ ಗಾಬರಿಗೊಂಡಳು. ಇನ್ನೇನು ತಿವಿಯಬೇಕೆನ್ನುವಷ್ಟರಲ್ಲಿ ಜೀವದ ಹಂಗಿಲ್ಲದೆ ಜೋರಾಗಿ ಆ ಬದಿಗೆ ಓಡಿದಳು. ಬದುಕಿದೆಯಾ ಬಡಜೀವ ಎನ್ನುವಷ್ಟರಲ್ಲಿ ಚಿಟ್ಟನೆ ಚೀರಿದ ಅಳುವ ಶಬ್ದ ಕೇಳಿತು. ಅದರ ಬೆನ್ನಹಿಂದೆಯೇ 'ನನ್ನನ್ನು ಕಾಪಾಡಿ! ಕಾಪಾಡಿ' ಎಂದು ಹುಡುಗನೊಬ್ಬ ಕಿರುಚುತ್ತಿದ್ದ.

ಮೊನಾಲಿಸಾ ಧ್ವನಿಯತ್ತ ಹೊರಳಿ ನೋಡಿದಳು. ಆ ಕುರುಡು ಹುಡುಗ ದನಗಳ ತಿವಿತಕ್ಕೆ ಒಳಗಾಗಿ ಬಿದ್ದಿದ್ದನು. ರಕ್ತ ಸೋರುತ್ತಿತ್ತು. ಸಹಾಯಕ್ಕಾಗಿ ಅತ್ತ ಇತ್ತ ಕೈಯಾಡಿಸುತ್ತಿದ್ದನು. ಎದ್ದು ನಿಂತರೆ ಅವನು ಆ ದನಗಳ ತುಳಿತಕ್ಕೆ ಸಿಕ್ಕುಬೀಳುತ್ತಿದ್ದ. ಅದೇ ಸಮಯಕ್ಕೆ ಆ ರಸ್ತೆಯಲ್ಲಿ ಎರಡು ಕಾರುಗಳು ವೇಗವಾಗಿ ಎದುರು ಬದುರು ಬರುತ್ತಿದ್ದವು. ಕ್ಷಣ ತಡಮಾಡಿದರೆ ಹುಡುಗ ಸಾಯುತ್ತಾನೆಂದು ಮೊನಾಲಿಸಾ ಚಿಂತಿಸಿದಳು. ಹೋರಿಗಳಿಗೆ ಹೆದರದೆ, ಕಾರುಗಳಿಂದಾಗುವ ಅಪಾಯವನ್ನು ಲೆಕ್ಕಿಸದೆ ಓಡಿದಳು. ಆ ಕುರುಡ ಹುಡುಗನ ಕೈ ಹಿಡಿದಳು. ದರದರನೆ ಎಳೆದು ರಸ್ತೆಯ ಅಂಚಿಗೆ ತಂದಳು. ಆತನನ್ನು ಬದುಕಿಸಿದಳು. ತಾನು ಕುಸಿದು ಕುಳಿತಳು. ರಸ್ತೆಯಲ್ಲಿ ಸಾಗುತ್ತಿದ್ದ ಕಾರಿನವನು ಇದನ್ನೆಲ್ಲ ನೋಡಿದ. ಅವನು ತನಗೇನೂ ಸಂಬಂಧವಿಲ್ಲದಂತೆ ಹೊರಟು ಹೋದನು. ಇನ್ನೊಬ್ಬ ಕಾರಿನ ಚಾಲಕ ಕಾರನ್ನು ನಿಲ್ಲಿಸಿದ. ಆ ದನಗಳನ್ನು ಓಡಿಸಿದ. ಬಿದ್ದ ಮಗುವನ್ನು ಎಬ್ಬಿಸಿದ. ಕಾರಿನಲ್ಲಿದ್ದ ಪ್ರಥಮ ಚಿಕಿತ್ಸೆಯ ಪೆಟ್ಟಿಗೆ ತೆಗೆದ. ರಕ್ತ ಒಸರುತ್ತಿದ್ದ ಕಾಲನ್ನು ಡೆಟಾಲಿನಿಂದ ಒರೆಸಿದ. ಬ್ಯಾಂಡೇಜ್ ಕಟ್ಟಿದ. ಥರಥರನೆ ನಡುಗುತ್ತಿದ್ದ ಕುರುಡು ಹುಡುಗನಿಗೆ ಸಮಾಧಾನ ಹೇಳಿದನು. ಮೊನಾಲಿಸಾಳನ್ನು ಎಬ್ಬಿಸಿದ. "ಭೇಷ್ ಮಗು! ನಿನ್ನ ಧೈರ್ಯ ಮೆಚ್ಚಿದೆನು. ನಿನ್ನ ಸಮಯಪ್ರಜ್ಞೆ ಒಬ್ಬ ಕುರುಡನ ಜೀವ ಉಳಿಸಿತು. ನಿನ್ನ ಸಹಾನುಭೂತಿ ದೊಡ್ಡದು" ಎಂದು ಮಗುವನ್ನು ಎತ್ತಿ ಮುದ್ದಾಡಿದನು.

ಆಗ ಮಗು "ಮಾಮಾ, ನೀನು ಬಹಳ ಒಳ್ಳೆಯವನು. ಆ ತುಂಟ ದನಗಳನ್ನು ಓಡಿಸಿದೆ. ಈ ಕಣ್ಣುಕಾಣದ ಹುಡುಗನ ಗಾಯದ ರಕ್ತ ಒರೆಸಿ ಬ್ಯಾಂಡೇಜ್ ಕಟ್ಟಿ ಸಂತೈಸಿರುವೆ. ಆಪತ್ತಿಗೆ ಆದವನೇ ನೆಂಟ. ಇತರರಿಗೆ ಸಹಾಯ ಮಾಡುವ ದೊಡ್ಡ ಗುಣವಿದೆ. ದೇವರು ನಿನ್ನನ್ನು ಚೆನ್ನಾಗಿಟ್ಟಿರಲಿ" ಎಂದು ಧನ್ಯವಾದ ಹೇಳಿದಳು.

ಏಳು ವರುಷದ ಬಾಲಕಿಯ ಮುಗ್ಧ ಮಾತುಗಳಿಗೆ ಆತ ಬೆರಗಾದನು. "ಅಬ್ಬಾ! ನೀನೆಷ್ಟು ಜಾಣೆ! ನಿನ್ನ ಹೆತ್ತ ತಂದೆ ತಾಯಿಗಳು ಧನ್ಯರು. ನಿನ್ನ ಗುರುಗಳು ನಿನಗೆ ಒಳ್ಳೆಯ ಶಿಕ್ಷಣ ನೀಡಿದ್ದಾರೆ. ಪರರ ನೋವನ್ನು ತನ್ನ ನೋವೆಂದು ತಿಳಿಯುವ ನಿನ್ನ ಭಾವನೆ ಮೆಚ್ಚುವಂತಹದ್ದು. ನಿನ್ನ ಭವಿಷ್ಯ ಬೆಳಗಲಿ" ಎಂದನು. ಅಷ್ಟರಲ್ಲಿ ಹತ್ತಾರು ಜನ ಸೇರಿದರು. ಈ ಸುದ್ದಿ ಊರ ತುಂಬಾ ಹರಡಿತು. ಸಂಘ ಸಂಸ್ಥೆಗಳು ಸಾರ್ವಜನಿಕರು ಶಾಲೆಗೆ ಬಂದರು. ಅವಳಿಗೆ ಬಹುಮಾನ ನೀಡಿ ಸನ್ಮಾನಿಸಿದರು. ಅವಳ ಸಾಹಸವನ್ನು ಸೂಚನಾ ಫಲಕದ ಮೇಲೆ ಪ್ರಕಟಿಸಿದರು. ಮುಖ್ಯೋಪಾಧ್ಯಾಯರು ಚಿತ್ರ ಸಹಿತ ವಿವರಣೆ ನೀಡಿದರು.

©KTBS Not to be republished

ಜಿಲ್ಲಾಧಿಕಾರಿಗಳು ಶಾಲೆಗೆ ಬಂದು ಮಗುವನ್ನು ಅಭಿನಂದಿಸಿದರು. "ದಯವೇ ಧರ್ಮದ ಮೂಲ" ಎಂದರು. ಅವಳ ಮಾನವೀಯತೆ ಹಾಗೂ ಸಹಾನುಭೂತಿಯನ್ನು ಹೊಗಳಿದರು. ಧೈರ್ಯ ಸಾಹಸಗಳೇ ಗೆಲುವಿನ ಮೆಟ್ಟಿಲು ಎಂದರು. ಅಬ್ದುಲ್ ಹಮೀದನ ಸಾಹಸದ ಕಥೆ ನೆನಪಿಸಿದರು. ಮಕ್ಕಳೆಲ್ಲರೂ ಖುಷಿ ಪಟ್ಟು ಚಪ್ಪಾಳೆ ತಟ್ಟಿದರು. ಎಲ್ಲರಿಗೂ ಸಿಹಿ ಹಂಚಿದರು. ಒಡಿಶಾ ರಾಜ್ಯ ಸರ್ಕಾರದ ಮಕ್ಕಳ ಕಲ್ಯಾಣ ಮಂಡಳಿ ಆಕೆಯನ್ನು ಗೌರವಿಸಿತು. ಅಪ್ರತಿಮ ಸಾಹಸಿಗಳಿಗೆ ಮೀಸಲಾದ "ಗೀತಾ ಛೋಪ್ರ" ಪ್ರಶಸ್ತಿಯನ್ನು ಭಾರತ ಸರ್ಕಾರ ನೀಡಿತು.

ಶಾಲೆಯಲ್ಲಿ ಇವಳ ಹೆಸರು ಮೊನಾಲಿಸಾದೇವಿ. ಇವಳು ಭುವನೇಶ್ವರದವಳು. ಈಕೆಯ ತಂದೆ ದಿಜರಾಜ ಮಲ್ಲಿಕ್. ಇವಳು ದಿನಾಂಕ ೨೫-೦೭-೧೯೮೦ ರಲ್ಲಿ ಜನಿಸಿದಳು. ಈ ಘಟನೆಯು ೧೯೮೭ ನೆಯ ಜನವರಿ ೧೬ ರಂದು ಜರುಗಿತು. ಆಗ ಅವಳು ಯು.ಜಿ.ಎಂ.ಇ. ಶಾಲೆಯ ಎರಡನೆಯ ತರಗತಿಯ ವಿದ್ಯಾರ್ಥಿನಿ. ಇವಳು ನೃತ್ಯ ಹಾಗೂ ಸಂಗೀತದಲ್ಲಿ ನಿಪುಣೆ. ಭಾರತ-ಜಪಾನ್ ಮೈತ್ರಿ ಸಂಘದ ವಾರ್ಷಿಕೋತ್ಸವದ ನೃತ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದಳು. ಅಮೋಘ ನೃತ್ಯ ಪ್ರದರ್ಶನ ನೀಡಿದಳು. ಅಂದಿನ ಒಡಿಶಾ ರಾಜ್ಯದ ರಾಜ್ಯಪಾಲ ವಿಶ್ವಂಬರನಾಥ ಪಾಂಡೆಯವರಿಂದ ಪುರಸ್ಕಾರ ಪಡೆದಳು. ಆಗ ಇವಳು ನಾಲ್ಕನೆಯ ತರಗತಿ ವಿದ್ಯಾರ್ಥಿನಿ.

* * * * *

## ಅಭ್ಯಾಸ

### I. ಪದಗಳ ಅರ್ಥ :

**ಅಂಚು** – ಕೊನೆ

**ಅನುಕರಣೀಯ** – ಅನುಸರಿಸುವಂಥದ್ದು

**ಒಸರು** – ಸೋರು

**ಚಿನ್ನಾಟ** – ವಿನೋದದ ಆಟ

**ತಿವಿ** – ಇರಿ; ಚುಚ್ಚು.

**ಬ್ಯಾಂಡೇಜ್**– ಗಾಯದ ಮೇಲೆ ಕಟ್ಟುವ ಪಟ್ಟಿ.

**ಮೆಲ್ಲನೆ** – ನಿಧಾನ

**ರಾಜ್ಯಪಾಲ** – ರಾಜ್ಯದ ಮುಖ್ಯಸ್ಥ

**ಸಹಾನುಭೂತಿ** – ದಯೆ; ಅನುಕಂಪ.

**ಹಂಗು** – ಆಸೆ

**ಅಂತಃಕರಣ** – ದಯೆ

**ಅಮೋಘ** – ಸಾರ್ಥಕವಾದ

**ಗುದ್ದಾಟ** – ಹೊಡೆದಾಟ

**ಜೋರು** – ವೇಗ; ರಭಸ.

**ಪುರಸ್ಕಾರ** – ಪ್ರಶಸ್ತಿ

**ಮುಗ್ಧ** – ಸರಳ ಸ್ವಭಾವ

**ಮೈತ್ರಿ** – ಸ್ನೇಹ

**ರೂಢಿ** – ಅಭ್ಯಾಸ; ಬಳಕೆ.

**ಸಾಹಸ** – ಪರಾಕ್ರಮ

**ಹೆದರು** – ಭಯಪಡು

©KTBS Not to be republished

## ಟಿಪ್ಪಣಿ.

೧. **ಒಡಿಶಾ** : ಭಾರತದ ರಾಜ್ಯಗಳಲ್ಲಿ ಒಂದು. ಇದರ ಹಿಂದಿನ ಹೆಸರು ಒರಿಸ್ಸಾ. ತುಂಬಾ ಪ್ರಾಚೀನ ಹೆಸರು ಕಳಿಂಗ.

೨. **ಡೆಟಾಲ್** : ರೋಗಾಣುಗಳನ್ನು ನಾಶ ಮಾಡುವ ದ್ರವರೂಪದ ಔಷಧಿ.

೩. **ಗೀತ ಛೋಪ್ರ ಬಹುಮಾನ** : ಭಾರತ ಸರ್ಕಾರ ನೀಡುವ ಮಕ್ಕಳ ಶೌರ್ಯ ಪ್ರಶಸ್ತಿ.

## II. ಪ್ರಶ್ನೆಗಳು.

### ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಮೊನಾಲಿಸಾ ಯಾವ ಶಾಲೆಯಲ್ಲಿ ಓದುತ್ತಿದ್ದಳು?

೨. ಮೊನಾಲಿಸಾ ಹೋರಿಯ ತಿವಿತದಿಂದ ಹೇಗೆ ಪಾರಾದಳು?

೩. ಹೋರಿಯ ತಿವಿತಕ್ಕೆ ಒಳಗಾದ ಕುರುಡು ಹುಡುಗ ಏನೆಂದು ಕೂಗಿಕೊಂಡನು?

೪. ಮುಖ್ಯೋಪಾಧ್ಯಾಯರು ಮೊನಾಲಿಸಾಳ ಸಾಹಸವನ್ನು ಮಕ್ಕಳಿಗೆ ಹೇಗೆ ಪರಿಚಯಿಸಿದರು?

೫. ಜಿಲ್ಲಾಧಿಕಾರಿಗಳು ಯಾರ ಸಾಹಸದ ಕಥೆಯನ್ನು ನೆನಪಿಸಿದರು?

೬. ಭಾರತ ಸರ್ಕಾರ ಮೊನಾಲಿಸಾಗೆ ಯಾವ ಪ್ರಶಸ್ತಿ ನೀಡಿತು?

೭. ಮೊನಾಲಿಸಾಳ ತಂದೆ ತಾಯಿಯ ಹೆಸರೇನು?

೮. ಮೊನಾಲಿಸಾ ಯಾವ ವಿಷಯಗಳಲ್ಲಿ ನಿಪುಣೆಯಾಗಿದ್ದಳು?

### ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ರಸ್ತೆ ಬದಿಯಲ್ಲಿ ಹೋರಿಗಳು ಯಾವ ರೀತಿ ಮೆರೆದಾಡುತ್ತಿದ್ದವು?

೨. ಕುರುಡು ಹುಡುಗನ ಯಾವ ಸ್ಥಿತಿಯನ್ನು ಕಂಡು ಮೊನಾಲಿಸಾ ಗಾಬರಿಯಾದಳು?

೩. ಮೊನಾಲಿಸಾ ಕುರುಡು ಹುಡುಗನನ್ನು ಹೇಗೆ ಕಾಪಾಡಿದಳು?

೪. ಕಾರಿನ ಚಾಲಕ ಕುರುಡು ಹುಡುಗನಿಗೆ ಯಾವ ರೀತಿ ಚಿಕಿತ್ಸೆ ನೀಡಿದನು?

೫. ಕಾರಿನ ಚಾಲಕ ಮೊನಾಲಿಸಾಳನ್ನು ಏನೆಂದು ಮುದ್ದಾಡಿದನು?

೬. ಮೊನಾಲಿಸಾ ಕಾರಿನ ಚಾಲಕನಿಗೆ ಯಾವ ರೀತಿ ಧನ್ಯವಾದ ಹೇಳಿದಳು?

೭. ಮೊನಾಲಿಸಾಳ ಮುಗ್ಧ ಮಾತುಗಳಿಗೆ ಕಾರಿನ ಚಾಲಕ ಏನೆಂದು ಪ್ರತಿಕ್ರಿಯಿಸಿದನು?

೮. ಜಿಲ್ಲಾಧಿಕಾರಿ ಮೊನಾಲಿಸಾಳನ್ನು ಅಭಿನಂದಿಸಿ ಹೇಳಿದ ಮಾತುಗಳಾವುವು?

©KTBS Not to be republished

ಇ) ಈ ಕೆಳಗಿನ ಪ್ರಶ್ನೆಗಳಿಗೆ ಆರು-ಏಳು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಕುರುಡು ಹುಡುಗನು ಅಪಾಯಕ್ಕೆ ಹೇಗೆ ಒಳಗಾದನು?

೨. ಕಾರಿನವನು ಮೊನಾಲಿಸಾಳನ್ನು ಕುರಿತು ಆಡಿದ ಮಾತುಗಳಾವುವು?

೩. ಮೊನಾಲಿಸಾಳ ಸಾಹಸ ಮೆಚ್ಚುವಂತಹದ್ದು ಏಕೆ?

ಈ) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು? ಬರೆಯಿರಿ.

೧. **"ನನ್ನನ್ನು ಕಾಪಾಡಿ! ಕಾಪಾಡಿ!"**

ಯಾರು ಹೇಳಿದರು? ______________________________

ಯಾರಿಗೆ ಹೇಳಿದರು? ______________________________

೨. **"ನಿನ್ನ ಹೆತ್ತ ತಂದೆ ತಾಯಿಗಳು ಧನ್ಯರು."**

ಯಾರು ಹೇಳಿದರು? ______________________________

ಯಾರಿಗೆ ಹೇಳಿದರು? ______________________________

೩. **"ಭೇಷ್ ಮಗು! ನಿನ್ನ ಧೈರ್ಯ ಮೆಚ್ಚಿದೆನು."**

ಯಾರು ಹೇಳಿದರು? ______________________________

ಯಾರಿಗೆ ಹೇಳಿದರು? ______________________________

## III. ಭಾಷಾಭ್ಯಾಸ :

ಅ) ಇಲ್ಲಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.

**ಮಾದರಿ :** ನಾವೆಲ್ಲರು = ನಾವು + ಎಲ್ಲರು

೧. ಮುಖ್ಯೋಪಾಧ್ಯಾಯರು = __________ + __________

೨. ವಾರ್ಷಿಕೋತ್ಸವ = __________ + __________

೩. ಜಿಲ್ಲಾಧಿಕಾರಿ = __________ + __________

೪. ಚೆನ್ನಾಗಿಟ್ಟಿರಲಿ = __________ + __________

©KTBS Not to be republished

**ಆ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಯ ಉತ್ತರಗಳಿಂದ ಸರಿಯಾದುದನ್ನು ಆರಿಸಿ ಬರೆಯಿರಿ.**

೧. 'ಸಹಾನುಭೂತಿ' ಪದದ ಅರ್ಥ ______

ಅ) ಅನುಕಂಪ ಆ) ಪ್ರೀತಿ ಇ) ಸ್ನೇಹ ಈ) ಸಹಕಾರ

೨. ರವಿಯ ಗಾಯಕ್ಕೆ **ಬ್ಯಾಂಡೇಜ್** ಕಟ್ಟಲಾಯಿತು. ಗೆರೆ ಎಳೆದ ಪದವು ______

ಅ) ಅನ್ಯದೇಶೀಯ ಆ) ನುಡಿಗಟ್ಟು

ಇ) ದೇಶೀಯ ಈ) ಜೋಡುನುಡಿ

೩. 'ಮೆಲ್ಲನೆ' ಪದದ ವಿರುದ್ಧ ಪದ ______

ಅ) ನಿಧಾನ ಆ) ಬೇಗನೆ ಇ) ಸಾವಕಾಶ ಈ) ಮೆತ್ತಗೆ

೪. 'ಅಂಚು' ಪದದ ಸಮಾನಾರ್ಥಕ ಪದ ______

ಅ) ಕೊನೆ ಆ) ಮಧ್ಯೆ ಇ) ಮೊದಲು ಈ) ನಡುವೆ

**ಇ) ಪ್ರಸ್ತುತ ಗದ್ಯಪಾಠದಲ್ಲಿ ಬಂದಿರುವ ಮಾನವೀಯತೆಗೆ ಸಂಬಂಧಿಸಿದ ಪದಗಳನ್ನು ಪಟ್ಟಿಮಾಡಿರಿ.**

ಪ್ರೀತಿ, ಅಂತಃಕರಣ ______ ______ ______ ______

______ ______ ______ ______ ______

**ಈ) ಇಲ್ಲಿ ನೀಡಿರುವ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

೧. ದಷ್ಟಪುಷ್ಟ :______

೨. ಸಹಾಯ :______

೩. ಬೆರಗಾಗು :______

೪. ಸಾಹಸ :______

೫. ಸನ್ಮಾನ :______

©KTBS Not to be republished

ಉ) ಇಲ್ಲಿರುವ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.

೧. ಆಪತ್ತಿಗಾದವನೇ ನೆಂಟ.

೨. ದಯವೇ ಧರ್ಮದ ಮೂಲ.

## IV. ಚಟುವಟಿಕೆಗಳು :

೧. ಈ ಪಾಠವನ್ನು ನಾಟಕ ಮಾಡಿ ಅಭಿನಯಿಸಿರಿ.

೨. ಶೌರ್ಯ ಪ್ರಶಸ್ತಿ ಪಡೆದ ನಾಲ್ಕು ಮಕ್ಕಳ ಹೆಸರು ಬರೆದು, ಅವರು ಮಾಡಿದ ಸಾಹಸವನ್ನು ಸಂಗ್ರಹಿಸಿ ಬರೆಯಿರಿ.

| ಕ್ರ ಸಂ | ಹೆಸರು | ರಾಜ್ಯ | ಮಾಡಿದ ಸಾಹಸ |
|---|---|---|---|
| ೧ | | | |
| ೨ | | | |
| ೩ | | | |
| ೪ | | | |

©KTBS Not to be republished

## V. ಸೈದ್ಧಾಂತಿಕ ವ್ಯಾಕರಣ :

ಅ) ಇಲ್ಲಿ ನೀಡಿರುವ ಪದಗಳನ್ನು ಗಮನಿಸಿ ಓದಿರಿ.

| | | | | | | | | | |
|---|---|---|---|---|---|---|---|---|---|
| ಕೈ | + | ಆಡಿಸು | = | ಕೈಯಾಡಿಸು | ಹೊಲ | + | ಅನ್ನು | = | ಹೊಲವನ್ನು |
| ಧ್ವನಿ | + | ಅತ್ತ | = | ಧ್ವನಿಯತ್ತ | ಕುಲ | + | ಅನ್ನು | = | ಕುಲವನ್ನು |
| ಕೈ | + | ಎತ್ತು | = | ಕೈಯೆತ್ತು | ಮನ | + | ಅನ್ನು | = | ಮನವನ್ನು |
| ಗಿರಿ | + | ಅನ್ನು | = | ಗಿರಿಯನ್ನು | ಮಧು | + | ಅನ್ನು | = | ಮಧುವನ್ನು |
| ಮೈ | + | ಅನ್ನು | = | ಮೈಯನ್ನು | ಹೂ | + | ಇಂದ | = | ಹೂವಿಂದ |

ಇಲ್ಲಿ ಸಂಧಿಯಾಗುವಾಗ ಯ ಮತ್ತು ವ ಅಕ್ಷರ ಬಂದಿದೆ ಎಂಬುದನ್ನು ಗಮನಿಸಿರಿ. ಇದನ್ನು **ಆಗಮ ಸಂಧಿ** ಎನ್ನುತ್ತಾರೆ.

### ಆ) ಲೇಖನ ಚಿಹ್ನೆಗಳು :

. ಪೂರ್ಣವಿರಾಮ ಚಿಹ್ನೆ

, ಅರ್ಧವಿರಾಮ ಚಿಹ್ನೆ

; ಅಲ್ಪವಿರಾಮ ಚಿಹ್ನೆ

? ಪ್ರಶ್ನಾರ್ಥಕ ಚಿಹ್ನೆ

! ಭಾವಸೂಚಕ ಚಿಹ್ನೆ

“ ” ಉದ್ಧರಣ ಚಿಹ್ನೆ

ವಾಕ್ಯಗಳನ್ನು ಅರ್ಥವಾಗುವಂತೆ ಓದಬೇಕಾದರೆ, ಬರೆಯಬೇಕಾದರೆ ಲೇಖನ ಚಿಹ್ನೆಗಳನ್ನು ಬಳಸಬೇಕು.

**ಉದಾ :**

೧) ಮೊನಾಲಿಸಾ ಮನೆಗೆ ಹೊರಟಳು.

೨) ರಸ್ತೆ ಬದಿಯಲ್ಲಿ, ಎರಡು ದಷ್ಟಪುಷ್ಟ ಹೋರಿಗಳು ಹುಲ್ಲು ಮೇಯುತ್ತಿದ್ದವು.

೩) ಅವು ಮಗುವನ್ನು ತಿವಿಯಲು; ಕೊಲ್ಲಲು ಓಡೋಡಿ ಬಂದವು.

೪) ಏನಿದು? ಎಂದು ಕಣ್ಣರಳಿಸಿ ನೋಡಿದಳು.

೫) ಅಯ್ಯೋ! ಮಗುವನ್ನು ದನಗಳು ಕೊಲ್ಲುತ್ತಿವೆ.

೬) ಜಿಲ್ಲಾಧಿಕಾರಿಗಳು “ಇನ್ನೊಬ್ಬರಿಗೆ ಸಹಾಯ ಮಾಡಬೇಕು” ಎಂದರು,


## ಪಠ್ಯ ಪೋಷಕ ಅಧ್ಯಯನ

## ಮಾವಿನ ಮರವೆ

ಮಾವಿನ ಮರವೆ ಮಾವಿನ ಮರವೆ
ಮಣ್ಣಲಿ ಬೆಳೆದು ಮಾಡುವೆ ಏನು?
ಮಗುವೆ ಕೇಳು ಹೇಳುವೆ ನಾನು
ಬೆಳೆಯುತ ನಾನು ನೆರಳನು ಕೊಡುವೆನು!

©KTBS Not to be republished

ಮಾವಿನ ಮರವೆ ಮಾವಿನ ಮರವೆ
ನೆರಳನು ನೀನು ಕೊಡುವುದು ಏಕೆ?
ಬಿಸಿಲಿನ ಝಳಕೆ ಜನ-ದನ ದಣಿವರು
ನೆರಳಲಿ ಕುಳಿತು ವಿರಾಮ ಪಡೆವರು!



ಮಾವಿನ ಮರವೆ ಮಾವಿನ ಮರವೆ
ಹಕ್ಕಿಗಳೇಕೆ ನಿನ್ನ ಬಳಿ ಬರುವವು?
ಹಕ್ಕಿ-ಪಕ್ಷಿಗಳು ಗೂಡನು ಕಟ್ಟುವವು
ತತ್ತಿಯ ಇಟ್ಟು ಕಾವನು ಕೊಡುವವು!

ಮಾವಿನ ಮರವೆ ಮಾವಿನ ಮರವೆ
ಕಾಯಿ-ಹಣ್ಣು ಏಕೆ ಬಿಡುವೆ?
ಉಪ್ಪಿನಕಾಯಿಗೆ ನಾನು ಬೇಕೇ ಬೇಕು
ಊಟದ ಜೊತೆಗೆ ಹೋಳೊಂದು ಸಾಕು!

ಮಾವಿನ ಮರವೆ ಮಾವಿನ ಮರವೆ
ಕಾಯಿ-ಹಣ್ಣಿನೊಳಗೆ ಓಟೆಯು ಏಕೆ?
ಮಾವಿನ ಓಟೆ ನಿಮಗಾಡಲು ಆಟ
ಮಾವಿನ ಮರಕೆ ಮತ್ತದು ಬೀಜ!

ಮಾವಿನ ಮರವೆ ಮಾವಿನ ಮರವೆ
ನಿನ್ನ ಬದುಕಿನ ಪರಿ ಬಲು ಉಪಕಾರಿಯು!
ತಿಳಿಯಿತೇ ಮಗುವೆ ನನ್ನಯ ಕಥೆಯು
ಬದುಕಿನ ನೀತಿಯು ಹೀಗೆಯೇ ಇರಲಿ

**– ಚಂದ್ರಕಾಂತ ಕರದಳ್ಳಿ**

**ಮಕ್ಕಳೇ ಈ ರೀತಿ ಆಟವಾಡಿರಿ :**

೧. ಕೆಲವರು ಮಾವಿನ ಮರಕ್ಕೆ ಪ್ರಶ್ನೆ ಕೇಳಿರಿ.
೨. ಕೆಲವರು ಮಾವಿನ ಮರವಾಗಿ ಉತ್ತರಿಸಿ.
೩. ಕೆಲವರು ನಿಮ್ಮ ಗೆಳೆಯರು ಹೇಳಿದ ಉತ್ತರವನ್ನು ಬೋರ್ಡಿನ ಮೇಲೆ ಬರೆಯಿರಿ.

* * * * *

©KTBS Not to be republished

## ಪಾಠ – ೧೨

# ಸುಂಟರಗಾಳಿ

– ಕಯ್ಯಾರ ಕಿಞ್ಞಣ್ಣರೈ

**ಪಾಠ ಪ್ರವೇಶ :** ನಮ್ಮ ಸುತ್ತಮುತ್ತ ಗಾಳಿ ಇದೆ. ಬೆಳಕು ನೀಡುವ ಸೂರ್ಯನಿದ್ದಾನೆ. ಗಿಡಮರಗಳಿವೆ. ಕೆರೆ, ಹಳ್ಳ, ಕೊಳ್ಳ, ನದಿ, ಬೆಟ್ಟಗಳಿವೆ. ಇದುವೆ ಪ್ರಕೃತಿ ಅಥವಾ ನಿಸರ್ಗ. ಈ ಪ್ರಕೃತಿಯಲ್ಲಿ ಗಾಳಿಯ ಪಾತ್ರ ಬಹಳ ಮಹತ್ವದ್ದು. ಜೀವಸಂಕುಲಕ್ಕೆ ಉಸಿರಾಡಲು ಗಾಳಿ ಬೇಕು. ಈ ಗಾಳಿ ಹಿತವನ್ನು, ಸುಖವನ್ನು ತರುವುದಷ್ಟೇ ಅಲ್ಲ, ಭಯ, ಆತಂಕ ಹಾಗೂ ನಷ್ಟವನ್ನೂ ತರುವುದುಂಟು. ಇಲ್ಲಿ ಕವಿ ಸುಂಟರಗಾಳಿ ಬೀಸುವ ರೀತಿಯನ್ನು ಹಾಗೂ ಅದು ಉಂಟು ಮಾಡಿದ ಪರಿಣಾಮಗಳನ್ನು ಭಾವಪೂರ್ಣವಾಗಿ ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ. ಈ ಪದ್ಯವನ್ನು ದೊಡ್ಡ ಧ್ವನಿಯಿಂದ ಓದಿ ಆನಂದಿಸಿ.

© KTBS Not to be republished

ಏನಿದು ಧೂಳಿ? ಓಹೋ ಗಾಳಿ!
ತಿರ್ರನೆ ಬಂತೈ ಸುಂಟರಗಾಳಿ ॥ಪ॥

ತೆಂಗಿನ ಮರಗಳು, ಕಂಗಿನ ಮರಗಳು
ಬಾಳೆಯು ತಾಳೆಯು ಮಾವು ಹಲಸುಗಳು
ಎಲ್ಲಾ ತೂಗಿವೆ, ತಲೆಗಳು ಬಾಗಿವೆ!



ಏನಿದು ಧೂಳಿ? ಓಹೋ ಗಾಳಿ
ಸುಳಿಯುತ ಬಂತೈ ಸುಂಟರಗಾಳಿ।
ಕಣ್ಣು ಮುಚ್ಚುತ ಬಾಲವನೆತ್ತಿ!
ದನ ಓಡುತ್ತಿದೆ ಎತ್ತಲೊ ಸುತ್ತಿ!
'ಅಂಬಾ' ಎನುತ ಕರು ಬೆಂಬತ್ತಿ
ಏನಿದು ಧೂಳಿ?


ಹೋಯಿತು ಹೆಂಚು! ಹಾರಿತು ಹುಲ್ಲು!
ಬೊಬ್ಬೆಯ ಬೊಬ್ಬೆಯ ಭಯವೆಲ್ಲೆಲ್ಲು
ಕೇಳುವರಾರೀ ಮಂದಿಯ ಗುಲ್ಲು
ಏನಿದು ಧೂಳಿ?

ಏನಿದು ಕೋಪ? ಯಾರಲಿ ಶಾಪ?
ಓಹೋ, ಹೆಚ್ಚಿತೆ ಭೂಮಿಯ ತಾಪ?
ತಡೆಯುವರುಂಟೆ? ಅಯ್ಯೋ ಪಾಪ!
ಏನಿದು ಧೂಳಿ?

ಬಾನಿನ ಬಯಲಿಂದಿಳಿಯುತ ಬಂತೋ?
ಪಾತಾಳದ ಹೊಟ್ಟೆಯೊಳಗಡಗಿತ್ತೋ
ಕಡಲು ಕಡೆಯುತಲಿದೆ ಹುಟ್ಟಿತೋ?
ಏನಿದು ಧೂಳಿ? ಓಹೋ ಗಾಳಿ!
ಸುಳಿಯುತ ಬಂತೈ ಸುಂಟರಗಾಳಿ!

* * * * *

## ಕೃತಿಕಾರರ ಪರಿಚಯ :



**ಕಯ್ಯಾರ ಕಿಞ್ಞಣ್ಣರೈ** ಇವರು ಕಾಸರಗೋಡಿನ ಕಯ್ಯಾರದವರು. ಇವರು ೧೯೧೫ ರಲ್ಲಿ ಜನಿಸಿದರು. ಕವಿ, ಲೇಖಕ ಹಾಗೂ ಪತ್ರಕರ್ತರಾಗಿ ಕೆಲಸ ಮಾಡಿದ್ದಾರೆ. ವಿದ್ಯಾರ್ಥಿಯಾಗಿದ್ದಾಗಲೆ ೧೨ ನೆಯ ವಯಸ್ಸಿನಲ್ಲಿ **'ಸುಶೀಲ'** ಎನ್ನುವ ಕೃತಿಯನ್ನು ರಚಿಸಿದ್ದರು. ಮಹಾತ್ಮ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಕನ್ನಡದ ದೊಡ್ಡ ಅಭಿಮಾನಿ. ಇವರು ಅನೇಕ ಕವಿತೆ, ಕಾದಂಬರಿ, ಪ್ರಬಂಧಗಳನ್ನು ಬರೆದಿದ್ದಾರೆ. **'ಏರುತಿಹುದು ಹಾರುತಿಹುದು ನೋಡು ನಮ್ಮ ಬಾವುಟ'** ಇವರ ಪ್ರಸಿದ್ಧ ಕವನ. ಇವರು ೨೦೧೫ ರಲ್ಲಿ ಮರಣ ಹೊಂದಿದರು.

©KTBS Not to be republished

## ಅಭ್ಯಾಸ

### I. ಪದಗಳ ಅರ್ಥ :

**ಕಂಗು** – ಅಡಿಕೆ

**ಕಡಲು** – ಸಮುದ್ರ

**ಗುಲ್ಲು** – ಗದ್ದಲ

**ತಿರ‍್ರನೆ**– ತಿರುತಿರುಗಿ ಸುರುಳಿಯಂತೆ ಸುತ್ತುವುದು.

**ತಾಪ** – ಉಷ್ಣತೆ

**ಧೂಳಿ** – ಧೂಳು

**ಪಾತಾಳ** – ಭೂಮಿಯ ತಳದಲ್ಲಿರುವ ಲೋಕ

**ಬಂತೈ** – ಬಂದಿತು

**ಬಾನು** – ಆಕಾಶ

**ಬೆಂಬತ್ತು** – ಹಿಂಬಾಲಿಸಿ ಹೋಗು

**ಬೊಬ್ಬೆ** – ಜೋರಾಗಿ ಕೂಗು; ಚೀರು.

**ಶಾಪ** – ಕೇಡು ಬಯಸಿ ಹೇಳುವ ಮಾತು.

**ಸುಂಟರಗಾಳಿ** – ಸುತ್ತುತ್ತ ರಭಸವಾಗಿ ಬೀಸುವ ಗಾಳಿ.

### II. ಪ್ರಶ್ನೆಗಳು :

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಸುಂಟರಗಾಳಿಯನ್ನು ನೋಡಿದ ಕವಿ ಏನೆಂದು ಅಚ್ಚರಿ ವ್ಯಕ್ತಪಡಿಸಿದರು?

೨. ಸುಂಟರಗಾಳಿಗೆ ಕರು ಯಾವ ರೀತಿ ಬೆಚ್ಚಿತು?

೩. ಸುಂಟರಗಾಳಿಗೆ ದನಗಳು ಯಾವ ರೀತಿ ಓಡಿದವು?

೪. ಸುಂಟರಗಾಳಿಗೆ ಜನರು ಏಕೆ ಬೊಬ್ಬೆ ಇಟ್ಟರು?

೫. ಸುಂಟರಗಾಳಿಯ ಕೋಪ ಏಕೆ ಇರಬಹುದೆಂದು ಕವಿ ಭಾವಿಸುತ್ತಾರೆ?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸುಂಟರಗಾಳಿಯಿಂದ ಉಂಟಾದ ಪರಿಣಾಮಗಳೇನು?

೨. ಸುಂಟರಗಾಳಿಯ ಬಗ್ಗೆ ಕವಿಯ ಮನದಲ್ಲಿ ಯಾವ ಯಾವ ಪ್ರಶ್ನೆಗಳು ಮೂಡಿದವು?

೩. ಸುಂಟರಗಾಳಿಗೆ ಯಾವ ಯಾವ ಮರಗಳು ತೂಗಿ ಬಾಗಿದವು?

©KTBS Not to be republished

## III. ಭಾಷಾಭ್ಯಾಸ :

**ಅ) ಇಲ್ಲಿರುವ ಪದಗಳನ್ನು ಬಳಸಿ, ನಿಮ್ಮ ಸ್ವಂತ ವಾಕ್ಯದಲ್ಲಿ ಬರೆಯಿರಿ.**

೧. ತೂಗು : ______________________

೨. ಬೆಂಬತ್ತು : ______________________

೩. ಶಾಪ : ______________________

೪. ಪಾತಾಳ : ______________________

೫. ಕಡಲು : ______________________

**ಆ) 'ಗಾಳಿ' ಪದದಿಂದ ಅಂತ್ಯಗೊಳ್ಳುವ ಪದಗಳನ್ನು ಪಟ್ಟಿಮಾಡಿರಿ.**

**ಉದಾ:** ಸುಂಟರಗಾಳಿ, ಚಳಿಗಾಳಿ.

__________ __________ __________

__________ __________ __________

**ಇ) ಇಲ್ಲಿರುವ ಪದಗಳನ್ನು ಧ್ವನಿಪೂರ್ಣವಾಗಿ ಉಚ್ಚರಿಸಿರಿ.**

ಓಹೋ ಗಾಳಿ!
ಏನಿದು ಧೂಳಿ?
ಹೋಯಿತು ಹೆಂಚು!
ಹಾರಿತು ಹುಲ್ಲು!
ಏನಿದು ಕೋಪ?

**ಈ) ಕೆಳಗೆ ನೀಡಿರುವ ಪದ್ಯಕ್ಕೆ ಲೇಖನ ಚಿಹ್ನೆ ಹಾಕಿ ಬರೆಯಿರಿ.**


ಏನಿದು ಧೂಳಿ ಓಹೋ ಗಾಳಿ
ಸುಳಿಯುತ ಬಂತೈ ಸುಂಟರಗಾಳಿ
ಕಣ್ಣು ಮುಚ್ಚುತ ಬಾಲವನೆತ್ತಿ
ದನ ಓಡುತ್ತಿದೆ ಎತ್ತಲೊ ಸುತ್ತಿ
ಅಂಬಾ ಎನುತ ಕರು ಬೆಂಬತ್ತಿ
ಏನಿದು ಧೂಳಿ

©KTBS Not to be republished

## IV. ಚಟುವಟಿಕೆಗಳು :

**ಇಲ್ಲಿರುವ ಚಿತ್ರಗಳನ್ನು ಗಮನಿಸಿ. ನಿಮ್ಮ ಅನಿಸಿಕೆಗಳನ್ನು ಹೇಳಿರಿ.**

ಕಲ್ಪನಾ, ಶಹಿನಾ, ಲೂಸಿ, ಜಹೀರ, ಶಂಕರ, ಪೀಟರ್ ಎಲ್ಲರೂ ಶಾಲಾ ಬಯಲಿನಲ್ಲಿ ಸೇರಿದ್ದಾರೆ. ಮಳೆ ಮೋಡ, ಧೋ ಧೋ ಮಳೆ! ಹರಿವ ನೀರು ಕಲ್ಪಿಸಿಕೊಂಡು, ಮಳೆ ಬಗ್ಗೆ ಎಲ್ಲರೂ ಒಂದೊಂದು ವಾಕ್ಯ ಬರೆಯಿರಿ.





ಕಲ್ಪನಾ : ಅಬ್ಬಾ ! ಏನು ಸೆಕೆ! ಇವತ್ತು ಮಳೆ ಬಂದರೂ ಬರಬಹುದು.

ಪೀಟರ್ : ಆಕಾಶದ ತುಂಬ ಮಳೆ ಮೋಡ. ನೋಡ್ರೋ! ಅಲ್ಲಿ ಅದೆಷ್ಟು ಕರಿಮೋಡ ಆಕಾಶ ತುಂಬಿದೆ.

ಶಹಿನಾ : ________________

ಜಹೀರ : ________________

ಶಂಕರ : ________________

ಲೂಸಿ : ________________

ಶಂಕರ : ________________

ಶಹಿನಾ : ________________

(ಖಾಲಿಬಿಟ್ಟ ಜಾಗದಲ್ಲಿ ಮಕ್ಕಳು ಒಂದೊಂದು ವಾಕ್ಯ ಬರೆಯಲಿ.)

* * * * *


© KTBS Not to be republished

## ಪಾಠ – ೧೩

# ಮಲ್ಲಕಂಬ

**ಪಾಠ ಪ್ರವೇಶ :** ಆಟವೆಂದರೆ ಮಕ್ಕಳಿಂದ ಮುದುಕರವರೆಗೂ ಬಹಳ ಇಷ್ಟ. ನಮ್ಮ ದೇಶದಲ್ಲಿ ಅನೇಕ ಆಟಗಳಿವೆ. ಕೆಲವು ಆಟಗಳು ಬಹಳ ಪ್ರಸಿದ್ಧಿ ಪಡೆದು ಜಗತ್ತಿನ ಎಲ್ಲ ಕಡೆಗೂ ಹಬ್ಬಿವೆ. ಕೆಲವು ದೈಹಿಕ ಕಸರಿತ್ತನ ಆಟಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಜನಪ್ರಿಯವಾಗಿವೆ. ಅವುಗಳಲ್ಲಿ ಕುಸ್ತಿ ಪಂದ್ಯವೂ ಒಂದು. ಕುಸ್ತಿಗೆ ಪೂರಕವಾದ ಪಂದ್ಯವೇ ಮಲ್ಲಕಂಬ ಅಥವಾ ಮಲ್ಲಗಂಬ. ಕುಸ್ತಿ ಆಡುವವನು ತಾನು ಹಾಕುವ ಪಟ್ಟುಗಳನ್ನು ಮಲ್ಲಗಂಬಕ್ಕೆ ಹಾಕಿ ಕಲಿಯುತ್ತಾನೆ. ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಮಲ್ಲಕಂಬ ಬಹಳ ಪ್ರಸಿದ್ಧವಾಗಿದೆ. ಬೆಳಗಾವಿ, ಬಳ್ಳಾರಿ, ಕೊಪ್ಪಳ, ವಿಜಾಪುರ, ಮೈಸೂರು ಜಿಲ್ಲೆಗಳ ಗರಡಿಮನೆಗಳಲ್ಲಿ ಮಲ್ಲಗಂಬದ ಆಟಗಳು ಏರ್ಪಟ್ಟಿರುತ್ತವೆ. ಇಲ್ಲಿ ಮಲ್ಲಗಂಬದ ವಿಶೇಷತೆಗಳನ್ನು ಪರಿಚಯಿಸಲಾಗಿದೆ.

(ರಾಜ್ಯೋತ್ಸವ ಸಂದರ್ಭದ ಮೆರವಣಿಗೆಯಲ್ಲಿ ಮಲ್ಲಕಂಬದ ಮೇಲೆ ಕಸರತ್ತು ನಡೆಯುತ್ತಾ ಇದೆ. ಸಾವಿರಾರು ಜನ ನೋಡುತ್ತಿದ್ದಾರೆ. ಒಂದು ಎತ್ತಿನಗಾಡಿ. ಅದರ ಮೇಲೆ ಮಣೆಮೇಲಿಟ್ಟ ಮಲ್ಲಕಂಬ. ಅದರ ಮೇಲೆ ಜಟ್ಟಿಯಾಳುಗಳು. ಹುಡುಗರು ವಿವಿಧ ಕಸರತ್ತು, ಸಾಹಸ ಮೆರೆಸುತ್ತಿದ್ದಾರೆ. ಸಾವಿರಾರು ಜನ ಅಚ್ಚರಿಯಿಂದ ನೋಡುತ್ತಿದ್ದಾರೆ.)



ಇಬ್ರಾಹಿಂ : ದೇಖೋ ಭೈಯ್ಯಾ ಅವಾ ಹ್ಯಾಂಗ ಹತ್ಯಾನ ನೋಡು. ಅಬ್ಬಬ್ಬ ಕಂಬದ ತುದಿ ಮುಟ್ಟತಾನಂದ್ರ ಪಸಕ್ಕನೆ ಜಾರಿಬಿಟ್ಟ, ಬಿದ್ದ.. ಬಿದ್ದ.. ನೋಡು.

ಪೀಟರ್ : ಏ.. ಇಬ್ರಾಹಿಂ ಆ ತೇಗಿನ ಕಂಬ ಏಕದಂ ಸಾಪ ಐತಿ. ಅದರ ಮ್ಯಾಲ ಔಡಲೆಣ್ಣಿ ತೆಳ್ಳಗ ಸವರ್‍ಯಾರ. ಕೈಯಿಟ್ರ ಜಾರತೈತಿ. ಅದಕ ಹಂಗ ಜಾರತಾರ. ಹತ್ತಾರ... ಬೀಳ್ತಾರ. ಅಲ್ನೋಡು, ಮತ್ತೆ ಹತ್ತಿದ, ಭಾರಿ ಆಟಪಾ ಇದು. ಅಲಲಾ ಏನ ಕಸರತ್ತಿದು. ಈ ಆಟಕ್ಕ ಏನಂತಾರ ಶಂಕರ.

ಶಂಕರ : ಇದಕ್ಕ ಮಲ್ಲಕಂಬದ ಆಟ ಅಂತಾರ. ಇದು ಒಂದು ಕಸರತ್ತು. ಕುಸ್ತಿ ಆಡೋರು ಇದರ ಮ್ಯಾಲೆ ತಯಾರಿ ಮಾಡ್ತಾರ.

ಇಬ್ರಾಹಿಂ : ಹಂಗಂದರೇನು? ಈ ಮಲ್ಲಕಂಬದ ಮೇಲಿನ ಕಸರತ್ತು ಎದಕ ಉಪಯೋಗ?

©KTBS Not to be republished

ಶಂಕರ : ಕುಸ್ತಿ ಆಡೋರ್‍ಗೆ, ಕುಸ್ತಿ ಆಡುವಾಗ ಬೇಕಾದ ಪಟ್ಟುಗಳನ್ನು ಇಂತಹ ಕಂಬದ ಮ್ಯಾಲ ಅಭ್ಯಾಸ ಮಾಡ್ತಾರ. ಎದುರಾಳಿನ ಸೋಲಸಾಕ ತಂತ್ರ ಇಲ್ಲೇ ಕಲಿತಾರ. ಕುಸ್ತಿ ಆಡೋದು ನೀನು.... ನೋಡಿರಬೇಕಲ್ಲ? ಪೀಟರ. ಮೈಸೂರು ದಸರಾದಾಗ, ಬೆಳಗಾವ್ಯಾಗ, ಕೊಪ್ಪಳದಾಗ, ಹೊಸಪೇಟ್ಯಾಗ, ಧಾರವಾಡದಾಗ, ಗದಗಿನ್ಯಾಗ ಭಾಳ ಆಡ್ತಾರ.

ಪೀಟರ್ : ಇದು ಭಾಳ ಹಿಂದಿನ ಆಟ ಕಾಣ್ತದ. ಗೊತ್ತಿದ್ರ ಹೇಳಲ್ಲ.

ಶಂಕರ : ಹಿಂದಕ ಭೀಮ, ಜರಾಸಂಧ, ಹನುಮಂತ, ವಾಲಿ, ಸುಗ್ರೀವರು ಆಡ್ತಿದ್ರಂತ. ಇದು ಪುರಾಣ ಕಾಲದಿಂದ ನಡೆದು ಬಂದೈತಿ.

ಇಬ್ರಾಹಿಂ : ಇತಿಹಾಸ ಕಾಲದ್ದು ಹೇಳಲ್ಲ?

ಶಂಕರ : ಹೈದರಾಬಾದ್ ನಿಜಾಮನ ಆಸ್ಥಾನದಾಗ ಅಲಿ ಮತ್ತು ಗುಲ್ ಎಂಬ ಕುಸ್ತಿಪಟುಗಳು ಇದ್ರಂತ. ಅವರು ಪುಣೆಯ ಬಾಳಾಜಿ ಪೇಶ್ವೆ ದರ್ಬಾರಿಗೆ ಬಂದರಂತ. "ನಿಮ್ಮ ರಾಜ್ಯದ ಮಲ್ಲರು ನಮ್ಮನ್ನ ಕುಸ್ತಿಯಲ್ಲಿ ಸೋಲಿಸಬೇಕು. ಇಲ್ಲದೇ ಹೋದರೆ ನಮ್ಮನ್ನು ಕುಸ್ತಿಯಲ್ಲಿ ಸೋಲಿಸುವಂತಹ ಮಲ್ಲರು ಇಲ್ಲವೆಂದು ಪ್ರಶಸ್ತಿ ಪತ್ರ ನೀಡಬೇಕು" ಎಂದು ಸವಾಲು ಹಾಕಿದರಂತೆ.

ಪೀಟರ್ : ಭಾಳ ಛಂದೈತಿ. ಮುಂದೇನಾತು?

ಶಂಕರ : ಕೇಳ್ರಿ. ಆಗ ಅಲ್ಲಿದ್ದ ಹದಿನೆಂಟು ವರುಷದ ಹುಡುಗ ಬಾಳಂಭಟ್ಟ ಎದ್ದು ನಿಂತು, ಅವರ ಸವಾಲು ಒಪ್ಪಿಕೊಂಡನಂತ. ಕುಸ್ತಿ ತಯಾರಿಗಾಗಿ ಒಂದು ತಿಂಗಳು ಅವಧಿ ಪಡದ್ನಂತ.

ಪೀಟರ್ : ಹಂಗಾ..

ಶಂಕರ : ಆ ಹುಡುಗ ನಾಸಿಕ ಜಿಲ್ಲೆಯ ದಟ್ಟ ಅರಣ್ಯದಲ್ಲಿದ್ದ ಸಪ್ತಗಿರಿ ದೇವಿಯ ಗುಡಿಗೆ ಹೋದ. ಗುಡಿಯ ಮುಂದಿನ ದೀಪದ ಕಂಬದ ಮೇಲೆ ಕೋತಿ ಕಸರತ್ತು ಮಾಡುತ್ತಿತ್ತು ಅದನ್ನು ನೋಡಿದ. ಅದೇರೀತಿ ಶಕ್ತಿ ನೀಡು ಎಂದು ದೇವಿಗೆ ಪ್ರಾರ್ಥಿಸಿದ. ದಿನವೂ ಮಂಗನಂತೆ ಆ ದೀಪದ ಕಂಬದ ಮೇಲೆ ಕಸರತ್ತು ಮಾಡುತ್ತಿದ್ದನು. ಕುಸ್ತಿ ಪಟ್ಟುಗಳನ್ನು ಕಲಿಯುತ್ತಿದ್ದನು. ಅದರ ಜೊತೆಗೆ ಯೋಗವನ್ನೂ ಮಾಡಿದ. ಈ ಅಭ್ಯಾಸವು ಫಲ ನೀಡಿತು. ದೇವರ ಆಶೀರ್ವಾದ ಪಡೆದು ಆಸ್ಥಾನಕ್ಕೆ ಹೋದನು. ನಿಜಾಮ ರಾಜ್ಯದ ಜಟ್ಟಿಗಳನ್ನು ಸೋಲಿಸಿದ.

©KTBS Not to be republished

ಇಬ್ರಾಹಿಂ : ಈ ಕಥೆ ಭಯಂಕರ ಛಂದೈತಿ ಬಿಡು.

ಪೀಟರ್ : ಈ ಮಲ್ಲಕಂಬ ವ್ಯಾಯಾಮವನ್ನು ನಮ್ಮ ಶಾಲೆಯಲ್ಲಿ ಯಾಕ ಕಲಿಸಬಾರದು?

ಇಬ್ರಾಹಿಂ : ಹೆಡ್ಮಾಸ್ತರರಿಗೆ ಹೇಳೋಣ. ನಾವು ಕಲಿಯೋಣ ಬಾ.

* * * * *

## ಅಭ್ಯಾಸ

### I. ಪದಗಳ ಅರ್ಥ :

**ಅಚ್ಚರಿ** – ಆಶ್ಚರ್ಯ; ಬೆರಗು.
**ಆಸ್ಥಾನ** – ರಾಜಸಭೆ; ದರ್ಬಾರು.
**ಛಂದೈತಿ** – ಬಹಳಷ್ಟು ಚೆಂದವಿದೆ
**ಪ್ರಾರ್ಥಿಸು** – ಬೇಡು
**ದೇಖೋ** – ನೋಡು
**ಹಂಗಾ** – ಹಾಗಾಯ್ತೇನು?
**ಅಬ್ಬಬ್ಬ** – ಅಚ್ಚರಿ ಪದ
**ಔಡಲೆಣ್ಣೆ** – ಹರಳೆಣ್ಣೆ
**ಜಟ್ಟಿ** – ಕುಸ್ತಿಪಟು
**ಪಟ್ಟು** – ಕುಸ್ತಿಯಲ್ಲಿ ಉಪಯೋಗಿಸುವ ತಂತ್ರ.
**ಭೈಯ್ಯಾ** – ಅಣ್ಣ
**ಹೆಡ್ಮಾಸ್ತರ** – ಮುಖ್ಯೋಪಾಧ್ಯಾಯ

### ಟಿಪ್ಪಣಿಗಳು :

**ಮಲ್ಲಕಂಬ** – ಕೆಲವು ಕಡೆ ಇದನ್ನು ಮಲ್ಲಗಂಬ ಎಂದು ಹೇಳುತ್ತಾರೆ. ಈ ಕಂಬವನ್ನು ತೇಗದ ಕಟ್ಟಿಗೆಯಿಂದ ಮಾಡುತ್ತಾರೆ. ಇದರ ಎತ್ತರ ಅಜಮಾಸು ೩ ೧/೨ ಮೀಟರ್ ಅಥವಾ ೧೦-೧೧ ಮೊಳ. ತಳಭಾಗದಲ್ಲಿ ಕಂಬದ ಸುತ್ತಳತೆ ಅಂದಾಜು ೫೦ ರಿಂದ ೬೦ ಸೆಂಟಿಮೀಟರ್, ಕಂಬ ಮೇಲೆ ಬಂದಂತೆಲ್ಲಾ ಸಣ್ಣಗಾಗುತ್ತದೆ. ಇದರ ಮೇಲ್ಮೈ ಬಹಳ ನುಣುಪು ಇರುತ್ತದೆ. ಮೇಲೆ ಔಡಲೆಣ್ಣೆ ಸವರಿರುತ್ತಾರೆ. ಮಲ್ಲಗಂಬದಲ್ಲಿ 'ಸ್ಥಿರ ಮಲ್ಲಕಂಬ', 'ಮಣಿಯ ಮೇಲಿನ ಮಲ್ಲಕಂಬ', 'ಹಗ್ಗದ ಮಲ್ಲಕಂಬ' ಹೀಗೆ ಹಲವಾರು ವಿಧಗಳು ಇರುತ್ತವೆ. ಮಲ್ಲಗಂಬ ಮಾನವ ಜನಾಂಗಕ್ಕೆ ಹನುಮಂತನ ಕೊಡುಗೆ ಎನ್ನುತ್ತಾರೆ.

**ಭೀಮ** – ಮಹಾಭಾರತದಲ್ಲಿ ಬರುವ ಪಾಂಡುರಾಜನ ಮಗ, ಧರ್ಮರಾಜನ ತಮ್ಮ.

**ಜರಾಸಂಧ** – ಮಗಧ ರಾಜ್ಯದ ರಾಜ, ಮಹಾಭಾರತ ಕಾಲದಲ್ಲಿದ್ದ ಶಕ್ತಿಮಾನ ವ್ಯಕ್ತಿ.

**ಹನುಮಂತ** – ಶಕ್ತಿಪುರುಷ, ರಾಮನ ಭಕ್ತ, ವಾಯುಪುತ್ರ.

©KTBS Not to be republished

**ವಾಲಿ ಸುಗ್ರೀವ** – ರಾಮಾಯಣ ಕಾಲದಲ್ಲಿ ಕಿಷ್ಕಿಂಧೆ ರಾಜ್ಯದಲ್ಲಿದ್ದ ಅಣ್ಣತಮ್ಮಂದಿರು, ಇವರು ಬಹಳ ಶೂರರು.

**ದಾದಾ ದೇವಧರ** – ಇವರ ಕಾಲ ೧೭೬೫ ರಿಂದ ೧೮೫೨ ರವರೆಗೆ. ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಪುಣೆಗೆ ಬಂದು ಅಲ್ಲಿ ಹಲವು ಮಲ್ಲರನ್ನು ಸೋಲಿಸಿ ರಾಜಾಶ್ರಯ ಪಡೆದಿದ್ದರು. ಇವರು ವೇದ ಹಾಗೂ ಯೋಗದಲ್ಲಿ ಪಂಡಿತರಾಗಿದ್ದರು ಹಾಗೂ ರಾಜಗುರು ಸ್ಥಾನ ಹೊಂದಿದ್ದರು. ಇವರು ಮಹಾರಾಷ್ಟ್ರದಲ್ಲಿ ಮಲ್ಲಕಂಬವನ್ನು ಪ್ರಚುರಪಡಿಸಿದರು.

## II. ಪ್ರಶ್ನೆಗಳು :

### ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ರಾಜ್ಯೋತ್ಸವದ ಮೆರವಣಿಗೆಯಲ್ಲಿ ಇಬ್ರಾಹಿಂ ಕಂಡ ಕಸರತ್ತು ಯಾವುದು?

೨. ಮಲ್ಲಕಂಬದ ಮೇಲೆ ಹತ್ತಿದವರು ಏಕೆ ಜಾರುತ್ತಿದ್ದರು?

೩. ಮಲ್ಲಕಂಬವನ್ನು ಕುಸ್ತಿ ಆಡುವವರು ಏಕೆ ಅಭ್ಯಾಸ ಮಾಡುತ್ತಾರೆ?

೪. ಪುರಾಣ ಕಾಲದಲ್ಲಿ ಮಲ್ಲಕಂಬವನ್ನು ಯಾರು ಅಭ್ಯಾಸ ಮಾಡಿದ್ದರು?

೫. ಹೈದರಾಬಾದ್ ನಿಜಾಮನ ಆಸ್ಥಾನದಲ್ಲಿದ್ದ ಕುಸ್ತಿಪಟುಗಳು ಯಾರು ಯಾರು?

೬. ಅಲಿ ಮತ್ತು ಗುಲ್ ಕುಸ್ತಿಪಟುಗಳು ಹಾಕಿದ ಸವಾಲನ್ನು ಯಾರು ಒಪ್ಪಿಕೊಂಡರು?

೭. ಬಾಳಂಭಟ್ಟನು ಕುಸ್ತಿಪಟ್ಟುಗಳನ್ನು ಕಲಿಯಲು ಎಲ್ಲಿಗೆ ಹೋದನು?

### ಆ) ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಇಬ್ರಾಹಿಂ ಮಲ್ಲಕಂಬದ ಕಸರತ್ತನ್ನು ನೋಡಿ ಯಾವ ರೀತಿ ಆಶ್ಚರ್ಯ ವ್ಯಕ್ತಪಡಿಸಿದನು?

೨. ಅಲಿ ಮತ್ತು ಗುಲ್ ಕುಸ್ತಿ ಪಟುಗಳು ಪೇಶ್ವೆಗೆ ಏನೆಂದು ಸವಾಲು ಹಾಕಿದರು?

೩. ಬಾಳಂಭಟ್ಟನು ಕುಸ್ತಿ ಪಟ್ಟುಗಳನ್ನು ಹೇಗೆ ಕಲಿತನು?

### ಇ) ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು? ತಿಳಿಸಿರಿ.

೧. 'ಕಂಬದ ತುದಿ ಮುಟ್ಟುತಾನಂದ್ರ ಪಸಕ್ಕನೆ ಜಾರಿಬಿಟ್ಟ.'

©KTBS Not to be republished

೨. ‘ಔಡಲೆಣ್ಣಿ ತೆಳ್ಳಗ ಸವರ್‍ಯಾರ ಕೈಯಿಟ್ಟರ ಜಾರತೈತಿ.’

೩. ‘ನಿಮ್ಮ ರಾಜ್ಯದ ಮಲ್ಲರು ನಮ್ಮನ್ನು ಕುಸ್ತಿಯಲ್ಲಿ ಸೋಲಿಸಬೇಕು.’

**ಈ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಯ ಉತ್ತರಗಳಿಂದ ಸರಿಯಾದುದನ್ನು ಆರಿಸಿ ಬರೆಯಿರಿ.**

೧. ಮಲ್ಲಕಂಬಕ್ಕೆ ____________ ಎಣ್ಣೆ ಸವರಿರುತ್ತಾರೆ.
ಅ) ಎಳ್ಳಿನ ಆ) ಔಡಲ ಇ) ಶೇಂಗಾ ಈ) ಬೇವಿನ

೨. ಮಲ್ಲಕಂಬವನ್ನು ____________ ಪಟ್ಟುಗಳನ್ನು ಕಲಿಯಲು ಅಭ್ಯಾಸ ಮಾಡುತ್ತಾರೆ.
ಅ) ಕುಸ್ತಿ ಆ) ಕರಾಟೆ ಇ) ಜೂಡೋ ಈ) ಕಬಡ್ಡಿ

೩. ಬಾಳಾಜಿ ಪೇಶ್ವೆಯ ಸ್ಥಳ ____________
ಅ) ಹೈದರಾಬಾದ್ ಆ) ಪುಣೆ ಇ) ಮೈಸೂರು ಈ) ಕೊಪ್ಪಳ

೪. ಬಾಳಂಭಟ್ಟ ಕುಸ್ತಿ ಪಟ್ಟುಗಳನ್ನು ____________ ನೋಡಿ ಕಲಿತುಕೊಂಡನು.
ಅ) ಅಳಿಲು ಆ) ಜೇಡ ಇ) ಕೋತಿ ಈ) ಹಕ್ಕಿ

## III. ಭಾಷಾಭ್ಯಾಸ :

**ಅ) ಈ ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ.**

೧. ಮೆರವಣಿಗೆ : ____________
೨. ಆಸ್ಥಾನ : ____________
೩. ಫಲನೀಡು : ____________
೪. ಪ್ರಶಸ್ತಿಪತ್ರ : ____________
೫. ಕಸರತ್ತು : ____________
೬. ಸವಾಲು : ____________

©KTBS Not to be republished

**ಆ) ಪ್ರಸ್ತುತ ಪಾಠದಲ್ಲಿ ಉತ್ತರ ಕರ್ನಾಟಕದ ಆಡುಮಾತುಗಳಿವೆ. ಅವುಗಳನ್ನು ಗ್ರಾಂಥಿಕ ರೂಪದಲ್ಲಿ ಬರೆದಿದೆ. ಗಮನಿಸಿರಿ.**

೧. ಹ್ಯಾಂಗ – ಹೇಗೆ
೨. ಮ್ಯಾಲ – ಮೇಲೆ
೩. ಜಾರತೈತಿ – ಜಾರುತ್ತದೆ
೪. ಅಲ್ನೋಡು – ಅಲ್ಲಿ ನೋಡು
೫. ಕಲಿತಾರ – ಕಲಿಯುತ್ತಾರೆ
೬. ಇದ್ರಂತೆ – ಇದ್ದರಂತೆ

ಇದೇ ರೀತಿಯಲ್ಲಿ ಇನ್ನು ಹಲವು ಆಡು ಮಾತಿನ ಪದಗಳು ಈ ಪಾಠದಲ್ಲಿವೆ. ನೀವು ಅವುಗಳನ್ನು ಪಟ್ಟಿಮಾಡಿ, ಅವುಗಳಿಗೆ ಗ್ರಾಂಥಿಕ ರೂಪ ಬರೆಯಿರಿ.

**ಇ) ಕೆಳಗೆ ನೀಡಿರುವ ಪದಗಳನ್ನು ಬಿಡಿಸಿ ಬರೆಯಿರಿ.**

೧. ರಾಜ್ಯೋತ್ಸವ = __________ + __________
೨. ಮಲ್ಲಗಂಬ = __________ + __________
೩. ಜಟ್ಟಿಯಾಳು = __________ + __________
೪. ಅಲ್ನೋಡು = __________ + __________

**ಈ) ಕೆಳಗಿನವುಗಳಿಗೆ ಲಘು ಟಿಪ್ಪಣಿ ಬರೆಯಿರಿ.**

೧. ಮಲ್ಲಕಂಬ
೨. ರಾಜ್ಯೋತ್ಸವ
೩. ದಸರಾ ಉತ್ಸವ

## IV. ಚಟುವಟಿಕೆಗಳು :

೧. ಕುಸ್ತಿಯ ಚಿತ್ರ, ಮಲ್ಲಕಂಬ ಏರುವ ಚಿತ್ರ ಮತ್ತು ಗರಡಿ ಮನೆಗಳ ಚಿತ್ರಗಳನ್ನು ಸಂಗ್ರಹಿಸಿರಿ.
೨. ಬೇರೆ ಬೇರೆ ಗ್ರಾಮೀಣ ಆಟಗಳ ಹೆಸರು ಬರೆಯಿರಿ.

* * * * *



©KTBS Not to be republished

## ಪಾಠ – ೧೪

# ವೀರರಾಣಿ ಕೆಳದಿ ಚೆನ್ನಮ್ಮ

**ಪಾಠ ಪ್ರವೇಶ :**

೧. ಮಕ್ಕಳೆ, ನಮ್ಮ ದೇಶದಲ್ಲಿ ಕಿತ್ತೂರು ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಮೊದಲಾದವರನ್ನು ನಾವು ಆಗಾಗ ನೆನೆಯುತ್ತೇವೆ. ಏಕೆ? ಚರ್ಚಿಸಿರಿ

೨. ಕರ್ನಾಟಕದಲ್ಲಿ ನೃತ್ಯ, ಸಂಗೀತ, ಪ್ರಜಾರಕ್ಷಣೆಗಾಗಿ ಪ್ರಸಿದ್ಧಿ ಪಡೆದ ಮಹಿಳೆಯರ ಪಟ್ಟಿ ಮಾಡಿರಿ.

೩. ನಾಡಿನ ರಕ್ಷಣೆಗಾಗಿ ಕನ್ನಡ ನಾಡಿನಲ್ಲಿ ಹೋರಾಡಿದವರ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡು ಪಟ್ಟಿ ತಯಾರಿಸಿರಿ.

ಕನ್ನಡದ ಪರಂಪರೆ ಉಳಿಸಿದ ಕೆಳದಿ ಚೆನ್ನಮ್ಮ ಆಶ್ರಯ ಬೇಡಿ ಬಂದವರಿಗೆ ಆಸರೆ ನೀಡಿದಳು. ಅದಕ್ಕಾಗಿ ಮೊಗಲರ ದೊಡ್ಡ ಸೈನ್ಯದೊಂದಿಗೆ ಯುದ್ಧಮಾಡಿ ಗೆದ್ದಳು. ಕೊಟ್ಟ ಮಾತು ಉಳಿಸಿಕೊಳ್ಳಲು ಪ್ರಯತ್ನಿಸಿದಳು. ಈ ರೋಚಕ ಪ್ರಸಂಗ ಈ ನಾಟಕದಲ್ಲಿದೆ.

(ಕೆಳದಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಗ್ರಾಮ. ಅಲ್ಲಿ ವೀರರಾಣಿ ಕೆಳದಿ ಚೆನ್ನಮ್ಮ ಆಳುತ್ತಿದ್ದಳು. ಈಕೆ ಈ ರಾಜ್ಯದ ಕೀರ್ತಿಯನ್ನು ದಶದಿಕ್ಕುಗಳಿಗೂ ಹಬ್ಬಿಸಿದಳು. ಇವಳು ಶಿಕಾರಿಪುರ ತಾಲೂಕು ಕೋಟಿಪುರ ಗ್ರಾಮದ ಸಿದ್ದಪ್ಪ ಶೆಟ್ಟಿ ಎಂಬಾತನ ಮಗಳು, ಸೋಮಶೇಖರ ನಾಯಕನ ಮಡದಿ. ಈಕೆಯ ರಾಜ್ಯಾಡಳಿತ ಕಾಲ ಕ್ರಿಶ. ೧೬೭೭ ರಿಂದ ೧೬೯೬)



©KTBS Not to be republished

## ದೃಶ್ಯ–೧

(ರಾಜಾಸ್ಥಾನದ ದೃಶ್ಯ: ಆಸ್ಥಾನದಲ್ಲಿ ಚೆನ್ನಮ್ಮ ಪ್ರಜೆಗಳ ಕಷ್ಟ– ಸುಖ ಹಾಗೂ ದೂರು –ದುಮ್ಮಾನಗಳನ್ನು ಆಲಿಸುತ್ತಿದ್ದಾಳೆ. ಸರತಿ ಸಾಲಿನ ಕೊನೆಯಲ್ಲಿ ಇಬ್ಬರು ಜಂಗಮರು ನಿಂತಿದ್ದಾರೆ.)

ಚೆನ್ನಮ್ಮ : ಏನು ಜಂಗಮರೆ , ಏನು ನಿಮ್ಮ ಸಮಸ್ಯೆ?

ಜಂಗಮ ವೇಷಧಾರಿ : ನಾವು ಜಂಗಮರಲ್ಲ ತಾಯಿ! ನಾನು ಛತ್ರಪತಿ ಶಿವಾಜಿಯವರ ಮಗ ರಾಜಾರಾಮ.

ಚೆನ್ನಮ್ಮ : (ಅಚ್ಚರಿಯಿಂದ) ಏನು? ನೀವು ಛತ್ರಪತಿ ಶಿವಾಜಿಯವರ ಮಕ್ಕಳೇ, ನನ್ನಿಂದೇನಾಗಬೇಕು? ಬನ್ನಿ ಕುಳಿತುಕೊಳ್ಳಿ. (ಆಸನ ತೋರಿಸುವಳು)

**(ರಾಜಾರಾಮ ಆಸನದಲ್ಲಿ ಕುಳಿತುಕೊಳ್ಳುತ್ತಾನೆ. ಇನ್ನುಳಿದವರು ಹಿಂದೆ ಹಾಗೆಯೇ ನಿಂತುಕೊಂಡಿದ್ದಾರೆ.)**

ರಾಜರಾಮ : ತಾಯಿ. ಆ ದುಷ್ಟ ಔರಂಗಜೇಬನು ನನ್ನ ಸೋದರ ಶಂಭಾಜಿಯನ್ನು ಸೆರೆ ಹಿಡಿದ. ಕ್ರೂರತನದಿಂದ ಕೊಲ್ಲಿಸಿಬಿಟ್ಟ. ಈಗ ನನ್ನನ್ನೂ ಕೊಲ್ಲಿಸಬೇಕೆಂದು ಹೊಂಚು ಹಾಕಿದ್ದಾನೆ. ನಮ್ಮ ರಾಜ್ಯವನ್ನು ವಶಪಡಿಸಿಕೊಳ್ಳಲು ಸೈನ್ಯವನ್ನು ಕಳುಹಿಸಿದ್ದಾನೆ. ಈಗಾಗಲೇ ಕೆಲವು ಕೋಟೆಗಳು ಅವನ ಕೈವಶವಾಗಿವೆ. ಶತ್ರುಗಳ ಕಣ್ಣುತಪ್ಪಿಸಿ ಇಲ್ಲಿಗೆ ಬಂದಿದ್ದೇವೆ. ನಮಗೆ ರಕ್ಷಣೆ ಕೊಡಿ.

ಚೆನ್ನಮ್ಮ : ಬೇರೆ ರಾಜರಾರೂ ನಿಮಗೆ ರಕ್ಷಣೆ ನೀಡಲಿಲ್ಲವೇ?

ರಾಜರಾಮ : ಇಲ್ಲ ತಾಯಿ! ಆ ದುಷ್ಟ ಔರಂಗಜೇಬನ ಕೋಪಕ್ಕೆ ಹೆದರಿ ರಕ್ಷಣೆ ನೀಡಲು ನಿರಾಕರಿಸಿದರು. ಆತನ ವೈರತ್ವ ಕಟ್ಟಿಕೊಳ್ಳುವುದು ಯಾರಿಗೂ ಸುಲಭದ ಮಾತಲ್ಲ.

ಚೆನ್ನಮ್ಮ : ಇರಲಿ, ಶಿವಾಜಿ ಮಹಾರಾಜರ ಮಗನಿಗೆ ರಕ್ಷಣೆ ನೀಡುವುದು ನಮ್ಮ ಕರ್ತವ್ಯವೆಂದು ಭಾವಿಸುತ್ತೇವೆ. ನಿಮಗೆ ಆಶ್ರಯ ನೀಡುವುದು ನಮ್ಮ ಧರ್ಮ!. (ಚೆನ್ನಮ್ಮ ತಿಮ್ಮಣ್ಣ ನಾಯಕರತ್ತ ತಿರುಗಿ) ತಿಮ್ಮಣ್ಣ ನಾಯಕರೇ ಇವರನ್ನು ನಮ್ಮ ಅತಿಥಿ ಗೃಹಕ್ಕೆ ಕರೆದೊಯ್ಯಿರಿ. ತಕ್ಕ ವ್ಯವಸ್ಥೆಮಾಡಿರಿ. ತದನಂತರ ಆಲೋಚನೆ ಮಾಡೋಣ.

ತಿಮ್ಮಣ್ಣ ನಾಯಕ : ಆಗಲಿ ತಾಯಿ.

ರಾಜಾರಾಮ : ನಿಮ್ಮ ಔದಾರ್ಯ ದೊಡ್ಡದು ತಾಯಿ, ನಿಮಗೆ ನಾನು ಕೃತಜ್ಞ.

**(ಎಲ್ಲರೂ ಹೊರಡುವರು. ತೆರೆ ಬೀಳುವುದು.)**

©KTBS Not to be republished

## ದೃಶ್ಯ –೨

(ಕೆಳದಿ ಸಂಸ್ಥಾನ, ರಾಜಸಭೆ ನಡೆಯುತ್ತಿರುವ ದೃಶ್ಯ. ಚೆನ್ನಮ್ಮ ಸಿಂಹಾಸನದಲ್ಲಿ ಆಸೀನಳಾಗಿದ್ದಾಳೆ)

ಚೆನ್ನಮ್ಮ : ತಿಮ್ಮಣ್ಣ ನಾಯಕರೇ, ರಾಜಾರಾಮನಿಗೆ ಆಶ್ರಯ ನೀಡುವ ಬಗ್ಗೆ ನಿಮ್ಮ ಅಭಿಪ್ರಾಯ?

ತಿಮ್ಮಣ್ಣನಾಯಕ : ಅಮ್ಮ, ನೆನಪು ಮಾಡಿಕೊಳ್ಳಿ, ಶಿವಾಜಿ ಮಹಾರಾಜರು ನಮ್ಮ ರಾಜ್ಯದ ವ್ಯಾಪಾರ ಕೇಂದ್ರಗಳಾದ ಕುಂದಾಪುರ, ಗೋಕರ್ಣಗಳ ಮೇಲೆ ದಾಳಿ ಮಾಡಿದ್ದರು. ಅಲ್ಲಿ ನಮಗೆ ಸೇರಬೇಕಾಗಿದ್ದ ತೆರಿಗೆ ಹಣವನ್ನು ಕಿತ್ತುಕೊಂಡು ಹೋಗಿದ್ದರು.

ಚೆನ್ನಮ್ಮ : ನಿಜ. ತಿಮ್ಮಣ್ಣನಾಯಕರೆ, ಸಬ್ನವೀಸ ಕೃಷ್ಣಪ್ಪಯ್ಯನವರೇ ನಿಮ್ಮದೇನು ಅಭಿಪ್ರಾಯ?

ಕೃಷ್ಣಪ್ಪಯ್ಯ : ತಾಯಿ, ನಾವೀಗ ರಾಜಾರಾಮರಿಗೆ ಆಶ್ರಯ ನೀಡುವುದು ಕಷ್ಟಕರ ಔರಂಗಜೇಬನಿಗೆ ತಿಳಿದರೆ ಆತ ನಮ್ಮ ಮೇಲೆ ಆಕ್ರಮಣ ಮಾಡುತ್ತಾನೆ ಆತನದು ಬಲಾಢ್ಯ ಸೈನ್ಯ. ನಮ್ಮದು ಚಿಕ್ಕ ಸೈನ್ಯ.

ಚೆನ್ನಮ್ಮ : ನೀವೇನು ಹೇಳುತ್ತೀರಿ ಅಪ್ಪಾಜಿ? (ಸಿದ್ದಪ್ಪಶೆಟ್ಟಿಯವರತ್ತ ನೋಡಿ)

ಸಿದ್ದಪ್ಪ ಶೆಟ್ಟಿ : ಶರಣು ಬಂದವರಿಗೆ ಆಶ್ರಯ ನೀಡುವುದು ನಮ್ಮ ಧರ್ಮ! ದುಷ್ಟರಿಗೆ ಹೆದರಿ ಹಿಂದೆ ಸರಿಯುವುದಕ್ಕಿಂತ ಮುಂದುವರಿದು ಹೋರಾಡುವುದೇ ಲೇಸು.

ಚೆನ್ನಮ್ಮ : ಅಪ್ಪಾಜಿ ಹೇಳುವುದು ನಿಜ. ಈಗ ರಾಜಾರಾಮರು ನಮ್ಮಲ್ಲಿ ಆಶ್ರಯ ಬೇಡಿ ಬಂದಿದ್ದಾರೆ. ಅವರಿಗೆ ರಕ್ಷಣೆ ನೀಡುವುದು ನಮ್ಮ ರಾಜಧರ್ಮ! ಇದೇ ಕನ್ನಡಿಗರ ಪರಂಪರೆ! ಕೊಲ್ಲುವವನಿಗಿಂತ ಕಾಯುವವನು ದೊಡ್ಡವನು. ನಮ್ಮ ಧರ್ಮವೇ ನಮ್ಮೆಲ್ಲರನ್ನು ರಕ್ಷಿಸುತ್ತದೆ.

ತಿಮ್ಮಣ್ಣ ನಾಯಕ : ಹೌದು, ತಾಯಿ. ನಿಮ್ಮ ಮಾತು ನಿಜ! ಹಾಗೇ ಆಗಲಿ.

ಸೈನಿಕ (ಬಂದು) ಮಹಾರಾಣಿಯವರಿಗೆ ಜಯವಾಗಲಿ, ತಮ್ಮನ್ನು ತುರ್ತಾಗಿ ಭೇಟಿಯಾಗಲು ಬೇಹುಗಾರನೊಬ್ಬ ಕಾಯುತ್ತಿದ್ದಾನೆ. ಕಳಿಸಿಕೊಡಲೇ?

ಚೆನ್ನಮ್ಮ : ಕಳಿಸಿ.

ಬೇಹುಗಾರ : (ನಮಸ್ಕಾರ ಮಾಡಿ) ತಾಯಿ ಒಂದು ಆಘಾತಕಾರಿ ಸುದ್ದಿ !

ಚೆನ್ನಮ್ಮ : ಪರವಾಗಿಲ್ಲ ಹೇಳಿ.

ಬೇಹುಗಾರ : ತಾವು ರಾಜಾರಾಮನಿಗೆ ಆಶ್ರಯಕೊಟ್ಟಿದ್ದನ್ನು ಕೇಳಿ ಔರಂಗಜೇಬನು

©KTBS Not to be republished

ಬಹಳ ಕೋಪಗೊಂಡಿದ್ದಾನೆ ರಾಜ್ಯವನ್ನು ಮುತ್ತಲು ಸೇನೆ ಕಳುಹಿಸಿದ್ದಾನೆ. ರಾಜರಾಮನನ್ನು ಔರಂಗಜೇಬನಿಗೆ ಒಪ್ಪಿಸಬೇಕಂತೆ ಇಲ್ಲವೇ ಯುದ್ಧಕ್ಕೆ ಸಿದ್ಧತೆ........................

ಚೆನ್ನಮ್ಮ : ಹೀಗೋ ? ರಾಜಾರಾಮನಿಗೆ ಈಗಾಗಲೇ ಆಶ್ರಯ ನೀಡಿದ್ದಾಗಿದೆ ಅವರನ್ನು ಒಪ್ಪಿಸುವುದು ಸಾಧ್ಯವಿಲ್ಲ. ಶರಣಾಗತರನ್ನು ರಕ್ಷಿಸುವುದು ಕನ್ನಡಿಗರ ವೀರ ಪರಂಪರೆ. (ಕೃಷ್ಣಪ್ಪಯ್ಯನವರತ್ತ ತಿರುಗಿ) ಇದಕ್ಕೇನು ಮುಂದಿನ ದಾರಿ ಕೃಷ್ಣಪ್ಪಯ್ಯನವರೇ?

ಕೃಷ್ಣಪ್ಪಯ್ಯ : ತಾಯಿ, ನಾವು ಕನ್ನಡಿಗರು. ಕಲಿತನದಿಂದ ಕಾದಾಡೋಣ. ಜಯಾಪಜಯಗಳು ಶಿವನಿಚ್ಛೆ. ಯುದ್ಧವೊಂದೇ ನಮಗೆ ಉಳಿದಿರುವ ದಾರಿ

ತಿಮ್ಮಣ್ಣ ನಾಯಕ : ಮಹಾರಾಣಿಯವರೇ, ಕೃಷ್ಣಪ್ಪಯ್ಯ ಹೇಳಿದ ಮಾತು ಸತ್ಯ. ಯುದ್ಧಕ್ಕೆ ಆದೇಶ ನೀಡಿರಿ. ಕನ್ನಡಿಗರ ಕಲಿತನ ತೋರಿಸೋಣ.

ಸಿದ್ದಪ್ಪಶೆಟ್ಟಿ : ಮಗಳೇ, ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುವುದೇ ಸಭೆಯ ತೀರ್ಮಾನವೆಂದು ಕಾಣುತ್ತದೆ.

ಚೆನ್ನಮ್ಮ : ಸೇನಾನಾಯಕರೆ, ಮಂತ್ರಿಗಳೇ ನಮ್ಮ ವೀರರಿಗೆ ಸಿದ್ಧರಾಗಲು ತಿಳಿಸಿ. ಯುದ್ಧಕ್ಕೆ ತಕ್ಕ ಸಿದ್ಧತೆಗಳಾಗಲಿ ಹರ ಹರ ಮಹಾದೇವ!

**(ಎಲ್ಲರೂ ಹರ ಹರ ಮಹಾದೇವ! ಹರ ಹರ ಮಹಾದೇವ ! ಎನ್ನುತ್ತಾ ಹೋಗುವರು.)**

## ದೃಶ್ಯ –೩

**(ಕೆಳದಿ ಅರಮನೆಯ ಒಳಾಂಗಣ)**

ಚೆನ್ನಮ್ಮ : ಕೃಷ್ಣಪ್ಪಯ್ಯ ಮತ್ತು ತಿಮ್ಮಣ್ಣ ನಾಯಕರೇ ಯುದ್ಧದ ಸಮಾಚಾರವೇನು? ನೆರೆಯ ಅರಸರು ನಮಗೆ ನೆರವು ನೀಡುತ್ತಿರುವರೇ?

ತಿಮ್ಮಣ್ಣ ನಾಯಕ : ಹೌದು ತಾಯಿ, ನಮ್ಮ ನೆರೆಯ ಅರಸರೆಲ್ಲರೂ ಸಹಾಯ ನೀಡುತ್ತಿದ್ದಾರೆ. ನಮ್ಮ ಸೈನಿಕರು, ತಂಡ – ತಂಡವಾಗಿ ಹೋಗುತ್ತಿದ್ದಾರೆ. ಮಾರ್ಗ ಮಧ್ಯದಲ್ಲಿಯೇ ಅವರ ಡೇರೆಗಳ ಮೇಲೆ ಹಠಾತ್ತಾಗಿ ದಾಳಿ ಮಾಡುತ್ತಿದ್ದಾರೆ. ನಮ್ಮವರ ಈ ಮಿಂಚಿನ ಆಕ್ರಮಣದಿಂದ ಮೊಗಲರ ಸೇನೆ ಹೌಹಾರಿದೆ.

ಕೃಷ್ಣಪ್ಪಯ್ಯ : ಅಮ್ಮಾ, ಮಾರ್ಗ ಮಧ್ಯದಲ್ಲಿ ಜಡಿ ಮಳೆ ಸುರಿಯುತ್ತಿದೆ. ಅವರಿಗೆ ಅರಣ್ಯ ಮಾರ್ಗದಲ್ಲಿ ದಿಕ್ಕು ತಿಳಿಯುತ್ತಿಲ್ಲ. ಅದರ ಜೊತೆ ಆಹಾರ ಸಿಗದಂತೆ ಮಾಡಿದ್ದೇವೆ. ನಮ್ಮ ಕೂಟ ಕದನದಿಂದ ಮೊಗಲರು ಕಂಗೆಟ್ಟಿದ್ದಾರೆ.

©KTBS Not to be republished

ತಿಮ್ಮಣ್ಣನಾಯಕ : ನಮ್ಮ ಮಾವುತರು ಪಳಗಿದ ಆನೆಗಳ ಸಹಾಯದಿಂದ ನೂರಾರು ಕಾಡಾನೆಗಳನ್ನು ಅವರ ಬಿಡಾರಗಳತ್ತ ನುಗ್ಗಿಸುತ್ತಿದ್ದಾರೆ ಇದರಿಂದ ಔರಂಗಜೇಬನ ಸೈನಿಕರು ಮತ್ತಷ್ಟು ಭಯ-ಭೀತರಾಗಿದ್ದಾರೆ. ಪ್ರಾಣಭಯದಿಂದ ಶಸ್ತ್ರಾಸ್ತ್ರಗಳನ್ನು ಬಿಟ್ಟು ದಿಕ್ಕೆಟ್ಟು ಓಡಿ ಹೋಗುತ್ತಿದ್ದಾರೆ.

ಸೇನಾಧಿಪತಿ : (ಮಧ್ಯದಲ್ಲಿ ಆಗಮಿಸಿ) ಮಹಾರಾಣಿಯವರಿಗೆ ಜಯವಾಗಲಿ! ... ಮೊಗಲರ ಸೇನೆ ಓಡಿ ಹೋಯಿತು. ಯುದ್ಧದಲ್ಲಿ ನಾವು ಗೆದ್ದೆವು!

ಚೆನ್ನಮ್ಮ : ಹೌದೇ? ಕೆಳದಿ ವೀರರು ಕರ್ನಾಟಕದ ಪರಂಪರೆ ಕಾಯ್ದರು ತಾಯಿ ಭುವನೇಶ್ವರಿ ಕಾಪಾಡಿದಳು.

**(ಎಲ್ಲರೂ ಎದ್ದು ನಿಂತು ಜಯ ಘೋಷ ಮಾಡುವರು). (ತೆರೆ ಬೀಳುತ್ತದೆ)**

©KTBS Not to be republished

## ಅಭ್ಯಾಸ

### I. ಪದಗಳ ಅರ್ಥ :

ಕೀರ್ತಿ- ಖ್ಯಾತಿ, ಸ್ತುತಿ, ದಶ-ಹತ್ತು, ಬಲಾಢ್ಯ- ಬಲಶಾಲಿ, ಕೃತಜ್ಞ-ಉಪಕಾರವನ್ನು ನೆನೆಯುವವನು, ಸಂಸ್ಥಾನ- ರಾಜ್ಯ, ದೇಶದ ಭಾಗ, ತೆರಿಗೆ-ಕರ, ಸುಂಕ, ಕಂದಾಯ, ಶರಣು- ರಕ್ಷಣೆ, ಮೊರೆಹೋಗು, ನಮಸ್ಕಾರ, ಘೋಷಿಸು- ಕೂಗಿ ಹೇಳು, ಏರುಧ್ವನಿ ತುರ್ತು-ಜರೂರು, ಜರೂರು ಪರಿಸ್ಥಿತಿ, ಬಿಡಾರ-ತಂಗುವ ಸ್ಥಳ, ಆಘಾತ- ಪೆಟ್ಟು, ಕೇಡು, ಆದೇಶ- ಅಪ್ಪಣೆ, ಮಾವುತ- ಮಾವಟಿಗ, ಆನೆಯನ್ನು ನಡೆಸುವವನು. ಶಸ್ತ್ರಾಸ್ತ್ರ- ಆಯುಧಗಳು, ಹೊಂಚು- ನಿರೀಕ್ಷಿಸು, ಯಾರಿಗೂ ಕಾಣದಂತೆ ಗುಪ್ತವಾಗಿರು. ದುಮ್ಮಾನ- ವ್ಯಸನ, ಚಿಂತೆ, ಆಸನ-ಕುಳಿತುಕೊಳ್ಳುವ ಸಾಧನ

### ಗಮನಿಸಿ - ತಿಳಿ

ಕಣ್ಣು ತಪ್ಪಿಸು- ಮರೆ ಮಾಚು, ಪರಂಪರೆ- ಹಿಂದಿನಿಂದ ನಡೆದು ಬಂದ ಸಂಪ್ರದಾಯ, ಬೇಹುಗಾರ- ಗೂಢಚಾರ, ಗುಪ್ತಚಾರ, ಹೌಹಾರು- ಗಾಬರಿಯಾಗು, ಬೆಚ್ಚಿಬೀಳು, ಎದೆಗುಂದು- ಧೈರ್ಯಗೆಡು, ಕಂಗೆಡು- ದಿಕ್ಕು ತೋಚದಂತಾಗುವುದು, ದಾರಿ ಕಾಣದಾಗುವುದು, ಸಬ್ನವೀಸ- ಕಂದಾಯ ಅಧಿಕಾರಿ, ಧರ್ಮ- ಸರ್ವಸಮ್ಮತವಾದ ಬದುಕುವ ಕ್ರಮ, ಕೋಟೆ- ಬಲವಾದ ರಕ್ಷಣಾ ಗೋಡೆ, ಕೂಟ ಯುದ್ಧ - ಹಠಾತ್ತಾಗಿ ಎರಗಿ ದಾಳಿ ಮಾಡುವ ಯುದ್ಧದ ತಂತ್ರಗಾರಿಕೆ.

## II. ಪ್ರಶ್ನೆಗಳು :

**ಅ. ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಚೆನ್ನಮ್ಮ ಎಲ್ಲಿ ಆಳುತ್ತಿದ್ದಳು?

೨. ಜಂಗಮ ವೇಷಧಾರಿ ಯಾರು?

೩. ರಾಜಾರಾಮನು ಯಾರ ಮಗ?

೪. ಶಂಭಾಜಿಯನ್ನು ಸೆರೆ ಹಿಡಿದು ಕೊಲ್ಲಿಸಿದವನಾರು?

೫. ರಾಜಾರಾಮನಿಗೆ ಯಾರೂ ರಕ್ಷಣೆ ನೀಡಲಿಲ್ಲ. ಏಕೆ?

೬. ಔರಂಗಜೇಬ ಏಕೆ ಕೋಪಗೊಂಡನು?

೭. ಸಿದ್ದಪ್ಪ ಶೆಟ್ಟರು ಸಭೆಯ ತೀರ್ಮಾನ ಏನೆಂದು ಹೇಳಿದರು?

೮. ಸೇನಾಧಿಪತಿ ಬಂದು ಹೇಳಿದುದೇನು?

**ಆ. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ರಾಜಾರಾಮನು ರಾಣಿ ಚೆನ್ನಮ್ಮನಿಗೆ ಸಭೆಯಲ್ಲಿ ಏನೆಂದು ಕೇಳಿಕೊಂಡನು?

೨. ಬೇಹುಗಾರನು ಬಂದು ರಾಣಿಯವರಿಗೆ ಹೇಳಿದ್ದೇನು?

೩. ಮೊಗಲರ ಸೇನೆ ಕಾಡಿನಲ್ಲಿ ಭಯ-ಭೀತರಾಗಲು ಕಾರಣ ಹೇಳಿರಿ.

**ಇ. ಈ ಮಾತನ್ನು ಯಾರು, ಯಾರಿಗೆ, ಹೇಳಿದರು ?**

೧. ನಾವು ಜಂಗಮರಲ್ಲ ತಾಯಿ!

೨. ಆತನ ವೈರತ್ವ ಕಟ್ಟಿಕೊಳ್ಳುವುದು ಯಾರಿಗೂ ಸುಲಭದ ಮಾತಲ್ಲ.

೩. ಶರಣು ಬಂದವರಿಗೆ ಆಶ್ರಯ ನೀಡುವುದು ನಮ್ಮ ಧರ್ಮ!

೪. ಕೊಲ್ಲುವವನಿಗಿಂತ ಕಾಯುವವನು ದೊಡ್ಡವನು.

೫. ಕೆಳದಿ ವೀರರು ಕರ್ನಾಟಕದ ಪರಂಪರೆ ಕಾಯ್ದರು.

**ಈ. ಬಿಟ್ಟ ಸ್ಥಳ ತುಂಬಿರಿ.**

೧. ಔರಂಗಜೇಬನ ________ ಹೆದರಿ ಇತರ ರಾಜರು ರಕ್ಷಣೆ ನೀಡಲು ನಿರಾಕರಿಸಿದರು.

೨. ಶರಣಾಗತರನ್ನು ರಕ್ಷಿಸುವುದು ಕರ್ನಾಟಕದ ____________ .

೩. ಕೊಲ್ಲುವವನಿಗಿಂತ ___________ ದೊಡ್ಡವನು.

೪. ನಮ್ಮ ನೆರೆಯ ___________ ಸಹಾಯ ನೀಡುತ್ತಿದ್ದಾರೆ.

©KTBS
Not to be republished

೫. ಕೂಟ ಕದನದಿಂದ ____________ ಕಂಗೆಟ್ಟಿದ್ದಾರೆ.

೬. ಮೊಗಲರು ಪ್ರಾಣ ಭಯದಿಂದ ________ ಬಿಟ್ಟು ದಿಕ್ಕೆಟ್ಟು ಓಡಿದರು.

ಉ. ಹೊಂದಿಸಿ ಬರೆಯಿರಿ.

| | | |
|---|---|---|
| ೧. ಶಿವಾಜಿಯ ಮಗ | ಕೃಷ್ಣಪ್ಪಯ್ಯ | ____________ |
| ೨. ಸಿದ್ದಪ್ಪಶೆಟ್ಟಿ ಮಗಳು | ಸೋಮಶೇಖರ ನಾಯಕ | ____________ |
| ೩. ಸಬ್ನವೀಸ | ಕೆಳದಿಚೆನ್ನಮ್ಮ | ____________ |
| ೪. ಚೆನ್ನಮ್ಮನ ಪತಿ | ರಾಜಾರಾಮ | ____________ |

## III. ಭಾಷಾಭ್ಯಾಸ :

ಅ. ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿರಿ.

೧. ತುರ್ತು ............................................................

೨. ಕಣ್ಣು ತಪ್ಪಿಸು ............................................................

೩. ದಾಳಿ ಮಾಡು ............................................................

೪. ತಂಡ–ತಂಡವಾಗಿ ............................................................

೫. ಹಠಾತ್ತಾಗಿ ............................................................

೬. ಭಯ–ಭೀತಿ ............................................................

ಆ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಗಮನಿಸಿ ಓದಿರಿ. ಗಟ್ಟಿಯಾಗಿ ಹೇಳಿರಿ. ಉಚ್ಚಾರ ದೋಷವಾಗದಿರಲಿ.

ದುಷ್ಟ × ಶಿಷ್ಟ — ಸತ್ಯ × ಅಸತ್ಯ

ಕೃತಜ್ಞ × ಕೃತಘ್ನ — ಆಶ್ರಯ × ನಿರಾಶ್ರಯ

ಜಯ × ಅಪಜಯ — ಧರ್ಮ × ಅಧರ್ಮ

©KTBS
Not to be republished

## IV. ಚಟುವಟಿಕೆಗಳು :

ಅ. ೧. ಕನ್ನಡನಾಡಿನ ವೀರ ಪುರುಷರ ಹೆಸರುಗಳನ್ನು ಪಟ್ಟಿ ಮಾಡಿರಿ.

೨. ವೀರರಾಣಿ ಕೆಳದಿ ಚೆನ್ನಮ್ಮ ನಾಟಕವನ್ನು ಕಲಿತು ನಿಮ್ಮ ಶಾಲಾ ವಾರ್ಷಿಕೋತ್ಸವದಲ್ಲಿ ಅಭಿನಯಿಸಿರಿ.

೩. ಕನ್ನಡ ನಾಡಿನ ವೀರ ಮಹಿಳೆಯರ ಕಥೆಗಳನ್ನು ಸಂಗ್ರಹಿಸಿ ಓದಿರಿ.

ಆ. ಕೆಳಗಿನ ಸಾಲುಗಳನ್ನು ಗಟ್ಟಿಯಾಗಿ ಓದಿ, ಪ್ರಶ್ನೆಗಳಿಗೆ ಉತ್ತರಿಸಿರಿ.

ಕನ್ನಡ ಪರಂಪರೆ ಎಂಬುದು ಕನ್ನಡಿಗರ ಜೀವನ ಧರ್ಮ. ಇದು ನಡೆದು ಬಂದ ಹಾದಿ. ಮಹಾಕವಿ ಕುವೆಂಪುರವರು, ಕರ್ನಾಟಕವೆಂಬುದು ಬರಿ ಹೆಸರಲ್ಲ, ಮಂತ್ರಕಣಾ, ಶಕ್ತಿ ಕಣಾ, ದೇವಿ ಕಣಾ ಎನ್ನುತ್ತಾರೆ.

ಕರ್ನಾಟಕದ ಒಂದು ಶಾಸನವು ಕನ್ನಡಿಗರು ಸಾಧು ಜನರಿಗೆ ಸಾಧು. ಯಾರಾದರು ತೊಂದರೆ ಕೊಟ್ಟರೆ ಅವರನ್ನು ಬಂಧಿಸದೆ ಬಿಡರು ಎಂದು ಹೇಳುತ್ತದೆ. ಕನ್ನಡಿಗರು ವೀರರು. ಈ ಜನ ಕಾವೇರಿಯಿಂದ ಗೋದಾವರಿನದಿಯವರೆಗೆ, ಕರ್ನಾಟಕದಿಂದ ಬಂಗಾಳದವರೆಗೆ ಗೆದ್ದು ಬಂದಿದ್ದಾರೆ. ವೀರತನ ಮೆರೆದಿದ್ದಾರೆ.

ಇಲ್ಲಿಯ ಶರಣರು ಇತರರನ್ನು ಇವನಾರವ ಇವನಾರವ ಎಂದೆನ್ನದಿರಯ್ಯ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ ಎಂದು ತಮ್ಮ ಹಿರಿತನ ತೋರಿದ್ದಾರೆ. ಕನಕದಾಸರು ಕುಲ-ಕುಲವೆಂದು ಹೊಡೆದಾಡದಿರಿ ಎಂದು ಎಚ್ಚರಿಸಿದ್ದಾರೆ. ಏನಾದರು ಆಗು ಮೊದಲು ಮಾನವನಾಗು ಎಂದು ಸಿದ್ದಯ್ಯಪುರಾಣಿಕರವರು ಜಗತ್ತಿಗೆ ಹೇಳಿದ್ದಾರೆ. ಇದುವೆ ಕನ್ನಡದ ಪರಂಪರೆ.

೧. ಕನ್ನಡ ಪರಂಪರೆ ಎಂದರೆ ಏನು?

೨. ಕುವೆಂಪುರವರು ಕರ್ನಾಟಕದ ಬಗ್ಗೆ ಏನು ಹೇಳುತ್ತಾರೆ?

೩. ಶರಣರು ಹೇಳಿದ್ದೇನು?

೪. ಕನ್ನಡಿಗರು ಜಗತ್ತಿಗೆ ಹೇಳಿದ್ದೇನು?

* * * * *

©KTBS Not to be republished

## ಪಾಠ – ೧೫

# ಚುಟುಕುಗಳು

**ಪ್ರವೇಶ :**

ಮಕ್ಕಳೇ ಸೂರ್ಯನ ಕೆಲಸವೇನು?
ಕೋಳಿ ಹಾಗೂ ಕೋಳಿಯ ಮೊಟ್ಟೆಯನ್ನು ವರ್ಣಿಸಿ.
ರಾತ್ರಿಯಲ್ಲಿ ಆಕಾಶದ ಸೊಬಗು ಹೇಗಿರುತ್ತದೆ?
– ಈ ಪ್ರಶ್ನೆಗಳನ್ನು ತರಗತಿಯಲ್ಲಿ ಚರ್ಚಿಸಿರಿ. ನಿಮ್ಮ ಉತ್ತರಗಳಿಗೂ ಕವಿ ದಿನಕರ ದೇಸಾಯಿಯವರ ಇಲ್ಲಿರುವ ವಿಚಾರಗಳಿಗೂ ತಾಳೆ ನೋಡಲು ಈ ಕವಿತೆಗಳನ್ನು ಓದಿರಿ.

### ೧. ಹತ್ತಿಯ ಬೆಳೆ

ಆಗಸದ ಹೊಲದೊಳಗೆ ಚಿಕ್ಕೆಗಳ ಬಿತ್ತಿ
ಮುಂಜಾನೆ ನೋಡಿದರೆ ಬಿಳಿ ಮುಗಿಲ ಹತ್ತಿ,
ಈ ಹತ್ತಿಯನು ಹಿಂಜಿದವರಾರು ನೀರೆ?
ಸೂರ್ಯನಲ್ಲದೆ, ಮತ್ತೆ ಯಾರಲ್ಲ ಬೇರೆ.

### ೨. ಸೋಜಿಗದ ಕೋಳಿ

ಎಲುಬು ಇಲ್ಲದ ಕೋಳಿ ತೋರಿಸಲೆ ನಿನಗೆ?
ನೋಡಬೇಕೆನಿಸಿದರೆ ಬಾ ನನ್ನ ಮನೆಗೆ
ಹೀಗೆನಲು ಆ ಹುಡುಗ ನೋಡಲಿಕೆ ಬಂದ
ಕೋಳಿ ಮೊಟ್ಟೆಯ ತಂದು ತೋರಿಸಿದ ಕಂದ.

### ೩. ತಂಗಿಗೆ

ಗಗನ ದೇವಿಯ ಹಣೆಗೆ ಚಂದಿರನ ಬೊಟ್ಟು
ರಂಗೋಲೆಗಾಗಿ ಬೆಳದಿಂಗಳಿನ ಹಿಟ್ಟು
ಬಾಂದಳವ ಸಿಂಗರಿಸಿದವರಾರು, ತಂಗಿ?
ಹೇಳಿದರೆ ಹೊಲಿಸುವೆನು ಚಿಕ್ಕೆಗಳ ಅಂಗಿ.

– ದಿನಕರ ದೇಸಾಯಿ

©KTBS Not to be republished

## ಕೃತಿಕಾರರ ಪರಿಚಯ :



**ದಿನಕರ ದೇಸಾಯಿ** ಇವರು ಉತ್ತರ ಕನ್ನಡದ ಅಂಕೋಲ ತಾಲೂಕಿನ ಅಲಗೇರಿಯವರು. ಇವರು ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ೧೯೬೭ ರಲ್ಲಿ ಸಂಸತ್ತಿನ ಸದಸ್ಯರೂ ಆಗಿದ್ದರು. **'ಹೂಗೊಂಚಲು'**, **'ಮಕ್ಕಳ ಗೀತೆಗಳು'**, **'ನಾ ಕಂಡ ಪಡುವಣ'**, **'ದಿನಕರನ ಚೌಪದಿ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮುಂಬೈ ಸರ್ಕಾರದ ಬಹುಮಾನಗಳು ದೊರೆತಿವೆ. ಇವರು **'ಚುಟುಕುಗಳ ಬ್ರಹ್ಮ'** ಎಂಬ ಬಿರುದಿನಿಂದ ಜನಪ್ರಿಯರಾಗಿದ್ದರು. ಪ್ರಸ್ತುತ ಚುಟುಕುಗಳನ್ನು ಅವರ **'ದಿನಕರನ ಚೌಪದಿ'** ಸಂಕಲನದಿಂದ ಆರಿಸಿದೆ.

## ಅಭ್ಯಾಸ

### I. ಪದಗಳ ಅರ್ಥ :

**ಗಗನ** – ಆಕಾಶ, ಬಾಂದಳ, ಆಗಸ

**ನೀರೆ** – ಸುಂದರಿ

**ಬೊಟ್ಟು** – ತಿಲಕ

**ಮುಗಿಲು** – ಮೋಡ

**ಹಿಟ್ಟು** – ನಯವಾದ ಪುಡಿ

**ಎಲುಬು** – ಮೂಳೆ

**ಚಿಕ್ಕೆ** – ನಕ್ಷತ್ರ; ತಾರೆ.

**ಮುಂಜಾನೆ** –ಸೂರ್ಯ ಉದಯಿಸುವ ಸಮಯ.

**ಸೋಜಿಗ** – ವಿಸ್ಮಯ; ಆಶ್ಚರ್ಯದ ವಿಷಯ.

**ಹಿಂಜು** – ಬಿಡಿಸು; ಹಿಗ್ಗಿಸು.

### II. ಪ್ರಶ್ನೆಗಳು :

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಆಗಸದ ಹೊಲದಲ್ಲಿ ಏನನ್ನು ಬಿತ್ತಿದೆ?
೨. ಬಿಳಿ ಮುಗಿಲ ಹತ್ತಿಯನ್ನು ಹಿಂಜಿದವರು ಯಾರು?
೩. ಕಂದನು ಹುಡುಗನಿಗೆ ಎಂತಹ ಕೋಳಿ ತೋರುವೆನು ಎಂದನು?
೪. ಹುಡುಗನು ಕಂದನ ಮನೆಗೆ ಏಕೆ ಹೋದನು?
೫. ಕಂದನು ಹುಡುಗನಿಗೆ ತೋರಿಸಿದ ಸೋಜಿಗದ ಕೋಳಿ ಯಾವುದು?
೬. ಕವಿ ತಂಗಿಗೆ ಎಂತಹ ಅಂಗಿ ಹೊಲಿಸುವೆನು ಎಂದರು?
೭. ಬಾಂದಳವನ್ನು ಸಿಂಗರಿಸಿದ ರಂಗೋಲೆಯ ಹಿಟ್ಟು ಯಾವುದು?
೮. ಚುಟುಕಗಳ ಬ್ರಹ್ಮ ಎಂದು ಯಾವ ಕವಿಯನ್ನು ಕರೆಯಲಾಗುತ್ತದೆ?

©KTBS Not to be republished

ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಆಗಸದಲ್ಲಿ ಸೂರ್ಯನ ಕೆಲಸಗಳನ್ನು ಕವಿ ಏನೆಂದು ವರ್ಣಿಸಿದ್ದಾರೆ?

೨. ಸೋಜಿಗದ ಕೋಳಿ ಯಾವುದು? ಏಕೆ?

೩. ಬಾಂದಳವು ಹೇಗೆ ಸಿಂಗಾರಗೊಂಡಿದೆ ಎಂದು ಕವಿ ವರ್ಣಿಸಿದ್ದಾರೆ?

ಇ) ಈ ಕೆಳಗಿನ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದೆ. ಅವುಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.

೧. ಬಿಳಿ ಮುಗಿಲ ಹತ್ತಿ ಎಂದರೆ ________________

ಅ) ಮೋಡ  ಆ) ಆಕಾಶ  ಇ) ಚುಕ್ಕೆ  ಈ) ಸೂರ್ಯ

೨. ಎಲುಬು ಇಲ್ಲದ ಕೋಳಿ ಎಂದರೆ ________________

ಅ) ಮೊಟ್ಟೆ  ಆ) ಮರಿ  ಇ) ಮಾಂಸ  ಈ) ಹೊಟ್ಟೆ

೩. ಗಗನ ದೇವಿಯ ಹಣೆಗೆ ಬೊಟ್ಟು ________________

ಅ) ಚುಕ್ಕೆ  ಆ) ಚಂದಿರ  ಇ) ಹಿಟ್ಟು  ಈ) ಬೆಳದಿಂಗಳು

## III. ಭಾಷಾಭ್ಯಾಸ :

ಅ) ಇಲ್ಲಿರುವ "ಅ" ಪಟ್ಟಿಯ ಪದಗಳಿಗೆ "ಬ" ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| 'ಅ' ಪಟ್ಟಿ | | 'ಬ' ಪಟ್ಟಿ |
|---|---|---|
| ೧) ಬಾಂದಳ | – | ಅ) ಸುಂದರಿ |
| ೨) ಬೊಟ್ಟು | – | ಆ) ಮೋಡ |
| ೩) ಮುಗಿಲು | – | ಇ) ಆಕಾಶ |
| ೪) ನೀರೆ | – | ಈ) ತಿಲಕ |
| | | ಉ) ನಕ್ಷತ್ರ |

©KTBS Not to be republished

ಆ) ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.

೧. ಈ ಕೆಳಗಿನವುಗಳಲ್ಲಿ ವ್ಯಾಕರಣ ಶುದ್ಧ ಪದ ಯಾವುದು?

ಅ) ಅಕಾಸ ಆ) ಆಕಶ ಇ) ಆಕಾಶ ಈ) ಅಕಸ

೨. 'ಎಲುಬು' ಪದದ ಅರ್ಥವೇನು?

ಅ) ಮೂಳೆ ಆ) ಮಾಂಸ ಇ) ರಕ್ತ ಈ) ಚರ್ಮ

೩. 'ಸುಳ್ಳು' ಇದರ ವಿರುದ್ಧಾರ್ಥಕ ಪದ ಯಾವುದು?

ಅ) ಮೋಸ ಆ) ಸತ್ಯ ಇ) ಮಿಥ್ಯ ಈ) ಅಸತ್ಯ

೪. 'ಕೋಳಿ' ಇದು ಯಾವ ಲಿಂಗಕ್ಕೆ ಉದಾಹರಣೆಯಾಗುತ್ತದೆ?

ಅ) ಪುಲ್ಲಿಂಗ ಆ) ಸ್ತ್ರೀಲಿಂಗ ಇ) ನಪುಂಸಕ ಲಿಂಗ ಈ) ಅನ್ಯಲಿಂಗ

ಇ) ಪದಬಳ್ಳಿ : ಪದ ಒಂದು ವಸ್ತುವನ್ನು ಪ್ರತಿನಿಧಿಸುತ್ತದೆ. ಆ ವಸ್ತುವಿಗೆ ಸಂಬಂಧಿಸಿದ ಇನ್ನಿತರ ಪದಗಳನ್ನು ಬರೆಯುತ್ತಾ ಹೋಗಿ. ಈ ಕೆಳಗಿನ ಮಾದರಿಯನ್ನು ಗಮನಿಸಿರಿ.

**ಮಾದರಿ :** ಗಿಡ – ಮರ, ಬಳ್ಳಿ, ಚಿಗುರು, ಹೂ, ಕಾಯಿ, ಹಣ್ಣು, ಎಲೆ, ಕಾಂಡ, ಬೇರು....

೧. ಆಗಸ –

೨. ಕೋಳಿ –

೩. ಹೊಲ –

## IV. ಚಟುವಟಿಕೆಗಳು :

ಅ. ದಿನಕರ ದೇಸಾಯಿ ಅವರ ಇನ್ನಿತರ ಚುಟುಕಗಳನ್ನು ಓದಿರಿ.

ಆ. ವೃತ್ತ ಪತ್ರಿಕೆಗಳಲ್ಲಿ ಬರುವ ಚುಟುಕುಗಳನ್ನು ಸಂಗ್ರಹಿಸಿ ಒಂದು ಆಲ್ಬಂ ಮಾಡಿರಿ.

ಇ. ಪ್ರಸ್ತುತ ಪಾಠದಲ್ಲಿರುವ ಚುಟುಕುಗಳನ್ನು ಕಂಠಪಾಠ ಮಾಡಿರಿ.

* * * * *

©KTBS Not to be republished

# ಪಾಠ – ೧೬

# ದೇಶಪ್ರೇಮಿ ಕವಿ ಇಕ್ಬಾಲ್

**ಪಾಠ ಪ್ರವೇಶ :** 'ತಾಯಿ ಮತ್ತು ತಾಯಿನಾಡು ಸ್ವರ್ಗಕ್ಕಿಂತ ಮಿಗಿಲು' ಎಂದು ಸಂಸ್ಕೃತ ಸುಭಾಷಿತವು ಹೇಳುತ್ತದೆ. ಕವಿ ಕುವೆಂಪುರವರು **'ದೇಶ ನನ್ನದು ಎನ್ನದ ಎದೆ ಸುಡುಗಾಡು'** ಎನ್ನುತ್ತಾರೆ. ಆದ ಕಾರಣ ನಾವು ನಮ್ಮ ದೇಶವನ್ನು ಹೆತ್ತ ತಾಯಿಗಿಂತ ಹೆಚ್ಚು ಪ್ರೀತಿಸಬೇಕು, ಆರಾಧಿಸಬೇಕು, ರಕ್ಷಿಸಬೇಕು. ನಮ್ಮ ದೇಶವನ್ನು **ಭಾರತ ಮಾತೆ** ಎಂದು ಕರೆಯುತ್ತೇವೆ. ಇಲ್ಲಿಯ ಹಿಮಾಲಯ ಪರ್ವತ ನಮ್ಮ ರಕ್ಷಕ. ಗಂಗಾ, ಸಿಂಧು, ಕಾವೇರಿ, ಕೃಷ್ಣೆ, ಗೋದಾವರಿ, ವೈಗೈ ಮುಂತಾದ ನದಿಗಳು ನಮಗೆ ಪವಿತ್ರವಷ್ಟೇ ಅಲ್ಲ, ಜೀವ ನದಿಗಳಾಗಿವೆ. ಇಲ್ಲಿಯ ಮಣ್ಣಿನ ಕಣ ಕಣವೂ ನಮಗೆ ಬಂಗಾರ. ಇದರ ರಕ್ಷಣೆಗಾಗಿ ಅನೇಕರು ಪ್ರಾಣ ತೆತ್ತಿದ್ದಾರೆ. ಇಂತಹ ಭಾರತ ದೇಶವನ್ನು ಅನೇಕ ಕವಿಗಳೂ ಹಾಡಿ ಹಾಡಿ ಹೊಗಳಿದ್ದಾರೆ. ಅಂತಹ ಹಾಡುಗಳಲ್ಲಿ **ಸಾರೇ ಜಹಾಂಸೆ ಅಚ್ಛಾ....** ಪ್ರಸಿದ್ಧವಾಗಿದೆ. ಈ ಹಾಡನ್ನು ಎಲ್ಲರೂ ರಾಗವಾಗಿ ಹಾಡಿರಿ.....

**ಸಾರೇ ಜಹಾಂಸೆ ಅಚ್ಛಾ ಹಿಂದುಸ್ತಾನ್ ಹಮಾರಾ**
**ಹಮ್ ಬುಲ್ ಬುಲೇ ಹೈ ಇಸ್‌ಕೀ ಎ ಗುಲ್‌ಸಿತಾ ಹಮಾರಾ ॥**

**ಪರಬತ್ ವೋ ಸಬ್‌ಸೇ ಊಂಛಾ ಹಮ್ ಸಾಯಾ ಆಸ್‌ಮಾನ್ ಕಾ**
**ವೋ ಸಂತರೀ ಹಮಾರಾ । ವೋ ಪಾಸ್ ಬಾ ಹಮಾರಾ ॥**

**ಗೋದಿಮೇ ಖೇಲ್‌ತೀಹೈ ಇಸ್‌ಕೀ ಹಜ಼ಾರೋ ನದಿಯಾ**
**ಗುಲ್‌ಷನ್ ಹೈ ಜಿಸ್‌ಕೇ ದಮ್‌ಸೇ ರಷ್‌ಕೇ ಜಿನಾ ಹಮಾರಾ ॥**

**ಮಜ್‌ಹಬ್ ನಹೀ ಸಿಖಾತಾ ಆಪಸ್ ಮೆ ಬೈರ್ ರಖ್‌ನಾ**
**ಹಿಂದೀ ಹೈ ಹಮ್ ವತನ್ ಹೈ ಹಿಂದುಸ್ತಾನ್ ಹಮಾರಾ॥**

**(ಉರ್ದು ಪದ್ಯ)**

**ಭಾವಾರ್ಥ :**

[ನಮ್ಮ ದೇಶ ಹಿಂದುಸ್ತಾನ ಪ್ರಪಂಚದಲ್ಲಿಯೇ ಸುಂದರ ದೇಶ.
ಈ ದೇಶದ ಉದ್ಯಾನವನದಲ್ಲಿ ನಾವೆಲ್ಲ ಬುಲ್ ಬುಲ್ ಪಕ್ಷಿಗಳು.
ಇಲ್ಲಿಯ ಪರ್ವತಗಳು ಎಲ್ಲಕ್ಕಿಂತ ಎತ್ತರವಾಗಿವೆ. ಆಕಾಶವನ್ನು ಚುಂಬಿಸುತ್ತಿವೆ.
ಅವು ಸದಾ ನಮ್ಮನ್ನು ರಕ್ಷಿಸುತ್ತಿವೆ, ಸಂರಕ್ಷಿಸುತ್ತಿವೆ.
ಈ ನಾಡ ಒಡಲಿನಲ್ಲಿ ಸಾವಿರಾರು ನದಿಗಳು ಹರಿಯುತ್ತಿವೆ.
ನದಿಗಳ ಕಾರಣದಿಂದ ನಳನಳಿಸುತ್ತಿರುವ ಹೂತೋಟಗಳ ಸ್ವರ್ಗವಿದು.
ಧರ್ಮವು ಪರಸ್ಪರ ದ್ವೇಷವನ್ನು ಕಲಿಸುವುದಿಲ್ಲ
ನಾವೆಲ್ಲ ಭಾರತೀಯರು, ನಮ್ಮ ದೇಶ ಹಿಂದುಸ್ತಾನ.]

©KTBS Not to be republished



ಪ್ರತಿ ಶನಿವಾರ ಹಾಗೂ ಸ್ವಾತಂತ್ರ್ಯ ಉತ್ಸವದಂದು ಶಾಲಾ ಸಮಾರಂಭಗಳಲ್ಲಿ ಈ ದೇಶಭಕ್ತಿ ಗೀತೆಯನ್ನು ನಾವು ಹಾಡುತ್ತಿರುತ್ತೇವೆ. ಮಹಾತ್ಮಾ ಗಾಂಧೀಜಿಯವರು ಈ ಗೀತೆಯನ್ನು ಮೆಚ್ಚಿ ಆನಂದಬಾಷ್ಪ ಸುರಿಸಿದ್ದರು. ಕವಿಗೆ ನಮನ ಸಲ್ಲಿಸಿದ್ದರು. ಈ ನೆಚ್ಚಿನ ಗೀತೆ ಬರೆದವರು ಯಾರು ಗೊತ್ತೆ?

ಇವರೇ ದೇಶಪ್ರೇಮಿ ಕವಿ ಇಕ್ಬಾಲ್ ಮಹಮ್ಮದ್. ಇವರು ಪಾಕಿಸ್ತಾನದ ಪಂಜಾಬ್ ರಾಜ್ಯದ ಸಿಯಾಲ್‌ಕೋಟಿನಲ್ಲಿ ೯ ನೇ ನವೆಂಬರ್ ೧೮೭೭ ರಂದು ಜನಿಸಿದರು. ಇವರ ತಂದೆ ಷೇಕ್‌ನೂರ್ ಮಹಮ್ಮದ್. ಅವರು ದೊಡ್ಡ ವಿದ್ಯಾವಂತರಲ್ಲ. ಆದರೆ ಅನುಭಾವಿ ತತ್ವಜ್ಞಾನಿ. ಇಕ್ಬಾಲರಿಗೆ ಶಿಕ್ಷಣ ಕೊಡಲು ಇವರ ಅಣ್ಣ ಷೇಕ್ ಅತಾ ಮಹಮ್ಮದ ಸಹಾಯ ಮಾಡಿದರು.

ಅಂದು ಪ್ರಸಿದ್ಧರಾಗಿದ್ದ ಮೌಲ್ವಿ ಮೀರ್ ಹಸನ್ ಅವರು ಇಕ್ಬಾಲರಿಗೆ ಇಂಗ್ಲಿಷ್ ಮತ್ತು ಪರ್ಶಿಯನ್ ಭಾಷೆ ಕಲಿಸಿದರು. ಹದಿನಾರನೆಯ ವಯಸ್ಸಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅರೇಬಿಕ್ ಮತ್ತು ಇಂಗ್ಲಿಷ್ ಭಾಷಾ ವಿಷಯದಲ್ಲಿ ಸುವರ್ಣ ಪದಕ ಪಡೆದರು. ತತ್ವಶಾಸ್ತ್ರ ಅವರ ಆಸಕ್ತಿಯ ವಿಷಯವಾಗಿತ್ತು. ಲಾಹೋರಿನಲ್ಲಿ ಪದವಿ ಪಡೆದ ಮೇಲೆ ಇಕ್ಬಾಲರು ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡ್ ಮತ್ತು ಜರ್ಮನಿಗೆ ಹೋದರು. ಡಾಕ್ಟರೇಟ್ ಪದವಿ ಗಳಿಸಿದರು. ತದನಂತರ ಕೇಂಬ್ರಿಜ್‌ನಲ್ಲಿ ನ್ಯಾಯಶಾಸ್ತ್ರ ಓದಿ ಬ್ಯಾರಿಸ್ಟರ್ ಆದರು. ಓದಿನಲ್ಲಿ ಇವರಿಗೆ ಬಹಳ ಅಭಿರುಚಿ ಇತ್ತು.

ಅವರು ಮನಸ್ಸು ಮಾಡಿದ್ದರೆ ಇಂಗ್ಲೆಂಡಿನಲ್ಲಿಯೇ ದೊಡ್ಡಹುದ್ದೆ, ಕೈತುಂಬ ಸಂಬಳ ಪಡೆಯಬಹುದಾಗಿತ್ತು. ಅದನ್ನು ತಿರಸ್ಕರಿಸಿದ ದೇಶಪ್ರೇಮಿ ಇಕ್ಬಾಲರು ಲಾಹೋರ್ ಕಾಲೇಜಿನಲ್ಲಿ ತತ್ವಶಾಸ್ತ್ರದ ಅಧ್ಯಾಪಕರಾದರು. ಕೆಲಕಾಲ ಲಾಹೊರಿನ ಹೈಕೋರ್ಟ್‌ನಲ್ಲಿ ವಕೀಲರಾಗಿಯೂ ಸೇವೆ ಸಲ್ಲಿಸಿದರು.

ಕವಿಯಾಗಿ ಅವರು ಜೀವನದಲ್ಲಿ ಮಹತ್ತರ ತಿರುವು ಪಡೆದರು. 'ನಾಲಾ–ಎ–ಯತೀಮ' (ಅನಾಥ ರೋದನ) ಕವಿತೆ ಇವರಿಗೆ ಬಹುದೊಡ್ಡ ಖ್ಯಾತಿಯನ್ನು ತಂದಿತು. 'ಅಸ್ರಾರ್–ಎ–ಖುದಿ' (ಆತ್ಮದ ರಹಸ್ಯ) ಕೃತಿಯು ವಿಶ್ವದ ಗಮನ ಸೆಳೆಯಿತು. ಈ ಕೃತಿಯನ್ನು ಪ್ರೊ. ನಿಕಲ್ಸನ್ ಇಂಗ್ಲಿಷ್‌ಗೆ ಭಾಷಾಂತರ ಮಾಡಿದರು. 'ಜಬುರ್–ಎ–ಅಜಮ್' (ಪೌರಾತ್ಯ ಸತ್ಯವಾಣಿ), 'ಜಾವೇದ್ ನಾಮಾ' (ನಿತ್ಯತ್ವ ಗೀತೆ), 'ಮುಸಾಫಿರ್' (ಪಯಣಿಗ) ಮುಂತಾದ ಕೃತಿಗಳನ್ನು ರಚಿಸಿ ಸಾಹಿತ್ಯದಲ್ಲಿ ಚಿರಂತನ ಸ್ಥಾನ ಗಳಿಸಿದ್ದಾರೆ.

©KTBS Not to be republished

ಇವರ ಮೊಟ್ಟ ಮೊದಲನೆಯ ಕವನ ಸಂಗ್ರಹ 'ಬಾಂಗೆದಿರಾ'. ಅದು ಹಿಮಾಲಯ ಪರ್ವತದ ಆರಾಧನಾ ಸ್ತುತಿ ಪದ್ಯದೊಂದಿಗೆ ಪ್ರಾರಂಭವಾಗುತ್ತದೆ.

**ಓ ಹಿಮಾಲಯ! ಭರತ ಭೂಮಿಯ ಭದ್ರಕೋಟೆ ನೀನು।**
**ಆಕಾಶ ಬಗ್ಗಿಹುದು ನಿನ್ನ ಹಣೆ ಮುತ್ತಿಡಲು।**
**ಆಯುಷ್ಯದಿ ನೀನು ಅಬಾಧಿತನು।**

ಈ ಕವಿತೆ ಹಿಮಾಲಯದ ಸೌಂದರ್ಯಕ್ಕೆ ಕನ್ನಡಿ ಹಿಡಿದಿದೆ. ಈ ದೇಶದಲ್ಲಿ ವಿವಿಧ ಜಾತಿ ಮತ ಪಂಥಗಳು ಇವೆ. ಅವುಗಳಲ್ಲಿ ಸಾಮರಸ್ಯದ ಅಗತ್ಯವನ್ನು ಇಕ್ಬಾಲರು ಒತ್ತಿ ಹೇಳಿದ್ದಾರೆ. ಮಕ್ಕಳಿಗಾಗಿ ಬರೆದ 'ತರುಣ್-ಇ-ಹಿಂದಿ' ಎಂಬ ಕವಿತೆಯಲ್ಲಿ ರಾಷ್ಟ್ರಪ್ರೇಮವನ್ನು ಬಿತ್ತಿದ್ದಾರೆ. ತಾಯ್ನಾಡಿನ ಬಗ್ಗೆ ಅವರಿಗೆ ಅಪಾರವಾದ ಪ್ರೀತಿಯಿದೆ.

**ಜಗದೊಳೆಲ್ಲ ಶ್ರೇಷ್ಠ ದೇಶ ನಮ್ಮ ಭರತ ಭೂಮಿ**
**ಅದುವೆ ನಮ್ಮ ಬನವು ನಾವು ಉಲಿವ ಕೋಗಿಲೆ**
**ಇಲ್ಲೆ ಇರಲಿ, ಎಲ್ಲೆ ಇರಲಿ, ದೇಶ ಬಿಟ್ಟು ಹೊರಗೆ ಇರಲಿ**
**ಎಂದೆಂದಿಗೂ ನಮಗಿದೆ ಮಾತೃಭೂಮಿ ಚಿಂತನೆ.**

ಹಿಮಾಲಯ ಮತ್ತು ಗಂಗೆಯನ್ನು ಮನಸ್ಸು ತುಂಬಿ ವರ್ಣಿಸುತ್ತಾರೆ. ರಾಮ ಮತ್ತು ಗುರುನಾನಕರನ್ನು ಗೌರವದಿಂದ ನೆನೆಯುತ್ತಾರೆ. ಪರಸ್ಪರ ದ್ವೇಷವನ್ನು ಯಾವ ಧರ್ಮವೂ ಬೋಧಿಸಿಲ್ಲ. ನಾವು ಎಲ್ಲರೂ ಭಾರತೀಯರು. ಭಾರತಾಂಬೆ ನಮ್ಮ ಮಾತೃಭೂಮಿ ಎನ್ನುತ್ತಾರೆ.

ಈ ದೇಶಪ್ರೇಮಿ ಕವಿ ವಿಶ್ವಭ್ರಾತೃತ್ವವನ್ನು ಪ್ರತಿಪಾದಿಸಿದ್ದಾರೆ. **ಜಾತಿ ಜಾತಿಗಳಲ್ಲಿ ಒಡಕು ಹುಟ್ಟಿಸುವ ಮಾತನ್ನು ಆಡದಿರಿ ಎನ್ನುತ್ತಾರೆ. ಆಡಿದರೆ ಬಿಡದು ಕೇಡಿನ ಮಾರಿ. ಅದು ಅಡಗಿ ಕುಳಿತಿದೆ ಜೋಕೆ?** ಎಂದು ಎಚ್ಚರಿಸುತ್ತಾರೆ. ಅದು ಇಂದಿಗೂ ಸತ್ಯದ ಮಾತು. ಈ ದೇಶಪ್ರೇಮಿ ಇಕ್ಬಾಲ್ ಏಪ್ರಿಲ್ ೨೧, ೧೯೩೮ ರಂದು ಲಾಹೋರಿನಲ್ಲಿ ನಿಧನರಾದರು.

* * * * *

## ಕೃತಿಕಾರರ ಪರಿಚಯ :

ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೧೯೮೭ ರಲ್ಲಿ ಪ್ರಕಟಿಸಿದ ರಾಷ್ಟ್ರಪ್ರೇಮಿ ಕವಿ ಇಕ್ಬಾಲ ಗ್ರಂಥದ ಸಹಾಯದಿಂದ ಪುನರ್‌ರಚಿತ ಲೇಖನವಿದು.

ಮೂಲ ಲೇಖಕರು ಎಸ್.ಎಂ.ಎಚ್. ಬರ್ನಿ ಹರ‍್ಯಾಣದ ರಾಜ್ಯಪಾಲರು. ಇದನ್ನು ಅನುವಾದ ಮಾಡಿದವರು ಕೋ. ಚೆನ್ನಬಸಪ್ಪ.

©KTBS Not to be republished

## ಅಭ್ಯಾಸ

### I. ಪದಗಳ ಅರ್ಥ :

**ಆನಂದಬಾಷ್ಪ** – ಸಂತೋಷದ ಕಣ್ಣೀರು.
**ಒಡಕು** – ಭೇದ
**ಉಲಿ** – ಕೂಗು
**ಚಿರಂತನ** – ಶಾಶ್ವತ
**ತತ್ವಜ್ಞಾನಿ** – ತತ್ವಗಳನ್ನು ಬಲ್ಲವನು; ದಾರ್ಶನಿಕ.
**ನೆಚ್ಚಿನ** – ಇಷ್ಟವಾದ
**ಮೆಟ್ರಿಕ್ಯುಲೇಷನ್** – ೧೦ ನೇ ತರಗತಿ
**ವಿಶ್ವಭ್ರಾತೃತ್ವ** – ಪ್ರಪಂಚದ ಜನರೆಲ್ಲರು ಸಹೋದರರು ಎಂಬ ಭಾವನೆ.
**ಸಾಮರಸ್ಯ** – ಹೊಂದಾಣಿಕೆ
**ಸ್ತುತಿ** – ಹೊಗಳಿಕೆ
**ಆಯುಷ್ಯ** – ಆಯಸ್ಸು
**ಉನ್ನತ** – ಹೆಚ್ಚಿನ
**ಕೇಂಬ್ರಿಜ್** – ಇಂಗ್ಲೆಂಡಿನ ಪ್ರಸಿದ್ಧ ವಿಶ್ವವಿದ್ಯಾಲಯ
**ಜಗ** – ಪ್ರಪಂಚ; ವಿಶ್ವ.
**ನಿಧನ** – ಮರಣ
**ಬನ** – ಕಾಡು; ವನ.
**ಲಾಹೋರ್** – ಪಾಕಿಸ್ತಾನದಲ್ಲಿರುವ ನಗರ.
**ಸುವರ್ಣ** – ಚಿನ್ನ; ಬಂಗಾರ.
**ಹೈಕೋರ್ಟ್** – ಉಚ್ಚ ನ್ಯಾಯಾಲಯ

### II. ಪ್ರಶ್ನೆಗಳು :

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಗಾಂಧೀಜಿಯವರು 'ಸಾರೇ ಜಹಾಂಸೆ ಅಚ್ಛಾ' ಹಾಡಿಗೆ ಯಾವ ರೀತಿ ಸ್ಪಂದಿಸಿದರು?
೨. 'ಸಾರೇ ಜಹಾಂಸೆ ಅಚ್ಛಾ' ಗೀತೆಯನ್ನು ರಚಿಸಿದ ಕವಿಯ ಹೆಸರೇನು?
೩. ಇಕ್ಬಾಲ್ ಮಹಮ್ಮದ್ ಯಾವಾಗ ಜನಿಸಿದರು? ಅವರ ತಂದೆಯ ಹೆಸರೇನು?
೪. ಬಾಲ್ಯದಲ್ಲಿ ಇಕ್ಬಾಲರ ಶಿಕ್ಷಣಕ್ಕೆ ಸಹಾಯ ಮಾಡಿದವರು ಯಾರು?
೫. ಕವಿ ಇಕ್ಬಾಲರು ಉನ್ನತ ಶಿಕ್ಷಣಕ್ಕಾಗಿ ಯಾವ ದೇಶಗಳಿಗೆ ಹೋದರು?
೬. ಇಕ್ಬಾಲರು ನಿರ್ವಹಿಸಿದ ಹುದ್ದೆಗಳಾವುವು?
೭. ಕವಿ ಇಕ್ಬಾಲರು ಭರತ ಭೂಮಿಯ ಭದ್ರಕೋಟೆ ಎಂದು ಯಾವುದನ್ನು ಕರೆದಿದ್ದಾರೆ?
೮. ಕವಿ ಇಕ್ಬಾಲರು ಮಕ್ಕಳಿಗಾಗಿ ಬರೆದ ಕವಿತೆ ಯಾವುದು?
೯. ಕವಿ ಇಕ್ಬಾಲರು ಎಲ್ಲಿ, ಯಾವಾಗ ನಿಧನರಾದರು?

©KTBS Not to be republished

ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ದೇಶಪ್ರೇಮಿ ಕವಿ ಇಕ್ಬಾಲರು ಬರೆದ ಕೃತಿಗಳು ಯಾವುವು?

೨. ಕವಿ ಇಕ್ಬಾಲರು 'ಬಾಂಗೆದಿರಾ' ಕವನ ಸಂಗ್ರಹದ ಪದ್ಯದಲ್ಲಿ ಹಿಮಾಲಯವನ್ನು ಹೇಗೆ ಬಣ್ಣಿಸಿದ್ದಾರೆ?

೩. ಧರ್ಮ ಮತ್ತು ಮಾತೃಭೂಮಿಯ ಬಗೆಗೆ ಕವಿಯ ಅನಿಸಿಕೆಯೇನು?

೪. ಕವಿ ಇಕ್ಬಾಲರು ಪ್ರತಿಪಾದಿಸಿದ ತತ್ವ ಯಾವುದು?

ಇ) ಈ ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ದೇಶಪ್ರೇಮಿ ಇಕ್ಬಾಲರ ವಿದ್ಯಾಭ್ಯಾಸವನ್ನು ವಿವರಿಸಿ.

೨. ಕವಿ ಇಕ್ಬಾಲರು ತಾಯ್ನಾಡಿನ ಪ್ರೀತಿಯನ್ನು ಹೇಗೆ ವರ್ಣಿಸಿದ್ದಾರೆ?

೩. 'ಸಾರೇ ಜಹಾಂಸೆ ಅಚ್ಛಾ' ಗೀತೆಯ ಭಾವಾರ್ಥವೇನು?

ಈ) ಈ ಕೆಳಗಿನ ಮಾತುಗಳ ಅರ್ಥವನ್ನು ವಿಸ್ತರಿಸಿ ಬರೆಯಿರಿ.

೧. ಓ ! ಹಿಮಾಲಯ
ಭರತ ಭೂಮಿಯ ಭದ್ರಕೋಟೆ ನೀನು।
ಆಕಾಶ ಬಗ್ಗಿಹುದು ನಿನ್ನ ಹಣೆ ಮುತ್ತಿಡಲು।

೨. ಯಾವ ಧರ್ಮವೂ ಬೋಧಿಸಿಲ್ಲ ಪರಸ್ಪರ ದ್ವೇಷವನು।
ನಾವು ಎಲ್ಲ ಭಾರತೀಯರೊಂದೆ.

ಉ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

೧. ಇಕ್ಬಾಲರಿಗೆ ಇಂಗ್ಲಿಷ್ ಭಾಷೆ ಕಲಿಸಿದವರು ______________

೨. ಕವಿ ಇಕ್ಬಾಲರು ______________ ವಿಷಯದ ಅಧ್ಯಾಪಕರಾಗಿದ್ದರು.

೩. ಕವಿ ಇಕ್ಬಾಲರ ಮೊಟ್ಟಮೊದಲ ಕವನ ಸಂಗ್ರಹ ______________

೪. ಇಕ್ಬಾಲರು ಜಾತಿಜಾತಿಗಳಲ್ಲಿ ______ ಹುಟ್ಟಿಸುವ ಮಾತು ಆಡದಿರಿ ಎಂದು ಎಚ್ಚರಿಸಿದರು.

©KTBS Not to be republished

ಊ) ‘ಅ’ ಪಟ್ಟಿಯ ಪದಗಳಿಗೆ ‘ಬ’ ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

| ‘ಅ’ ಪಟ್ಟಿ | ‘ಬ’ ಪಟ್ಟಿ |
| --- | --- |
| ೧. ಇಕ್ಬಾಲರ ಗುರು | ಅ) ಷೇಕ್ ನೂರ್ ಮಹಮದ್ |
| ೨. ಇಕ್ಬಾಲರ ದೊಡ್ಡಪ್ಪ | ಆ) ಮೀರ್ ಹಸನ್ |
| ೩. ಇಕ್ಬಾಲರ ತಂದೆ | ಇ) ಷೇಕ್ ಅತಾ ಮಹಮ್ಮದ |
| | ಈ) ಮಹಾತ್ಮ ಗಾಂಧೀಜಿ |

## III. ಭಾಷಾಭ್ಯಾಸ :

ಅ) ಕೆಳಗಿನ ಪದಗಳನ್ನು ಸ್ವಂತ ವ್ಯಾಕದಲ್ಲಿ ಬಳಸಿ ಬರೆಯಿರಿ.

೧. ಆನಂದಬಾಷ್ಪ : ____________________

೨. ದೇಶಪ್ರೇಮಿ : ____________________

೩. ಭದ್ರಕೋಟೆ : ____________________

೪. ಮಾತೃಭೂಮಿ : ____________________

ಆ) ಟಿಪ್ಪಣಿ ಬರೆಯಿರಿ.

೧. ಹಿಮಾಲಯ

೨. ಗಂಗಾನದಿ

೩. ಭ್ರಾತೃತ್ವ

ಇ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

**ಮಾದರಿ** : ಭೂಮಿ – ಪೃಥ್ವಿ ; ಬುವಿ ; ಇಳೆ ; ವಸುಂಧರೆ ; ಧರೆ ; ನೆಲ.

೧. ಜಗ – ____________________

೨. ರವಿ – ____________________

೩. ಆಕಾಶ – ____________________

೪. ಮಾತೃ – ____________________

©KTBS Not to be republished

## IV. ಸೈದ್ಧಾಂತಿಕ ವ್ಯಾಕರಣ :

### ಅ) ನಾಮಪದಗಳು :

೧) ರಹೀಮ ಪುಸ್ತಕ ಓದುತ್ತಿದ್ದಾನೆ.

೨) ಬೇಲೂರಿನಲ್ಲಿ ಸುಂದರ ದೇವಾಲಯವಿದೆ.

೩) ಮೇಜಿನ ಮೇಲೆ ಹೂಗುಚ್ಛವಿದೆ.

ಈ ವಾಕ್ಯಗಳಲ್ಲಿ ಗೆರೆ ಎಳೆದ ಪದಗಳು ವ್ಯಕ್ತಿ, ಸ್ಥಳ ಹಾಗೂ ವಸ್ತುವಿನ ಹೆಸರನ್ನು ಸೂಚಿಸುತ್ತವೆ. ಇಂತಹ ಪದಗಳನ್ನು 'ನಾಮಪದ' ಎನ್ನುವರು.

### ಆ) ನಾಮಪದದ ವಿಧಗಳು :

೧. ಪರ್ವತ, ಶಾಲೆ, ನಗರ, ನದಿ, ಹಳ್ಳಿ – ಇವು ರೂಢಿಯಿಂದ ಬಂದ ಹೆಸರುಗಳು. ಆದುದರಿಂದ ಇವು ರೂಢನಾಮಗಳು.

೨. ರಮೇಶ, ರುಕ್ಮಿಣಿ, ಬೆಂಗಳೂರು, ಹಿಮಾಲಯ – ಇವು ಇಟ್ಟ ಹೆಸರುಗಳು. ಆದುದರಿಂದ ಇವು ಅಂಕಿತನಾಮಗಳು.

೩. ವ್ಯಾಪಾರಿ, ಶಿಕ್ಷಕ, ವೈದ್ಯ – ಇವು ಅರ್ಥಕ್ಕೆ ಅನುಗುಣವಾಗಿ ಬರುವ ಹೆಸರುಗಳು. ಅದುದರಿಂದ ಇವು ಅನ್ವರ್ಥಕ ನಾಮಗಳು.

### ಇ) ಕೆಳಗಿನ ಪದಗಳಲ್ಲಿ ರೂಢನಾಮ, ಅಂಕಿತನಾಮ ಹಾಗೂ ಅನ್ವರ್ಥನಾಮ ಪದಗಳನ್ನು ವಿಂಗಡಿಸಿ ಬರೆಯಿರಿ.

| | | | |
|---|---|---|---|
| ಕೃಷ್ಣ | ಕೋಲಾರ | ಪಟ್ಟಣ | ಮರ |
| ಬಂಡೆಗಲ್ಲು | ಮೂಕ | ಕಾಡು | ವಿದ್ವಾಂಸ |
| ಕಾವೇರಿ | ನದಿ | ಹೊಳೆ | ಕುರುಡ |

## V. ಚಟುವಟಿಕೆಗಳು :

ಅ. 'ಸಾರೇ ಜಹಾಂಸೆ ಅಚ್ಛಾ' ಈ ದೇಶಭಕ್ತಿ ಗೀತೆಯ ಧ್ವನಿಸುರುಳಿ ಕೇಳಿ ಆನಂದಿಸಿ. ನೀವೂ ರಾಗವಾಗಿ ಹಾಡಿರಿ. ಶಾಲಾ ಸಮಾರಂಭದಲ್ಲಿ ಈ ಗೀತೆಗೆ ನೃತ್ಯ ಮಾಡಿರಿ.

ಆ. ರವೀಂದ್ರನಾಥ ಠಾಕೂರ, ಬಂಕಿಮಚಂದ್ರ ಚಟರ್ಜಿ, ಕುವೆಂಪು ಮೊದಲಾದ ಕವಿಗಳ ದೇಶಭಕ್ತಿ ಗೀತೆಗಳನ್ನು ಹಾಗೂ ಅವರ ಭಾವಚಿತ್ರಗಳನ್ನು ಸಂಗ್ರಹ ಮಾಡಿರಿ.

* * * * *

© KTBS Not to be republished

# ಪಾಠ – ೧೭

## ನಿನ್ನಲ್ಲೂ ಅದ್ಭುತ ಶಕ್ತಿಯಿದೆ

**ಪಾಠ ಪ್ರವೇಶ :** ಕೆಲವರಲ್ಲಿ ವಿಶಿಷ್ಟ ಶಕ್ತಿ ಇರುತ್ತದೆ. ಆ ಶಕ್ತಿಯ ಪ್ರದರ್ಶನ ಆಗುವುದು ಇತರರು ಅವರನ್ನು ಹುರಿದುಂಬಿಸಿದಾಗ. ಇತರರ ಪ್ರೇರಕ ಮಾತುಗಳು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ ಹಾಗೂ ಎಂತಹ ಕಠಿಣ ಕೆಲಸವನ್ನಾದರೂ ಮಾಡಲು ಮನಸ್ಸು ಉತ್ಸುಕವಾಗುತ್ತದೆ. ನೀವು ಕ್ರೀಡೆಗಳಲ್ಲಿ ಕ್ರೀಡಾಪಟುಗಳನ್ನು ಹುರಿದುಂಬಿಸುವ ಪರಿಯನ್ನು ನೋಡಿರಬಹುದು. ಇಂತಹ ಹಲವು ಪ್ರಸಂಗಗಳು ಪುರಾಣ, ಇತಿಹಾಸಗಳಲ್ಲೂ ಕಾಣಸಿಗುತ್ತವೆ. ನೀವು ರಾಮಾಯಣದ ಕಥೆಯನ್ನು ಕೇಳಿದ್ದೀರಿ. ರಾವಣ ಸೀತೆಯನ್ನು ಕದ್ದು ಲಂಕೆಯಲ್ಲಿ ಬಂಧಿಸಿರುತ್ತಾನೆ. ಆಗ ರಾಮ ಲಕ್ಷ್ಮಣರು ವಾನರ ಸೇನೆಯೊಂದಿಗೆ ಸಮುದ್ರದ ಬಳಿ ಬರುತ್ತಾರೆ. ಆದರೆ ಸಮುದ್ರವನ್ನು ದಾಟಿ ಲಂಕೆಯನ್ನು ತಲುಪುವುದು ಹೇಗೆ? ಎಂದು ಚಿಂತಿತರಾಗುತ್ತಾರೆ. ಆಗ ಹನುಮ ಸಮುದ್ರವನ್ನು ಜಿಗಿದು ಲಂಕೆಯನ್ನು ತಲುಪುತ್ತಾನೆ. ಹನುಮಂತನ ಈ ಸಾಹಸಕ್ಕೆ ಪ್ರೇರಣೆ ದೊರೆತದ್ದು ಹೇಗೆ? ಇಲ್ಲಿರುವ ಕಥೆಯನ್ನು ಓದಿ....


ಕಣ್ಣು ನಿಲುಕುವವರೆಗೂ ಎಲ್ಲೆಡೆ ನೀರು. ನೀಲ ಸಾಗರ. ಆಕಾಶವೂ ನೀಲಿ. ಸಮುದ್ರವೂ ನೀಲಿ. ಬೆಳ್ಳಂಬೆಳದಿಂಗಳು ಸಹ ನೀಲಿಯಂತೆ ಭಾಸವಾಗುತ್ತಿತ್ತು. ಅದರ ಮಧ್ಯೆ ಪುಟಿದೇಳುವ ಆನೆಯಾಕಾರದ ಅಲೆಗಳು ದಡಕ್ಕೆ ಅಪ್ಪಳಿಸುತ್ತಿವೆ. ಅಬ್ಬಾ! ಏನಿದರ ರುದ್ರ ನರ್ತನ! ಏನಿದರ ಭಯಂಕರ ಧ್ವನಿ! ಭೀತಿ ಹುಟ್ಟಿಸುತ್ತಿತ್ತು.

ಕಪಿವೀರರು ಲಂಕೆಗೆ ಹಾರಿ ಸೀತಾಮಾತೆಯನ್ನು ಕಾಣಬೇಕೆಂಬ ಉತ್ಸಾಹದಿಂದ ಬಂದಿದ್ದರು. ಆದರೆ ಭಯಾನಕ ಕಡಲನ್ನು ಕಂಡರು. ಈ ಸಮುದ್ರ ಈಜಲು ಸಾಧ್ಯವಿಲ್ಲ. ಹಾರಲು ಸಾಧ್ಯವಿಲ್ಲ. ಅವರಿಗೆ ದಿಕ್ಕು ತೋಚದಾಯಿತು. ಮುಂದಿನ ದಾರಿ ಯೋಚಿಸುತ್ತಾ ವಿಶ್ರಮಿಸಿದರು. ಬೆಳಕು ಹರಿಯಿತು.

ಅರುಣೋದಯ. ಕಪಿಗಳೆಲ್ಲ ದಿನಚರಿ ಮುಗಿಸಿ ಫಲಾಹಾರ ಮಾಡಿದವು. ಮತ್ತೆ ಸಮುದ್ರದ ಬಳಿಗೆ ಬಂದವು. ಜಾಂಬವಂತನು, ಆಹಾ ! ಕಡಲು ಶಾಂತವಾಗಿದೆ. ಆದರೆ ಲಂಕೆಯೇ ಕಾಣದು. ದಕ್ಷಿಣ ದಿಕ್ಕಿಗೆ ಲಂಕೆ ಇದೆ ಎಂಬ ಕಲ್ಪನೆ ಬಿಟ್ಟರೆ, ಬೇರೇನೂ ತಿಳಿಯದು. ಹೇಗೆ ಹೋಗುವುದು? ಎಂದು ಯೋಚಿಸಹತ್ತಿದ. ಹನುಮ ಸಾಗರವನ್ನು ದಿಟ್ಟಿಸಿ ನೋಡಿದ. ನಿರಾಸೆ ಕವಿಯಿತು. ಅಲ್ಲಿಂದ ಮುಂದೆ ನಡೆದು ಒಂದು ಕೋಡುಗಲ್ಲನ್ನು ಏರಿ ಚಿಂತಿತನಾದನು.

ಇತ್ತ ಕಪಿಗಳು ಸೇರಿದವು. ಸಮುದ್ರವನ್ನು ಜಿಗಿಯಲು ತಮಗಿರುವ ಶಕ್ತಿ–ಸಾಮರ್ಥ್ಯವನ್ನು ಹೇಳತೊಡಗಿದವು. ನಾನು ಹತ್ತು ಯೋಜನ ಜಿಗಿಯಬಲ್ಲೆನೆಂದು ಮರಿಕಪಿಯೊಂದು ಹೇಳಿದರೆ, ಇನ್ನೊಂದು ಕಪಿ ಮೂವತ್ತು ಯೋಜನ ಹಾರಬಲ್ಲೆ ಎಂದಿತು. ಮಗದೊಂದು ನಲವತ್ತು ಯೋಜನ ಎಂದಿತು. ಅಂಗದ ಹಾಗೂ ಜಾಂಬವರಿಗೆ ಕಪಿಗಳ ಮಾತುಗಳನ್ನು ಕೇಳಿ ಹೆಮ್ಮೆಯೆನಿಸಿತು. ಆ ಕಠಿಣ ಪ್ರಸಂಗದಲ್ಲಿಯೂ ಅವರಾಡುವ ಮಾತುಗಳು ಆಶಾದಾಯಕವಾಗಿದ್ದವು. ಆದರೆ ಲಂಕೆಗೆ ಹೋಗಲು ಈ ಸಾಮರ್ಥ್ಯ ಸಾಲದು ಎಂಬ ಅರಿವು ಅವರಿಗಿತ್ತು.

©KTBS Not to be republished



ಅವರೆಲ್ಲರೂ ಸೇರಿ ಹನುಮನ ಹತ್ತಿರ ಬಂದರು "ಹನುಮ ಸಮುದ್ರ ಜಿಗಿಯುವ ಬದಲು ಇಲ್ಲಿ ಏಕೆ ಸುಮ್ಮನೆ ಕುಳಿತಿರುವೆ" ಎಂದಾಗ ಹನುಮನು "ಜಾಂಬವಂತರೆ ನಾನೊಂದು ಕಪಿ, ಚಿಕ್ಕವನು. ಟೊಂಗೆಯಿಂದ ಟೊಂಗೆಗೆ ಹಾರಬಲ್ಲೆ, ಮರದಿಂದ ಮರಕ್ಕೆ ಜಿಗಿಯಬಹುದು. ಆದರೆ ಈ ಮಹಾಸಾಗರವನ್ನು ನಾನು ಹೇಗೆ ಹಾರಬಲ್ಲೆ. ಗೇಲಿ ಮಾಡದಿರಿ ಎಂದನು."

"ಹನುಮ, ನೀನು ಚಿಕ್ಕವನಾದರೂ ನೀನೊಬ್ಬ ಕಪಿರಾಜನ ಮಗ. ನಿನ್ನಪ್ಪ ಬಹಳ ಶೂರ" ಎಂದ ಅಂಗದ.

"ಅಪ್ಪ ರಾಜನಾದ ಮಾತ್ರಕ್ಕೆ ಮಗನಿಗೆ ಆ ಶಕ್ತಿ ಇರಲು ಸಾಧ್ಯವೇ? ನನ್ನ ಶಕ್ತಿಯನ್ನು ನಾನು ಬಲ್ಲೆ. ಅಂಗದರೆ, ನಾನೊಂದು ಕೋತಿ. ಹಲವು ಸ್ನೇಹಿತರೊಡನೆ ಸೇರಿ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಜಿಗಿದಿರಬಹುದು. ಮರವನ್ನು ಏರಿ ಕೊಂಬೆಯ ತುದಿಯಲ್ಲಿಯ ಹಣ್ಣನ್ನು ತಿಂದಿರಬಹುದು. ಹಲವರನ್ನು ಬಾಲಬೀಸಿ ಹೊಡೆದಿರಬಹುದು. ಕೆಲವರನ್ನು ಕಂಡು ಅಣಕಿಸಿ ದಕ್ಕಿಸಿಕೊಂಡಿರಬಹುದು. ಇಷ್ಟು ಮಾತ್ರಕ್ಕೆ ನಾನು ಶಕ್ತಿವಂತನೆಂದು ಭಾವಿಸುವುದು ಸರಿಯಲ್ಲ."

"ಹನುಮ, ನಿನ್ನ ಶಕ್ತಿ ಸಾಮರ್ಥ್ಯ ನಿನಗಿಂತ ನಾವು ಚೆನ್ನಾಗಿ ಬಲ್ಲೆವು. ನೀನು ಮಗುವಾಗಿದ್ದಾಗ ಅರುಣನನ್ನು ಕೆಂಪು ಹಣ್ಣೆಂದು ಭಾವಿಸಿದೆ. ಅದನ್ನು ತಿನ್ನಲು ಆಕಾಶಕ್ಕೆ ಜಿಗಿದೆ. ಸೂರ್ಯನ ನೆತ್ತಿಗೆ ಹಾರಿದ್ದೆ. ನಿನಗೆ ಬಹಳ ಶಕ್ತಿಯಿದೆ. ನೀನು ಮನಸ್ಸು ಮಾಡಿದರೆ ಸಪ್ತ ಸಾಗರವನ್ನು

© KTBS Not to be republished

ಈಜಬಲ್ಲೆ. ಹಿಮಾಲಯವನ್ನೆತ್ತಿ ಕುಕ್ಕಬಲ್ಲೆ. ಪಾತಾಳವನ್ನು ಕಲಕಬಲ್ಲೆ. ನಿನಗೆ ಈ ಚಿಕ್ಕ ಸಮುದ್ರ ಸಮಸ್ಯೆಯಾಗದು."

"ಹಿರಿಯರಾದ ಜಾಂಬವರೇ ! ನಾನು ಮಗುವಾಗಿದ್ದಾಗ ಅರುಣನನ್ನು ಕೆಂಪು ಹಣ್ಣೆಂದು ಬಗೆದು ಆಕಾಶಕ್ಕೆ ಹಾರಿದ್ದು ನಿಜ! ಆದರೆ ಸಾಧಿಸಿದ್ದೇನು? ಇಂದ್ರನಿಂದ ಹೊಡೆತ ತಿಂದು ಭೂಮಿಗೆ ಬೀಳಲಿಲ್ಲವೆ? ಇಂದು ಎಲ್ಲಿದೆ ನನಗೆ ಅಂದಿನ ಶಕ್ತಿ? ಸುಮ್ಮನೆ ಹೊಗಳಬೇಡಿ. ನನ್ನಿಂದ ಸಮುದ್ರ ಉಲ್ಲಂಘಿಸುವುದು ಆಗದು. ನಾನೊಬ್ಬ ಸಾಮಾನ್ಯ."

"ಆಂಜನೇಯ, ನಿನ್ನ ಶಕ್ತಿ ನಿನಗೆ ತಿಳಿಯದು. ಸೂರ್ಯದೇವನಿಂದ ಶಸ್ತ್ರವಿದ್ಯೆ ಕಲಿತೆ. ಗುರು ದಕ್ಷಿಣೆಯಲ್ಲಿ ಅವನ ಮಗ ಸುಗ್ರೀವನ ಪ್ರಾಣ ರಕ್ಷಣೆ ಮಾಡಿದೆ. ಋಷ್ಯಮೂಕ ಪರ್ವತದಲ್ಲಿ ಶ್ರೀರಾಮನನ್ನು ಸಂಧಿಸಿ ಮೈತ್ರಿ ಸ್ಥಾಪಿಸಿದೆ. ಶ್ರೀರಾಮನ ಆಶೀರ್ವಾದ ನಿನಗಿದೆ."

"ವರ್ಣನೆ ಸಾಕು ಮಾಡಿ ಅಂಗದರೆ. ಆಶೀರ್ವಾದ ಮಾತ್ರಕ್ಕೆ ಎಲ್ಲ ಸಾಧನೆ ಸಾಧ್ಯವಿಲ್ಲ. ನೀವೇಕೆ ಪ್ರಯತ್ನಿಸಬಾರದು? ತಮಗೂ ದೇವರ ಆಶೀರ್ವಾದವಿದೆ."

"ಸತ್ಯ. ಖಂಡಿತ ನಮಗೆಲ್ಲ ದೇವರ ಆಶೀರ್ವಾದವಿದೆ. ಆದರೆ ಆ ಕೆಲಸಕ್ಕೆ ಬೇಕಾದ ದೈಹಿಕ ಶಕ್ತಿ ಇಲ್ಲ. ಅದಕ್ಕಿಂತ ಹೆಚ್ಚಾಗಿ ಮಾನಸಿಕ ಸಾಮರ್ಥ್ಯ ಬೇಕು. ಅದಿಲ್ಲ ನಮ್ಮಲ್ಲಿ"

"ಮಾನಸಿಕ ಸಾಮರ್ಥ್ಯ ಏನು ಹಾಗೆಂದರೆ?" ಹನುಮ ಕೇಳಿದ.

"ಹುಟ್ಟಿನಿಂದ ಎಲ್ಲರಿಗೂ ಮಾನಸಿಕ ಸಾಮರ್ಥ್ಯವಿರುತ್ತದೆ. ಅದನ್ನು ಕೆಲವರು ಬೆಳೆಸಿಕೊಳ್ಳುತ್ತಾರೆ, ದುಡಿಸಿಕೊಳ್ಳುತ್ತಾರೆ. ಹೊಸಹೊಸ ಪ್ರಯೋಗಗಳಿಗೆ ಒಡ್ಡಿಕೊಂಡು ಗಟ್ಟಿಗೊಳಿಸಿಕೊಳ್ಳುತ್ತಾರೆ. ನಿನಗೆ ಆ ಸಾಧನೆ ಇದೆ. ಆತ್ಮವಿಶ್ವಾಸ ಹೊಂದು. ನಿನ್ನಲ್ಲಿ ಶಕ್ತಿಯಿದೆ. ಆದಕಾರಣ ಕೋಡುಗಲ್ಲಿನ ಮೇಲೆ ಕುಳಿತು ಯೋಚನೆ ಮಾಡುತ್ತಿರುವೆ"

"ಅದು ನಿರಾಶೆಯ ಸೂಚಕವಲ್ಲವೇ?"

"ಹುಚ್ಚಪ್ಪ, ಅದು ನಿರಾಶೆಯಲ್ಲ, ಚಿಂತನೆ! ನೀನಾರೆಂಬುದನ್ನು ಅರಿತುಕೋ. ನಿನ್ನಲ್ಲಿ ಪರಮಶಕ್ತಿಯಿದೆ. ಒಮ್ಮೆ ಮೈಕೊಡವಿ ಸೆಟೆದು ನಿಲ್ಲು. ನನ್ನಲ್ಲೂ ಸಮುದ್ರ ಉಲ್ಲಂಘಿಸುವ ಶಕ್ತಿಯಿದೆ ಎಂದು ಒಮ್ಮೆ ಕೂಗು. ದೊಡ್ಡ ಹೆಜ್ಜೆಯಿಡು. ನೀನು ಬೆಳೆಯುವೆ. ಶ್ರೀರಾಮನ ಆದೇಶ ನೆನಪಿಸಿಕೊ. ಸೀತಾಮಾತೆಯನ್ನು ಕಾಣುವ ಹಂಬಲ ತೀವ್ರವಾಗಲಿ. ಜಗಜ್ಜನನಿಗೆ ಮಹಾ ಮಾಂಗಲ್ಯ ಮುದ್ರಿಕೆ ಕೊಡುವುದು ಬೇಡವೇ? ಇದು ನಿನ್ನ ಕರ್ತವ್ಯವಲ್ಲವೇ? ನಿನ್ನ ಬಗ್ಗೆ ಅವಿಶ್ವಾಸ ಬೇಡ" ಎಂದು ಅಂಗದ ಉತ್ತೇಜನ ನೀಡಿದ.

"ಆಂಜನೇಯ, ನೀನು ಮಾನಸಿಕವಾಗಿ ಸಿದ್ಧನಾಗು, ನೀನು ಕಿಂಕರ ಅಲ್ಲ. ಶಂಕರ. ಏಳು ಎದ್ದೇಳು ಜಾಗೃತನಾಗು. ಅಂತರಂಗದ ಕೀಳರಿಮೆ ತೊರೆ. ನೋಡು ಆಗಸದೆಡೆಗೆ, ಆ ನಿನ್ನ ಅರುಣ ಕ್ಷಣ ಕ್ಷಣಕ್ಕೂ ಬೆಳೆದು ಸೂರ್ಯನಾಗಿದ್ದಾನೆ. ಅವನ ಪ್ರಖರತೆ ಗಮನಿಸು. ಸಾವಿರಪಟ್ಟು ಹೆಚ್ಚಿಸಿದ್ದಾನೆ.

©KTBS Not to be republished

ನೀನೋ ಬಲಶಾಲಿ ಮನಸ್ಸಿದ್ದರೆ ಮಾರ್ಗವಿದೆ. ಏಳು ಎಚ್ಚರಾಗು" ಎಂದು ಜಾಂಬವನು ತಿಳಿ ಹೇಳಿದನು.

ಆಗ ಹನುಮಂತನು "ಹೌದು! ಹೌದು! ಕರ್ತವ್ಯಕ್ಕೆ ನನ್ನನ್ನು ಎಚ್ಚರಿಸಿದಿರಿ. ಧನ್ಯವಾದ". ಎಂದು ಎದ್ದು ನಿಂತನು. ಶ್ರೀರಾಮನನ್ನು ನೆನಪಿಸಿಕೊಂಡನು. ವಾನರ ನಾಯಕರನ್ನು ವಂದಿಸಿದ. ನನ್ನಲ್ಲೂ ಶಕ್ತಿಯಿದೆ ಎಂದು ವಿಶ್ವಾಸದಿಂದ ಮನಸ್ಸಿನಲ್ಲಿ ಹೇಳಿಕೊಂಡನು. ನೋಡು ನೋಡುವಷ್ಟರಲ್ಲಿ ತ್ರಿವಿಕ್ರಮನಾಗಿ ಬೆಳೆದ. ಅವನ ಬಾಲ ಬೆಟ್ಟದಂತೆ ಹಬ್ಬಿತು. ಅದರ ಮೇಲೆ ಕುಳಿತು, ಆ ಮಹಾಸಾಗರ ನೋಡಿದ. ಅದೊಂದು ಪುಟ್ಟ ಸರೋವರದಂತೆ ಕಂಡಿತು. ಅದರಲ್ಲೊಂದು ಲಂಕೆ ಚಿಕ್ಕ ನಡುಗಡ್ಡೆ, ಸುತ್ತಲೂ ದಟ್ಟ ಕಾಡು. ಆ ಅರಣ್ಯದಲ್ಲಿ ರಾಕ್ಷಸಿಯರ ನಡುವೆ ತಾಯಿ ಸೀತಾದೇವಿಯನ್ನು ನೋಡಿದ. ತಕ್ಷಣ ಹೋ ಎಂದು ಕೂಗಿದ. 'ಅಮ್ಮ ನಾನು ಬಂದೆ' ಎಂದು ಸಾಗರ ಉಲ್ಲಂಘನೆಗಾಗಿ ಜಿಗಿದ. ಇದನ್ನು ಕಂಡು ಅಂಗದ ಜಾಂಬವರು ಜೈ ಶ್ರೀರಾಮ ಎಂದರು. "ಜಯ ಹನುಮಾನ್" ಎಂದು ಜಯಕಾರ ಹಾಕಿದರು.

* * * * *

## ಅಭ್ಯಾಸ

### I. ಪದಗಳ ಅರ್ಥ :

**ಅಂತರಂಗ** – ಒಳಗಿನ
**ಅಮಿತ** – ಮಿತಿಯಿಲ್ಲದ
**ಅರುಣ** – ಸೂರ್ಯ
**ಅರುಣೋದಯ** – ಸೂರ್ಯೋದಯ
**ಆಶಾದಾಯಕ** – ಭರವಸೆಯಿಂದ ಕೂಡಿದ
**ಉಲ್ಲಂಘನೆ** – ಹಾರು; ದಾಟು.
**ಕಡಲು** – ಸಮುದ್ರ
**ಕವಿ** – ಮುಸುಕು
**ಕೆರಳಿದ** – ಸಿಟ್ಟಿಗೆದ್ದ
**ಕಿಂಕರ** – ಸೇವಕ
**ಕೀಳರಿಮೆ** – ಹೀನತನ
**ಜಗಜ್ಜನನಿ** – ಲೋಕಮಾತೆ
**ಟೊಂಗೆ** – ಕೊಂಬೆ
**ತಡಿ** – ದಡ
**ದಂಡೆ** – ದಡ; ತೀರ.
**ದಕ್ಕಿಸಿ** – ಪಡೆದು
**ದಿಕ್ಕು ತೋಚದಾಯಿತು** – ದಾರಿ ಕಾಣದಾಯಿತು
**ದಿಟ್ಟಿಸಿ** – ವೀಕ್ಷಿಸಿ
**ನಿಲುಕು** – ಕಣ್ಣಿಗೆ ಕಾಣುವಷ್ಟು ದೂರ.
**ಬಲ್ಲೆವು** – ತಿಳಿದಿದ್ದೇವೆ
**ಮೈಕೊಡವು** – ಧೈರ್ಯದಿಂದ ಮೇಲೇಳು.
**ಮಿಗಿಲು** – ಹೆಚ್ಚು
**ಯೋಜನ** – ಸುಮಾರು ಒಂಬತ್ತು ಮೈಲು
**ರುದ್ರನರ್ತನ** – ಭಯಂಕರ ಆರ್ಭಟ
**ವರ್ಣನೆ** – ಹೊಗಳಿಕೆ; ಬಣ್ಣನೆ.
**ಹಂಬಲ** – ಆಸೆ; ಉತ್ಸಾಹ.

©KTBS Not to be republished

**ಟಿಪ್ಪಣಿ :**

೧. **ಜಾಂಬವಂತ** – (ಕರಡಿ) ಇವನು ಕೃತಯುಗ, ತ್ರೇತಾಯುಗ, ದ್ವಾಪರಯುಗದಲ್ಲಿಯೂ ಇದ್ದನೆಂಬ ಪ್ರತೀತಿ.

೨. **ಅಂಗದ** – ವಾಲಿ ಮತ್ತು ತಾರೆಯ ಮಗ.

೩. **ಹನುಮ** – ಅಂಜನಾದೇವಿಯ ಮಗ.

೪. **ಸಪ್ತಸಾಗರ** – ಏಳು ಸಮುದ್ರಗಳು : ಲವಣ (ಉಪ್ಪು), ಇಕ್ಷು (ಕಬ್ಬಿನ ಹಾಲು), ಸುರ (ಮದ್ಯ), ಸರ್ಪಿಸ್ (ತುಪ್ಪ), ದಧಿ (ಮೊಸರು), ಕ್ಷೀರ (ಹಾಲು) ಜಲ (ನೀರು).

೫. **ಇಂದ್ರ** – ದೇವಲೋಕದ ಒಡೆಯ.

## II. ಪ್ರಶ್ನೆಗಳು :

**ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಸಮುದ್ರದ ಅಲೆಗಳು ಯಾವ ಗಾತ್ರದಲ್ಲಿದ್ದವು?
೨. ಕಪಿವೀರರು ಲಂಕೆಯಲ್ಲಿ ಯಾರನ್ನು ಕಾಣುವ ಉತ್ಸಾಹದಲ್ಲಿದ್ದರು?
೩. ಮಗುವಾಗಿದ್ದಾಗ ಹನುಮನು ಅರುಣನನ್ನು ಏನೆಂದು ಭಾವಿಸಿದನು?
೪. ಆಂಜನೇಯನು ಸೂರ್ಯದೇವನಿಂದ ಯಾವ ವಿದ್ಯೆ ಕಲಿತನು?
೫. ಹನುಮನು ನೋಡು ನೋಡುವಷ್ಟರಲ್ಲಿ ಯಾವ ರೀತಿ ಬೆಳೆದನು?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸಮುದ್ರ ಅಲೆಗಳ ರುದ್ರ ನರ್ತನವನ್ನು ವರ್ಣಿಸಿರಿ.
೨. ಜಾಂಬವಂತನು ಕಡಲನ್ನು ನೋಡಿ ಏನೆಂದು ಯೋಚಿಸಿದನು?
೩. ಕಪಿಗಳು ತಮ್ಮ ಶಕ್ತಿ ಸಾಮರ್ಥ್ಯಗಳ ಬಗ್ಗೆ ಏನೆಂದು ಮಾತನಾಡುತ್ತಿದ್ದವು?
೪. ಮಾನಸಿಕ ಸಾಮರ್ಥ್ಯದ ಬಗ್ಗೆ ಹನುಮಂತನಿಗೆ ಏನು ಹೇಳಲಾಯಿತು?
೫. ತ್ರಿವಿಕ್ರಮನಾಗಿ ಬೆಳೆದ ಹನುಮನಿಗೆ ಸಾಗರ ಹಾಗೂ ಲಂಕೆ ಹೇಗೆ ಕಂಡವು?

©KTBS Not to be republished

**ಇ) ಈ ಕೆಳಗಿನ ಪ್ರಶ್ನೆಗಳಿಗೆ ಆರು–ಏಳು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಹನುಮಂತನು ತನ್ನ ಶಕ್ತಿ ಸಾಮರ್ಥ್ಯದ ಬಗ್ಗೆ ಅಂಗದನಿಗೆ ಏನು ಹೇಳಿದನು?
೨. ಅಂಗದನು ಹನುಂಮಂತನಲ್ಲಿ ಯಾವ ಶಕ್ತಿ ಸಾಮರ್ಥ್ಯಗಳಿವೆ ಎಂದು ತಿಳಿಸಿದನು?
೩. ಅಂಗದನು ಹನುಮಂತನನ್ನು ಯಾವ ಮಾತುಗಳಿಂದ ಉತ್ತೇಜಿಸಿದನು?
೪. ಜಾಂಬವಂತನು ಆಂಜನೇಯನಿಗೆ ಏನೆಂದು ತಿಳಿ ಹೇಳಿದನು?
೫. ಹನುಮಂತನು ಸಾಗರವನ್ನು ಜಿಗಿಯಲು ಹೇಗೆ ಸಾಧ್ಯವಾಯಿತು?

**ಈ) ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು? ತಿಳಿಸಿರಿ.**

೧. **"ಹನುಮ ಸಮುದ್ರ ಜಿಗಿಯುವ ಬದಲು ಇಲ್ಲಿ ಏಕೆ ಸುಮ್ಮನೆ ಕುಳಿತಿರುವೆ."**
ಯಾರು ಹೇಳಿದರು? ____________________
ಯಾರಿಗೆ ಹೇಳಿದರು? ____________________

೨. **"ನಿನ್ನಲ್ಲಿ ಪರಮಶಕ್ತಿಯಿದೆ."**
ಯಾರು ಹೇಳಿದರು? ____________________
ಯಾರಿಗೆ ಹೇಳಿದರು? ____________________

೩. **"ಏಳು ಎದ್ದೇಳು ಜಾಗೃತನಾಗು."**
ಯಾರು ಹೇಳಿದರು? ____________________
ಯಾರಿಗೆ ಹೇಳಿದರು? ____________________

## III. ಭಾಷಾಭ್ಯಾಸ :

**ಅ) ಕೆಳಗಿನ ವಾಕ್ಯಗಳಲ್ಲಿರುವ ಪದಗಳನ್ನು ಹಿಂದೆ ಮುಂದೆ ಮಾಡಿದೆ. ನೀವು ಅವುಗಳನ್ನು ಸರಿಪಡಿಸಿ ಬರೆಯಿರಿ.**

೧. ಅಪ್ಪಳಿಸುತ್ತಿವೆ ಆನೆಯಾಕಾರದ ದಂಡೆಗೆ ಅಲೆಗಳು

೨. ಮಾತ್ರಕ್ಕೆ ಅಪ್ಪ ಇರಲು ರಾಜನಾದ ಮಗನಿಗೆ ಸಾಧ್ಯವೇ? ಆ ಶಕ್ತಿ

೩. ಸಾಮರ್ಥ್ಯವಿರುತ್ತದೆ ಹುಟ್ಟಿನಿಂದ ಮಾನಸಿಕ ಎಲ್ಲರಿಗೂ

೪. ಮಾರ್ಗವಿದೆ ನೀನೋ ಏಳು ಬಲಶಾಲಿ ಎಚ್ಚರಾಗು ಮನಸ್ಸಿದ್ದರೆ

©KTBS Not to be republished

**ಆ) ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

ದಿಟ್ಟಿಸಿ : ______

ಅರುಣೋದಯ : ______

ಹೆಮ್ಮೆ : ______

ಆಶಾದಾಯಕ : ______

ಕೀಳರಿಮೆ : ______

**ಇ) ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

**ಮಾದರಿ :** ದಂಡೆ – ತೀರ ; ದಡ ; ತಡಿ.

೧. ಸಮುದ್ರ – ______

೨. ಆಕಾಶ – ______

೩. ತಾಯಿ – ______

೪. ಸೂರ್ಯ – ______

೫. ಗೆಳೆಯ – ______

**ಈ) ಟಿಪ್ಪಣಿ ಬರೆಯಿರಿ.**

೧. ಮಾನಸಿಕ ಸಾಮರ್ಥ್ಯ :

______

______

______

______

______

______

©KTBS Not to be republished

೨. ಉತ್ತೇಜನ :

______________________________________________

______________________________________________

______________________________________________

______________________________________________

______________________________________________

______________________________________________

ಉ) ವಿರುದ್ಧ ಪದ ಹೇಳುವ ಆಟ. ಒಬ್ಬರು ಒಂದು ಪದ ಹೇಳಬೇಕು, ಇನ್ನೊಬ್ಬರು ಅದಕ್ಕೆ ವಿರುದ್ಧಪದ ಹೇಳಬೇಕು.

**ಮಾದರಿ :** (ಒಬ್ಬನು) (ಇನ್ನೊಬ್ಬನು)

| | | |
|---|---|---|
| ಕತ್ತಲು | X | ಬೆಳಕು |
| ತಂಪು | X | ______ |
| ಹತ್ತಿರ | X | ______ |
| ______ | X | ______ |
| ______ | X | ______ |

ಊ) ಪದ ಕಟ್ಟುವ ಆಟ. ಪ್ರತಿ ಪದದ ಕೊನೆಯ ಅಕ್ಷರದಿಂದ ಹೊಸದೊಂದು ಪದ ಕಟ್ಟಿರಿ.

**ಮಾದರಿ :** ರಾಮ > ಮರ > ರಜ > ಜನ > ನಮನ > ನಗು > ಗುಣ

೧. ರಾಜ >

೨. ಹನುಮ >

೩. ಆನೆ >

೪. ಆಕಾಶ >

೫. ನಾಯಕ >

©KTBS Not to be republished

ಋ) ಆವರಣದಲ್ಲಿ ಸೂಚಿಸಿರುವಂತೆ ಉತ್ತರಿಸಿರಿ.

| | |
|---|---|
| ೧. ಅವನು ಶಾಲೆಗೆ ಹೋಗುತ್ತಾನೆ (ಸ್ತ್ರೀಲಿಂಗ ರೂಪದಲ್ಲಿ ಬರೆಯಿರಿ) | |
| ೨. ಕಣ್ಣು ಕಾಣಿಸದವನು (ಒಂದೆ ಪದದಲ್ಲಿ ಹೇಳಿರಿ) | |
| ೩. ಅದು ನಿರಾಶೆಯ ಸೂಚಕವಲ್ಲವೇ (ಸೂಕ್ತ ಲೇಖನ ಚಿಹ್ನೆ ಹಾಕಿರಿ.) | |
| ೪. ನಾನು ಬೆಂಗಳೂರಿಗೆ ಹೋಗುತ್ತೇನೆ (ಪ್ರಶ್ನಾರ್ಥಕ ವಾಕ್ಯ ಮಾಡಿರಿ) | |

ಎ) ಕೆಳಗೆ ನೀಡಿರುವ ಪದಗಳನ್ನು ಬಿಡಿಸಿ ಬರೆಯಿರಿ.

೧. ಆನೆಯಾಕಾರ = ______ + ______

೨. ಮಟಿದೇಳು = ______ + ______

೩. ಫಲಾಹಾರ = ______ + ______

೪. ಕೋಡುಗಲ್ಲು = ______ + ______

೫. ಅರುಣೋದಯ = ______ + ______

## IV. ಸೈದ್ಧಾಂತಿಕ ವ್ಯಾಕರಣ :

### ಅ) ಭಾವಸೂಚಕ ವಾಕ್ಯಗಳು :

ಸಂತೋಷ, ಸಿಟ್ಟು, ಕೋಪ, ದುಃಖ, ನಿರಾಸೆ, ಜುಗುಪ್ಸೆ, ಆಶ್ಚರ್ಯ, ಭಯ, ಆತಂಕ ಇವೆಲ್ಲವೂ ನಮ್ಮ ಮನಸ್ಸಿನ ಭಾವನೆಗಳು. ಈ ಭಾವನೆಗಳು ಉಂಟಾದಾಗ ಅದನ್ನು ಮಾತಿನಲ್ಲಿ ಹೇಗೆ ವ್ಯಕ್ತಪಡಿಸುತ್ತೇವೆ? ಈ ಕೆಳಗಿನ ವಾಕ್ಯಗಳನ್ನು ಹಾಗೂ ಲೇಖನ ಚಿಹ್ನೆಗಳನ್ನು ಗಮನಿಸಿರಿ.

೧. ಆಹಾ! ಆಗುಂಬೆಯ ಸೂರ್ಯಾಸ್ತ ಎಷ್ಟು ಚೆಂದ!

೨. ಅಯ್ಯೋ! ಸಮುದ್ರದಲ್ಲಿ ಸೂರ್ಯ ಜಿಗಿದೆ ಬಿಟ್ಟ.

೩. ಹೋ! ಅವರೇ ಗೆದ್ದು ಬಂದರು.

©KTBS Not to be republished

೪. ಸತ್ಯವನ್ನು ಕೊಂದರು ಈ ಜನ!

೫. ಅಬ್ಬಾ ! ಏನಿದರ ರುದ್ರ ನರ್ತನ ! ಏನಿದರ ಭಯಂಕರ ಧ್ವನಿ!

ಈ ರೀತಿಯ ವಾಕ್ಯಗಳನ್ನು **ಭಾವಸೂಚಕ ವಾಕ್ಯಗಳು** ಎಂದು ಕರೆಯುತ್ತೇವೆ. ಇದೇರೀತಿ ಇನ್ನೂ ಹಲವು ಭಾವಸೂಚಕ ವಾಕ್ಯಗಳನ್ನು ನೀವು ಪಟ್ಟಿಮಾಡಿರಿ.

## V. ಚಟುವಟಿಕೆಗಳು :

**೧. ಭಾರತದಲ್ಲಿ ಹಲವು ವ್ಯಕ್ತಿಗಳು ಮೌಲ್ಯಗಳಿಗೆ ಹೆಸರಾಗಿದ್ದಾರೆ. ಅವರನ್ನು ನೆನಪಲ್ಲಿಡಿ.**

| ವ್ಯಕ್ತಿ | ಮೌಲ್ಯ |
|---|---|
| ಶ್ರವಣಕುಮಾರ | ಪಿತೃಭಕ್ತಿ |
| ಹರಿಶ್ಚಂದ್ರ | ಸತ್ಯ |
| ದುರ್ಯೋಧನ | ಛಲ |
| ಭೀಮ | ಬಲ |
| ದಧೀಚಿ | ತ್ಯಾಗ |
| ಕರ್ಣ | ದಾನ |
| ಮೀರಾ | ಭಕ್ತಿ |
| ಕೃಷ್ಣ–ಕುಚೇಲ | ಸ್ನೇಹ |
| ಮಹಾವೀರ | ಅಹಿಂಸೆ |

೨. ಮಕ್ಕಳ ರಾಮಾಯಣ ಕಥಾ ಪುಸ್ತಕಗಳನ್ನು ಓದಿರಿ.

೩. ಮಕ್ಕಳಿಗೆ ಹನುಮ, ಅಂಗದ, ಜಾಂಬವಂತರ ವೇಷ ಹಾಕಿಸಿ ಹನುಮಂತನೊಡನೆ ನಡೆಯುವ ಸಂಭಾಷಣೆ ಹೇಳಿಸಿ.

* * * * *

©KTBS Not to be republished

ಭಾಗ – ೩

# ಪೂರಕ ಓದು

## ೧. ಪತ್ರ ಲೇಖನ

**ಪಾಠ ಪ್ರವೇಶ :** ಮಕ್ಕಳೇ, ಇಂದು ಆಧುನಿಕ ಮಾಧ್ಯಮಗಳಾದ ಮೊಬೈಲ್ ಫೋನ್, ಇಂಟರ್‌ನೆಟ್ ಇದ್ದರೂ ಪತ್ರದ ಮೂಲಕ ನಮ್ಮ ಭಾವನೆಗಳನ್ನು, ವಿಚಾರಗಳನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳುವ ರೂಢಿ ಇದೆ. ನಾವು ಪತ್ರಗಳನ್ನು ಬರೆಯುವ ಅಭ್ಯಾಸವನ್ನು ಬಿಡಬಾರದು. ಪತ್ರಗಳು ವಿಶಿಷ್ಟವಾದ ಆನಂದವನ್ನು ನೀಡುತ್ತವೆ. ನಮ್ಮ ಬರವಣಿಗೆಯ ಸಾಮರ್ಥ್ಯವನ್ನು ವೃದ್ಧಿಸುತ್ತವೆ. ಒಳ್ಳೆಯ ಬರಹಗಾರರು ಆಗುವುದಕ್ಕೆ ಸಹಾಯಮಾಡುತ್ತವೆ. ಇಲ್ಲಿರುವ ಪತ್ರಗಳನ್ನು ಓದಿರಿ.....

### ಅಮ್ಮನಿಗೊಂದು ಪತ್ರ

ಬೆಂಗಳೂರು
ದಿನಾಂಕ ೧೦-೦೧-೨೦೧೭

ನನ್ನ ಪ್ರೀತಿಯ ಅಮ್ಮನಿಗೆ,

ನಿಮ್ಮ ಮಗಳಾದ ತೇಜಸ್ವಿನಿ ಮಾಡುವ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ನಿಮ್ಮ ಆರೋಗ್ಯದ ಬಗ್ಗೆ ಆಗಾಗ ಪತ್ರ ಬರೆಯುತ್ತಿರಿ.

ಕಳೆದ ಶನಿವಾರ ಡಿಸೆಂಬರ್ ೨೪ ರಂದು ಶಾಲಾ ಪ್ರವಾಸ ಏರ್ಪಡಿಸಿದ್ದರು. ಬೆಳಗಿನ ಜಾವ ೪.೦೦ ಗಂಟೆಗೆ ಬಸ್ಸು ಹತ್ತಿದೆವು. ಎಲ್ಲರಲ್ಲೂ ಉತ್ಸಾಹ ಸಡಗರ ತುಂಬಿತ್ತು. ಪ್ರವಾಸಿ ಬಸ್ ನಮ್ಮೆಲ್ಲರನ್ನು ಹೊತ್ತು ಬೆಂಗಳೂರಿನಿಂದ ಹೊರಟಿತು. ಸುಮಾರು ೧೭೫ ಕಿ.ಮೀ. ದೂರದಲ್ಲಿರುವ ಶ್ರವಣಬೆಳಗೊಳವನ್ನು ತಲುಪಿತು. ಆಗ ಬೆಳಗಿನ ೮.೦೦ ಗಂಟೆಯ ಸಮಯ. ಅಲ್ಲಿನ ಅತಿಥಿ ಗೃಹವೊಂದರಲ್ಲಿ ನಮ್ಮ ನಿತ್ಯ ಕರ್ಮಗಳನ್ನು ಮುಗಿಸಿದೆವು. ಉಪಾಹಾರ ಸೇವಿಸಿ ಬೆಟ್ಟದತ್ತ ಹೆಜ್ಜೆ ಹಾಕಿದೆವು.

ಸುಮಾರು ೬೫೦ ಕ್ಕೂ ಹೆಚ್ಚು ಮೆಟ್ಟಿಲುಗಳು. ಭೂ ಮಟ್ಟದಿಂದ ಸುಮಾರು ೪೭೦ ಅಡಿಗಳಷ್ಟು ಎತ್ತರ. ನಾವೆಲ್ಲರೂ ಜಿಂಕೆಯಂತೆ ಓಡುತ್ತಾ–ಜಿಗಿಯುತ್ತಾ ಬೆಟ್ಟ ಹತ್ತಿದೆವು. ಬೆಟ್ಟದ ತುದಿಯನ್ನು ಏರಿದಾಗ ೫೮ ಅಡಿ ಎತ್ತರದ ಭವ್ಯವಾದ ಗೊಮ್ಮಟೇಶ್ವರನ ವಿಗ್ರಹ. ಚಾವುಂಡರಾಯನು ಅದನ್ನು ಕೆತ್ತಿಸಿರುವನೆಂದು ಹೇಳುತ್ತಾರೆ. ಅದು ಏಕಶಿಲಾ ಸುಂದರ ಮೂರ್ತಿ. ತಲೆ ಎತ್ತಿ ನೋಡಬೇಕು. ಬಾಹುಬಲಿ ವಿಗ್ರಹದ ಮುಂದೆ ನಾವು ಬಹಳ ಚಿಕ್ಕವರಾಗಿ ಕಾಣುತ್ತೇವೆ. ಮುಗುಳ್ನಗೆಯನ್ನು ಸೂಸುತ್ತಿರುವ ಆ ಮುಖ ಅದ್ಭುತವಾಗಿದೆ. ಗೊಮ್ಮಟನ ಮೂರ್ತಿಗೆ ಹಬ್ಬಿದ ಶಿಲಾಲತೆ ವಿಶೇಷ ಸೌಂದರ್ಯ ನೀಡಿದೆ. ನೋಡಿದಷ್ಟೂ ನೋಡಬೇಕು ಎನಿಸುತ್ತದೆ. ಕಣ್ಣು ತಣಿಯದು, ಮನಸ್ಸು

©KTBS Not to be republished

ಮಾಗದು. ಆ ಬೃಹತ್ ವಿಗ್ರಹ ಕೆತ್ತಿದ ಶಿಲ್ಪಿಗೆ ನಾವೆಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು. ಮನಸ್ಸಿಲ್ಲದ ಮನಸ್ಸಿನಿಂದ ಬೆಟ್ಟ ಇಳಿದೆವು. ಮಧ್ಯಾಹ್ನ ಊಟ ಮಾಡಿದ ನಂತರ ಮರದ ಕೆಳಗೆ ಒಂದಿಷ್ಟು ವಿಶ್ರಾಂತಿ ಪಡೆದೆವು. ನಾನು ನನ್ನ ಗೆಳತಿಯರು ಕೆಲವು ಅಪರೂಪದ ಕಲಾಕೃತಿಗಳನ್ನು ಕೊಂಡುಕೊಂಡೆವು. ನಂತರ ಬಸ್ಸನ್ನು ಏರಿ ಕುಳಿತ ನಮಗೆ ಬೆಂಗಳೂರು ತಲುಪಿದ್ದು ಗೊತ್ತಾಗಲೇ ಇಲ್ಲ. ಗೊಮ್ಮಟ ಮೂರ್ತಿಯ ಹಸನ್ಮುಖತೆ ದಿವ್ಯ ಸಂದೇಶವನ್ನು ನೀಡುತ್ತಿತ್ತು. ಅಮ್ಮ ಇದೊಂದು ಅಪರೂಪದ ಯಾತ್ರಾ ಸ್ಥಳ. ಮತ್ತೊಮ್ಮೆ ನಿಮ್ಮ ಜೊತೆ ಶ್ರವಣಬೆಳಗೊಳಕ್ಕೆ ಹೋಗಬೇಕು ಅನಿಸುತ್ತಿದೆ. ಈ ಪತ್ರದ ಜೊತೆಗೆ ಕೆಲವು ಫೋಟೋಗಳನ್ನು ಕಳಿಸಿರುವೆನು. ಅಪ್ಪನಿಗೆ ವಂದನೆಗಳನ್ನು ತಿಳಿಸು.

ನಿಮ್ಮ ಪ್ರೀತಿಯ ಮಗಳು
**ತೇಜಸ್ವಿನಿ**
ಬನಶಂಕರಿ ಸರ್ಕಾರಿ ಹಿ.ಪ್ರಾ.ಶಾಲೆ
ಹೊಸಕೆರೆಹಳ್ಳಿ, ಬೆಂಗಳೂರು–೮೫

ಇವರಿಗೆ :
**ಶ್ರೀಮತಿ ರಾಜೇಶ್ವರಿ**
ಮನೆ ನಂ. ೧೦, ಜಿ.ಎಸ್.ಶಿವರುದ್ರಪ್ಪ ರಸ್ತೆ,
ಶಿಕಾರಿಪುರ – ೫೭೭೪೭೨
ಶಿವಮೊಗ್ಗ ಜಿಲ್ಲೆ



## ಅಮ್ಮನಿಂದ ಮಗಳಿಗೆ ಮರುಪತ್ರ.

ದಿನಾಂಕ : ೧೫-೦೧-೨೦೧೬
ಶಿಕಾರಿಪುರದಿಂದ

ಪ್ರೀತಿಯ ತೇಜಸ್ವಿನಿಗೆ,

ನಾವು ಇಲ್ಲಿ ಆರೋಗ್ಯದಿಂದ ಇದ್ದೇವೆ. ನಿನ್ನೆ ದಿನ ನಿನ್ನ ಪತ್ರ ಬಂದು ತಲುಪಿತು. ನೀವು ಶಾಲೆಯಿಂದ ಪ್ರವಾಸಕ್ಕೆ ಹೋದ ವಿಚಾರ ತಿಳಿದು ಸಂತೋಷವಾಯಿತು. ನೀನು ಶ್ರವಣಬೆಳಗೊಳ ನೋಡಿದ ಬಗ್ಗೆ ತುಂಬಾ ಚೆನ್ನಾಗಿ ಬರೆದಿರುವೆ. ನೀನು ಕಳಿಸಿದ ಫೋಟೋಗಳನ್ನು ಮತ್ತು ನೀನು ಬರೆದ ಪತ್ರವನ್ನು ನೋಡಿದ ನಿನ್ನ ಅಪ್ಪ "ನೋಡು, ನಮ್ಮ ಮಗಳು ಎಷ್ಟು ಚೆನ್ನಾಗಿ ಪತ್ರ ಬರೆದಿದ್ದಾಳೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ನೀನು ಪತ್ರವನ್ನು ಬರೆಯುತ್ತಾ ಇರು. ನಿನ್ನ ಬರವಣಿಗೆ ಬಹಳಷ್ಟು ಸುಧಾರಿಸುತ್ತದೆ.

ಆರೋಗ್ಯದ ಕಡೆ ಗಮನ ಕೊಡು. ಅಭ್ಯಾಸದತ್ತ ಒಲವು ಇರಲಿ. ವ್ಯರ್ಥವಾಗಿ ಸಮಯ ಕಳೆಯಬೇಡ. ಚೆನ್ನಾಗಿ ಊಟಮಾಡು, ಆಟ ಆಡು, ನಿದ್ರೆಮಾಡು. ಅದೇ ರೀತಿ ಚೆನ್ನಾಗಿ ಓದಿ ಕೀರ್ತಿ ಸಂಪಾದಿಸಬೇಕು. ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಇರುತ್ತದೆ ಎಂಬುದನ್ನು ನೆನಪಿಡು. ನಿನಗೆ ಒಳ್ಳೆಯದಾಗಲಿ.....ಆಗಾಗ ಪತ್ರ ಬರೆಯುತ್ತಿರು.

ಶುಭಾಶೀರ್ವಾದಗಳೊಂದಿಗೆ,

ನಿನ್ನ ಪ್ರೀತಿಯ ಅಮ್ಮ
ರಾಜೇಶ್ವರಿ

ಇವರಿಗೆ,
ಕು॥ ತೇಜಸ್ವಿನಿ
೬ ನೇ ತರಗತಿ
ಬನಶಂಕರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಹೊಸಕೆರೆಹಳ್ಳಿ, ಬೆಂಗಳೂರು – ೫೬೦ ೦೮೫.

ಮೇಲಿನ ಪತ್ರವನ್ನು ಗಮನಿಸಿ, ಅದರಂತೆ ನೀವೂ ಭೇಟಿಕೊಟ್ಟ ಸ್ಥಳದ ಬಗ್ಗೆ, ನಿಮಗಾದ ಅನುಭವಗಳನ್ನು ನಿಮ್ಮ ಅಮ್ಮನಿಗೆ ಇಲ್ಲವೇ ಅಣ್ಣನಿಗೆ ಪತ್ರ ಬರೆದು ತಿಳಿಸಿರಿ.

* * * * *

©KTBS
Not to be republished

# ೨. ಪುಣ್ಯಕೋಟಿ

ಈ ಭೂಮಂಡಲದ ಮಧ್ಯದಲ್ಲಿ, ಹಸಿರು ವನಗಳಿಂದ ಕೂಡಿದ ಸುಂದರ ನಾಡು ಕರ್ನಾಟಕ. ಈ ನಾಡಿನಲ್ಲಿ ಕಾಳಿಂಗನೆಂಬ ಗೊಲ್ಲನು ದನಗಳನ್ನು ಕಾಯುತ್ತಿದ್ದನು. ಪ್ರತಿದಿನ ಎಳೆಯ ಮಾವಿನ ಮರದ ಕೆಳಗೆ ಕುಳಿತು ಕೊಳಲನೂದಿ ಹಸುಗಳನ್ನು ಹೀಗೆ ಕರೆಯುತ್ತಿದ್ದನು.

ಗಂಗೆ ಬಾರೆ ಗೌರಿ ಬಾರೆ
ತುಂಗಭದ್ರೆ ತಾಯಿ ಬಾರೆ
ಕಾಮಧೇನು ನೀನು ಬಾರೆಂದು
ಪ್ರೇಮದಲಿ ಗೊಲ್ಲ ಕರೆದನು.

ಗೊಲ್ಲನ ಕೊಳಲ ಗಾನವನ್ನು ಕೇಳಿ ಎಲ್ಲ ಹಸುಗಳು ಬರುತ್ತಿದ್ದವು. ಅವನು ಅವುಗಳ ಹಾಲು ಕರೆಯುತ್ತಿದ್ದನು. ಅನಂತರ ಹಸುಗಳನ್ನು ಮೇಯಿಸಲು ಅಡವಿಯ ಬೆಟ್ಟ ಪ್ರದೇಶಕ್ಕೆ ತೆರಳುತ್ತಿದ್ದನು. ಗೋವುಗಳು ಹುಲ್ಲು ಮೇಯ್ದು ಸಂಜೆ ಮನೆಗೆ ಮರಳುತ್ತಿದ್ದವು. ಗೊಲ್ಲನು ಆ ಹಸುಗಳನ್ನು ದೊಡ್ಡಿಯೊಳಗೆ ಕಟ್ಟುತ್ತಿದ್ದನು.

ಆ ಬೆಟ್ಟ ಪ್ರದೇಶದಲ್ಲಿ ಅರ್ಬುತನೆಂಬ ಹುಲಿ ವಾಸವಾಗಿತ್ತು. ಒಮ್ಮೆ ಏಳು ದಿನವಾದರೂ ಅದಕ್ಕೆ ಆಹಾರ ದೊರೆಯಲಿಲ್ಲ. ಅದು ತನ್ನ ಗವಿಯ ಬಾಗಿಲಲ್ಲಿ ನಿಂತು ಕಾಯುತ್ತಿತ್ತು. ಹಸುಗಳ ಗಂಟೆಯ ಸದ್ದು ಕೇಳಿ ಎಚ್ಚರವಾಯಿತು. ಗುಡುಗು ಸಿಡಿಲಿನಂತೆ ರಭಸದಿಂದ ಬಂದಿತು. ಹಸುಗಳ ಮೇಲೆ ಬಿದ್ದಿತು. ಹಸುಗಳು ಹೆದರಿ ಓಡಿದವು. ಹುಲಿ ತನಗೆ ಆಹಾರ ಸಿಗಲಿಲ್ಲವೆಂದು ಹಲ್ಲು ಕಡಿಯಿತು.

ಅದೇ ಸಮಯಕ್ಕೆ ಸರಿಯಾಗಿ ಪುಣ್ಯಕೋಟಿ ಎಂಬ ಹಸು ತನ್ನ ಕಂದನನ್ನು ನೆನೆದು ಮೆಲ್ಲಮೆಲ್ಲನೆ ಬರುತ್ತಿತ್ತು. ಹುಲಿ ಪುಣ್ಯಕೋಟಿಯನ್ನು ಅಡ್ಡಗಟ್ಟಿ ನಿಂತಿತು. ನಿನ್ನನ್ನು ತಿಂದುಬಿಡುವೆ ಎಂದು ಹೇಳಿತು.

ಪುಣ್ಯಕೋಟಿಯು ವಿನಯದಿಂದ ದೊಡ್ಡಿಯಲ್ಲಿರುವ ತನ್ನ ಕಂದನಿಗೆ ಹಾಲುಣಿಸಿ ಬರುವೆನೆಂದು ಹುಲಿಗೆ ಹೇಳಿತು. ಹಸಿದ ವೇಳೆಯಲ್ಲಿ ಸಿಕ್ಕಿರುವ ಆಹಾರವನ್ನು ಬಿಡುವುದು ಮೂರ್ಖತನ, ಅಲ್ಲದೆ ಜಗತ್ತಿನಲ್ಲಿ ಹುಲಿಗೆ ಆಹಾರವಾಗಲು ಯಾರಾದರೂ ಬರುತ್ತಾರೆಯೇ? ಎಂದು ಗಹಗಹಿಸಿತು. ಆಗ ಆ ಹಸು ದೈನ್ಯದಿಂದ ಹೀಗೆ ಹೇಳಿತು.

ಸತ್ಯವೇ ನಮ್ಮ ತಾಯಿತಂದೆ
ಸತ್ಯವೇ ನಮ್ಮ ಬಂಧುಬಳಗ
ಸತ್ಯ ವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು.

ಎಂದು ಹಸು ಹೇಳಿತು. ಹಸು ಹೇಳುವ ರೀತಿಯಿಂದ ಹುಲಿಗೂ ಕರುಣೆ ಬಂದಿತು. ಹಸುವಿಗೆ ಹೋಗಿ ಬರಲು ಅನುಮತಿ ಕೊಟ್ಟಿತು. ಪುಣ್ಯಕೋಟಿ ತನ್ನ ಕಂದನಿಗೆ ಹಾಲುಣಿಸಿತು. ಹುಲಿಗೆ

©KTBS Not to be republished

ಆಹಾರವಾಗಿ ಹೋಗುವ ವಿಚಾರ ಕರುವಿಗೆ ತಿಳಿಸಿತು. ಆಗ ಕರು ತಾಯಿಯನ್ನು ತಬ್ಬಿಕೊಂಡು ಹೀಗೆ ಗೋಳಾಡಿತು.

ಅಮ್ಮ ನೀನು ಸಾಯಲೇಕೆ
ನನ್ನ ತಬ್ಬಲಿ ಮಾಡಲೇಕೆ
ಸುಮ್ಮನಿಲ್ಲಿಯೆ ನಿಲ್ಲೆನುತ್ತ
ಅಮ್ಮನಿಗೆ ಕರು ಹೇಳಲು

ಪುಣ್ಯಕೋಟಿ ತಾನು ಕೊಟ್ಟ ಭಾಷೆಗೆ ತಪ್ಪಲಾರೆನು, ಬೇರೆ ಯಾವ ಯೋಚನೆಯನ್ನು ಮಾಡಲಾರೆನು. ಕೊಟ್ಟ ಮಾತಿಗೆ ತಪ್ಪಿ ನಡೆದರೆ ಆ ಭಗವಂತನು ಮೆಚ್ಚುವುದಿಲ್ಲ ಎಂದು ಕರುವನ್ನು ತಬ್ಬಿ ಕಣ್ಣೀರಿಟ್ಟಿತು. ಇತರ ಹಸುಗಳಿಗೆ ಕರುವಿನ ರಕ್ಷಣೆಯನ್ನು ವಹಿಸಿ ಈ ರೀತಿ ಮೊರೆಯಿಟ್ಟಿತು.

ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು.

ಪುಣ್ಯಕೋಟಿ ಕಡೆಯ ಬಾರಿ ತನ್ನ ಕಂದನನ್ನು ತಬ್ಬಿಕೊಂಡಿತು. ನಂತರ ಬೇಗ ಬೇಗ ಹುಲಿಯ ಗವಿಯ ಬಾಗಿಲೊಳು ಬಂದು ನಿಂತು



© KTBS Not to be republished

ಖಂಡವಿದೆಕೋ ಮಾಂಸವಿದೆಕೋ
ಗುಂಡಿಗೆಯ ಬಿಸಿರಕ್ತವಿದೆಕೋ
ಚಂಡವ್ಯಾಘ್ರನೆ ನೀನಿದೆಲ್ಲವ
ಉಂಡು ಸಂತಸದಿಂದಿರು.

ಕೊಟ್ಟ ಮಾತಿಗೆ ತಪ್ಪದೆ, ಹಿಂತಿರುಗಿ ಬಂದ ಹಸುವನ್ನು ಕಂಡು, ಹುಲಿಗೆ ಆಶ್ಚರ್ಯವಾಯಿತು. ಅದು ಮರಳಿ ಬರುವುದೆಂಬ ನಿರೀಕ್ಷೆ ಹುಲಿಗೆ ಇರಲಿಲ್ಲ. ಹಸುವಿನ ನಿಷ್ಠೆ, ಪ್ರಾಮಾಣಿಕತೆಯನ್ನು ಕಂಡ ಹುಲಿ ಈ ರೀತಿ ನುಡಿಯಿತು.

ನನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ನಾನೇನ ಪಡೆವೆನು
ಕನ್ನೆಯಿವಳನು ಕೊಂದು ತಿಂದರೆ
ಮೆಚ್ಚನಾ ಪರಮಾತ್ಮನು.

ಎಂದು ಹುಲಿ ಬೆಟ್ಟದಿಂದ ಹಾರಿ ನೆಗೆದು ತನ್ನ ಪ್ರಾಣ ಬಿಟ್ಟಿತು.

* * * * *

## ೩. ಜೀವನೋತ್ಸಾಹ

ಜೀವನೋತ್ಸಾಹ ಎಂದರೆ ಎಲ್ಲಿಲ್ಲದ ಹುರುಪು. ಚೇತನ ಚಿಮ್ಮುವ, ಆಟವಾಡುವ ಸಮಯ. ಕೆಲವರು ಸಣ್ಣಪುಟ್ಟ ಕಾರಣಕ್ಕಾಗಿ, ಪರೀಕ್ಷೆ ಫೇಲಾಯಿತು ಎಂದು ಖಿನ್ನರಾಗುತ್ತಾರೆ. ನಿರಾಶರಾಗುತ್ತಾರೆ. ಇನ್ನೂ ಸಾವೇ ಗತಿ ಎನ್ನುತ್ತಾರೆ. ಅದು ತಪ್ಪು. ಹೊಸ ಹುರುಪಿನಿಂದ ಮುಂದುವರೆಯಬೇಕು. ಅದನ್ನು ಸಾಧಿಸುವ ಛಲ ಇರಬೇಕು.

ಈ ಸಂದರ್ಭ ನೋಡಿ : ಸ್ವಾತಂತ್ರ್ಯ ಹೋರಾಟದ ಕಾಲ. ಭಗತ್‌ಸಿಂಗ್ ಸ್ವಾತಂತ್ರ್ಯಕ್ಕೆ ಅಡ್ಡಿಯಾದ ಇಂಗ್ಲಿಷ್ ಅಧಿಕಾರಿಯನ್ನು ಕೊಂದನು. ಅವನಿಗೆ ಬ್ರಿಟಿಷ್ ಸರ್ಕಾರ ಗಲ್ಲು ಶಿಕ್ಷೆ ವಿಧಿಸಿತು. ಇಂದೋ ನಾಳೆಯೋ ಗಲ್ಲಿಗೇರಿಸುವ ಸಮಯ. ಆಗ ಜೈಲಿನಲ್ಲಿಯೂ ಭಗತ್‌ಸಿಂಗ್ ವ್ಯಾಯಾಮ ಮಾಡುತ್ತಿದ್ದನು. ಇಂದು ಅಥವಾ ನಾಳೆ ಗಲ್ಲಿಗೆ ಏರುವ ನೀನು ಏಕೆ ವ್ಯಾಯಾಮ ಮಾಡುವೆ? ಏನನ್ನು ಸಾಧಿಸುವೆ? ಎಂದು ಇಂಗ್ಲಿಷ್ ಅಧಿಕಾರಿ ಪ್ರಶ್ನಿಸಿದಾಗ ನಾನು ಮರಣ ದೇವತೆಯನ್ನು ನಗುಮೊಗದಿಂದ ಸ್ವಾಗತಿಸಬೇಕಾಗಿದೆ. ನೀವು ನನ್ನ ದೇಹವನ್ನು ಕೊಲ್ಲಬಹುದು. ನನ್ನ ನಂಬಿಕೆಯ ಸ್ವಾತಂತ್ರ್ಯವನ್ನು ಕೊಲ್ಲಲಾರಿರಿ. ರಾಜ್ಯಗಳು ಉರುಳಿ ಹೋಗಬಹುದು. ನಮ್ಮ ನಂಬಿಕೆಗಳು, ಬದ್ಧತೆಗಳು ಅಮರವಾಗಿರಬೇಕು.

ಮಕ್ಕಳೇ ಇದೇ ಜೀವನೋತ್ಸಾಹ. ಸಾವಿಗೂ ಹೆದರದ ನಂಬಿಕೆ, ಇಂತಹ ಬದ್ಧತೆ ನಮ್ಮದಾಗಬೇಕು.

* * * *

©KTBS Not to be republished

## ೪. ತಾಯಿಯ ನೆನಪು



ಅಮ್ಮನ ಬೆಚ್ಚಗಿನ ಮಡಿಲಲ್ಲಿ ಮಲಗಿದ್ದು
ಎದೆ ಹಾಲು ಕುಡಿದು ತೊಡೆಯೇರಿ ಕುಣಿದಿದ್ದು
ಅಮ್ಮನ ಕೈ ಹಿಡಿದು ಮೇಲೆದ್ದು ನಿಂತದ್ದು
ಮೊದಲ ಸಲ ಹೊಸ್ತಿಲುದಾಟಿ ಹೊರಹೋದದ್ದು.

ಅನ್ನಪ್ರಾಶನದಂದು ಅಪ್ಪ ಕಣ್ತುಂಬಿ ಹರಸಿದ್ದು
ಸುತ್ತಲ ಮನೆಯವರಿಗೆ ಅಮ್ಮ ಸಿಹಿ ಹಂಚಿದ್ದು
ಕೈ ಹಿಡಿದು ಅಕ್ಕಿಯಲಿ ಓಂಕಾರ ಬರೆಸಿದ್ದು
ಜನಕೆ ನನ್ನನು ತೋರಿ ಹಿಗ್ಗಿ ಮೈ ಮರೆತಿದ್ದು

ಬದುಕಿನಲಿ ಬಂಗಾರವೆಂದರೆ ಬಾಲ್ಯವೇ ನೋಡಮ್ಮ
ಹೇಗೆ ಮರೆಯಲಿ ಬಾಲ್ಯಕಿಂತ ಸಿಹಿ ನಿನ್ನ ನೆನಪಮ್ಮ

– ಡಾ. ಎಸ್. ಪಿ. ಪದ್ಮಿನಿ ನಾಗರಾಜು

## ೫. ಆಕಾಶ ಬುಟ್ಟಿ



ಆಕಾಶ ಬುಟ್ಟಿ ಮುಗಿಲ ಮುಟ್ಟಿ
ಹಬ್ಬದ ಹರುಷವ ಸಾರುತಿದೆ
ದೀಪವನೆತ್ತಿ ಬೆಳಕನು ಬಿತ್ತಿ
ಮುತ್ತಿದ ಕತ್ತಲೆ ಕಳೆಯುತಿದೆ.

ಚಿಣ್ಣರು ಕಟ್ಟಿದ ಬಿದಿರಿನ ಪುಟ್ಟಿ
'ಆರ್ಯಭಟ'ವನು ಹೋಲುತಿದೆ
ಮಿರಿಮಿರಿ ಮಿಂಚುವ ಪರಿಪರಿ
ಬಣ್ಣದ ಕಾಗದ ಬಟ್ಟೆಯ ತೊಟ್ಟಿದೆ

ತಾರೆಯ ಕೂಡ ಗೆಳೆತನ ಮಾಡಲು
ಗಗನದ ಗೂಡಿಗೆ ಹಾರುತಿದೆ
ಅಡಗಿದ ಚಂದ್ರನ ಹುಡುಕಲು
ಮೋಡದ ಒಳಗೇ ಬೆಳಕನು ಬೀರುತಿದೆ

* * * * *

– ಮಹಾಂತಪ್ರಿಯ (ಬಿ.ಶೇಖರಪ್ಪ)

©KTBS Not to be republished